ಸಂಪುಟ 22 ಸಂಚಿಕೆ 24-25
ಜೂನ್ 18, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಷಾರಂಗ



ಪಂಚಾಯ್ತಿ ಚುನಾವಣೆಗಳು: ಮೂಲೆಗುಂಪಾದ ಬಿಜೆಪಿ



3000 ಕೋಟಿ ತಿರಿಗೆ ವಂಚನೆ

ಚರ್ಚ್‌ಗಳಿಗೆ ಬಾಂಬ್



ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಿರುವ ಬಿ.ಟಿ.ರಣದಿವೆ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 37

ಕಾಂ. ರಣದಿವೆಗೆ ಪಾಸ್‌ಪೋರ್ಟ್ ನಿರಾಕರಣೆ

ಪ.ಬಂಗಾಳದಲ್ಲಿನ ನಿರಾಶ್ರಿತರ ಸಮಸ್ಯೆಯ ಬಗ್ಗೆ ಪಕ್ಷದ ಹೋರಾಟದ ಬಗ್ಗೆ ಕಳೆದ ಸಂಚಿಕೆಯಲ್ಲಿ ವಿವರಿಸಿದ ಜ್ಯೋತಿಬಸುರವರು ಈ ಸಂಚಿಕೆಯಲ್ಲಿ ಅಂಚೆ ಮತ್ತು ತಂತಿ ನೌಕರರ ಮುಷ್ಕರದಲ್ಲಿ ಪಕ್ಷದಪಾತ್ರ, ಪಕ್ಷದ ಪತ್ರಿಕೆ 'ಸ್ವಾಧೀನತಾ' ವನ್ನು ಜನಪ್ರಿಯಗೊಳಿಸಿದ್ದು, ಹಾಗೂ ತಮ್ಮ ಚೀನಾ ಹಾಗೂ ಜೆಕೋಸ್ಲೋವಾಕಿಯಾ ಮತ್ತು ಮಾಸ್ಕೋ ಪ್ರವಾಸದ ಬಗ್ಗೆ ಹಾಗೂ ಇ.ಎಂ.ಎಸ್. ಅವರಿಗೆ ಕಲ್ಕತ್ತದಲ್ಲಿ ನೀಡಿದ ಭವ್ಯ ಸ್ವಾಗತದ ಬಗ್ಗೆ ಬರೆದಿದ್ದಾರೆ.....

ಆದರೆ ಸರಕಾರ ನಾಚಿಕೆಗೇಡಿನ ಪ್ರಜಾಪ್ರಭುತ್ವ ವಿರೋಧಿ ನಿಲುವನ್ನು ತೆಗೆದುಕೊಂಡಿತು. ಪ್ರಧಾನಿ ಜವಾಹರಲಾಲ್ ನೆಹರೂ ಮತ್ತು ಕೇಂದ್ರ ಕಾರ್ಮಿಕ ಸಚಿವ ಗುಲ್ಜಾರಿಲಾಲ್ ನಂದಾ ಚಳವಳಿಗಾರರನ್ನು ಬೆದರಿಸಲು ಆರಂಭಿಸಿದರು. ನೆಹರೂ ಮುಷ್ಕರವನ್ನು ವಿರೋಧಿಸಿ ಆಕಾಶವಾಣಿಯಲ್ಲಿ ಭಾಷಣವನ್ನೂ ಮಾಡಿದರು.

ಮುಷ್ಕರ ಕಾನೂನು ಬಾಹಿರ ಎಂದು ಘೋಷಿಸುವ ಹಾಗೂ ಮುಷ್ಕರವನ್ನು ಬೆಂಬಲಿಸುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂಬ ಪ್ರಸ್ತಾವವುಳ್ಳ ಮಸೂದೆಯೊಂದನ್ನು ಅಂದಿನ ಗೃಹಸಚಿವ ವಲ್ಲಭಬಾಯಿ ಪಟೇಲ್ ಲೋಕಸಭೆಯಲ್ಲಿ ಮಂಡಿಸಿದರು.

ನಾವು ಪಶ್ಚಿಮ ಬಂಗಾಳದಲ್ಲಿ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಜಿನೇಶ್ ಬ್ಯಾನರ್ಜಿ ಮತ್ತು ಕೆ.ಜಿ.ಬೋಸ್ ಜಂಟಿ ಸಂಚಾಲಕರಾಗಿದ್ದ ಅಂಚೆ ಮತ್ತು ತಂತಿ ನೌಕರರ ಜಂಟಿ ಹೋರಾಟ ಸಮಿತಿ ಹೇಳಿಕೆಯೊಂದನ್ನು ಹೊರಡಿಸಿತು. ಯಾವುದೇ ಪ್ರಚೋದನೆಗೆ ಬಲಿ ಬೀಳದೆ ಮುಷ್ಕರವನ್ನು ಯಶಸ್ವಿಗೊಳಿಸುವಂತೆ ಅದು ಜನತೆಗೆ ಮನವಿ ಮಾಡಿತು. ನೆಹರೂ ಭಾಷಣವನ್ನು ಸಮಿತಿ ಮುಖಂಡರು ಕಟುವಾಗಿ ಖಂಡಿಸಿದರು.

ಮುಷ್ಕರಕಾರರು ನೆರವಿಗಾಗಿ ನಮ್ಮನ್ನು ಸಂಪರ್ಕಿಸಿದಾಗ ನಾನು ಒಂದು ಹೇಳಿಕೆ ನೀಡಿದೆ. "ಈ ಹೋರಾಟ ಸರಕಾರಿ ನೌಕರರು ಮತ್ತು ಸರಕಾರೇತರ ಸಂಸ್ಥೆಗಳಲ್ಲಿ ಕೆಲಸ ಮಾಡುವವರ ಕಲ್ಯಾಣಕ್ಕೆ ಅತ್ಯಂತ ಮಹತ್ವವಾದುದು. ಹೋರಾಟ ನಿರತ ಜನಸಮೂಹದ ಪರವಾಗಿ ಕಮ್ಯೂನಿಸ್ಟ್ ಪಕ್ಷ ನಿಶ್ಚಿತವಾಗಿಯೂ ಪ್ರಚಾರ ನಡೆಸುತ್ತದೆ. ಈ ಹೋರಾಟಕ್ಕೆ ಬೆಂಬಲ ನೀಡುವುದು ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕನ ಕರ್ತವ್ಯ" ಎಂಬುದು ಹೇಳಿಕೆಯ ಸಾರಾಂಶ.

ಮುಷ್ಕರವನ್ನು ಬೆಂಬಲಿಸಿ ವೆಲ್ಲಿಂಗ್ಟನ್ ಚೌಕದಲ್ಲಿ ಬೃಹತ್ ರ್‍ಯಾಲಿ ನಡೆಯಿತು. ಸಂಪಾದಕ ವಿವೇಕಾನಂದ ಮುಖರ್ಜಿ ಅಧ್ಯಕ್ಷತೆ ವಹಿಸಿದ್ದರು. ರ್‍ಯಾಲಿಯಲ್ಲಿ ನಾನೂ ಮಾತನಾಡಿದೆ. ಪ್ರಸ್ತಾವಿತ ಮಸೂದೆಯ ವಿರುದ್ಧ ಸಾವಿರಾರು ಕೇಂದ್ರ ಸರಕಾರಿ ನೌಕರರು ಮೆರವಣಿಗೆ ನಡೆಸಿದರು.

ಲೋಕಸಭೆಯಲ್ಲಿ ಸಭಾತ್ಯಾಗ

ಆದರೆ ಸರಕಾರ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿಯೇ ತೀರಿತು. ತುರ್ತು ವಿಭಾಗಗಳಲ್ಲಿ ಮುಷ್ಕರವನ್ನು ತಡೆಯಲು ಇದು ಅಗತ್ಯ ಎಂದು ಅದು ಹೇಳಿತು. ಮುಷ್ಕರದ ಸಂದರ್ಭದಲ್ಲಿ ಪ್ರತಿಪಕ್ಷದವರು ಲೋಕಸಭೆಯಲ್ಲಿ ಸಭಾತ್ಯಾಗ ಮಾಡಿದರು. ಮುಷ್ಕರವನ್ನು ನಿಷೇಧಿಸಿ ರಾಷ್ಟ್ರಪತಿ ಸುಗ್ರೀವಾಜ್ಞೆ ಹೊರಡಿಸಿದರು.

ಮುಷ್ಕರನಿರತರ ದೃಢಮನೋಭಾವ ಕಂಡು ಸರಕಾರ ದೃತಿಗೆಟ್ಟಿತು. ಹೀಗಾಗಿ ಅದು ತನ್ನ ನಿಲುವನ್ನು ಸಡಿಲಿಸಿತು. ನೌಕರರ ಮಧ್ಯಂತರ ತೀರ್ಮಾನಕ್ಕೆ ಸಂಬಂಧಿಸಿದಂತೆ ಪ್ರಧಾನಿ ನೆಹರೂ ಮತ್ತು ಸಂಪರ್ಕ ಹಾಗೂ ಸಾರಿಗೆ ಸಚಿವ ಲಾಲ್‌ಬಹಾದೂರ್ ಶಾಸ್ತ್ರಿ ಕೆಲವು ಅನುಕೂಲಕರ ಆಶ್ವಾಸನೆ ನೀಡಿದರು. ಈ ಭರವಸೆಯ ಮೇರೆಗೆ ಮುಷ್ಕರವನ್ನು ಹಿಂದೆ ಪಡೆಯಲಾಯಿತು. ವಾಸ್ತವವಾಗಿ ಮುಷ್ಕರ ನಡೆಯದೇ ಇದ್ದರೂ ಅದಕ್ಕಾಗಿ ನಡೆದ ಸಿದ್ಧತೆಗಳು ಸರಕಾರದ ಕಣ್ಣು ತೆರೆಸಿತು. ಕಾಂಗ್ರೆಸ್ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಬಹಿರಂಗಪಡಿಸಲು ಸಾಧ್ಯವಾಯಿತು.

ಪಶ್ಚಿಮ ಬಂಗಾಳ ಇನ್ನೊಂದು ಹೋರಾಟಕ್ಕೆ ಸಜ್ಜಾಯಿತು. 1957 ಸೆಪ್ಟೆಂಬರ್‌ನಲ್ಲಿ ಒಟ್ಟು 11,000 ಬ್ಯಾಂಕ್ ನೌಕರರು ಮುಷ್ಕರ ನಡೆಸಿದರು. ವೇತನಕ್ಕಾಗಿ ನ್ಯಾಯಮಂಡಳಿಗೆ ಹೋಗುವ ಬದಲು ನೇರ ಮಾತುಕತೆ ನಡೆಸಬೇಕು ಹಾಗೂ ಸೂಕ್ತ ಪರಿಹಾರ ನೀಡಬೇಕು ಎಂಬುದು ಪ್ರಮುಖ ಬೇಡಿಕೆಯಾಗಿತ್ತು.

ಬ್ಯಾಂಕ್ ನೌಕರರ ಹೋರಾಟಕ್ಕೆ ಬೆಂಬಲ ನೀಡಬೇಕು ಹಾಗೂ ಮಾಲಿಕರು ಮತ್ತು ಸರಕಾರ ಅವರ ಬೇಡಿಕೆಗಳನ್ನು ಒಪ್ಪುವಂತೆ ಮಾಡಬೇಕು ಎಂದು ರಾಜ್ಯದ ಜನತೆಗೆ ನಾನು ಮನವಿಮಾಡಿದೆ. ಬ್ಯಾಂಕ್ ಮಾಲಿಕರು ತಮ್ಮ ನಿಲುವನ್ನು ಸಡಿಲಗೊಳಿಸಬೇಕು; ಸರಕಾರದ ದಬ್ಬಾಳಿಕೆ ನೀತಿಯನ್ನು ಬೆಂಬಲಿಸಬಾರದು ಎಂದೂ ಕೋರಿದೆ.

ಬ್ಯಾಂಕ್ ಮುಷ್ಕರವನ್ನು ಬೆಂಬಲಿಸಿ ಬಿ.ಪಿ.ಟಿ.ಯು.ಸಿ. ಪರವಾಗಿ ಮನೋರಂಜನ ರಾಯ್ ಹೇಳಿಕೆ ನೀಡಿದರು. ಇದೇ ವಿಷಯದ ಮೇಲೆ ಅಕ್ಟೋಬರ್ 18 ರಂದು ಸಂಪು ನಡೆಸಲು ಟಿ.ಯು ಸಮಿತಿ ಕರೆ ನೀಡಿತು. ಈ ಮುಷ್ಕರಕ್ಕೆ ಕಮ್ಯೂನಿಸ್ಟ್ ಪಕ್ಷ ಬೆಂಬಲ ನೀಡಿತು. ಪರಿಸ್ಥಿತಿ ಕೈಮೀರುತ್ತಿದೆ ಎಂಬುದನ್ನು ರಾಜ್ಯ ಸರಕಾರ ಮನಗಂಡಿತು. ಪರಿಹಾರಕ್ಕಾಗಿ ಡಾ.ರಾಯ್ ಮಧ್ಯಪ್ರವೇಶ ಮಾಡಿದರು.

ಮುಷ್ಕರ ನಿರತರ ಜತೆ ನೇರ ಮಾತುಕತೆ ನಡೆಸಲು ಬ್ಯಾಂಕ್ ಮಾಲಿಕರು ಒಪ್ಪಿಕೊಂಡರು; ಹರತಾಳವನ್ನು ಮುಂದೂಡಲಾಯಿತು. ಸಂಸದೀಯ ಪಟು ಹಾಗೂ ಬ್ಯಾಂಕ್ ನೌಕರರ ಸಮಿತಿಯ ಪ್ರಭಾತ್ ಕಾರ್ ಮುಷ್ಕರವನ್ನು ವಾಪಸ್ ಪಡೆವ ಹೇಳಿಕೆ ನೀಡಿದರು. 31 ದಿನಗಳ ನಂತರ ಬ್ಯಾಂಕ್‌ಗಳ ವ್ಯವಹಾರ ಪುನರಾರಂಭವಾಯಿತು.

'ಸ್ವಾಧೀನತಾ' ಜನಪ್ರಿಯತೆ

ಇದೇ ವೇಳೆ 'ಸ್ವಾಧೀನತಾ'ದ ಪುಟಗಳನ್ನು 4 ರಿಂದ 8ಕ್ಕೆ ಏರಿಸಲಾಯಿತು. ಪತ್ರಿಕೆಯ ಜನಪ್ರಿಯತೆ ಹೆಚ್ಚುತ್ತಿದ್ದುದೇ ಇದಕ್ಕೆ ಕಾರಣ. ಬಂಡವಾಳಶಾಹಿ ಪತ್ರಿಕೆಗಳು ಕಾಂಗ್ರೆಸ್‌ಗೆ ನೀಡಿದ ನಾಚಿಕೆಗೇಡಿನ ಬೆಂಬಲವನ್ನು ಅರಿಯತೊಡಗಿದ ಜನರು ಸರಿಯಾದ ಮಾಹಿತಿಗಾಗಿ 'ಸ್ವಾಧೀನತಾ' ವನ್ನು ಓದತೊಡಗಿದರು.

'ಸ್ವಾಧೀನತಾ ವಲಯದಿಂದ ಲಾಭ ಮಾಡಬೇಕೆಂಬ ಉದ್ದೇಶವೇನೂ ಪಕ್ಷಕ್ಕೆ ಇರಲಿಲ್ಲ. ಸ್ವಾದೀನತಾ ನೌಕರರು ಪುಕ್ಕಟೆಯಾಗಿ ಅಥವಾ ಅಲ್ಪಸ್ವಲ್ಪ ಸಂಬಳಕ್ಕೆ ದುಡಿಯುತ್ತಿದ್ದರು. ಕಮ್ಯುನಿಸ್ಟ್ ಪಕ್ಷದಲ್ಲಿ ಮಾತ್ರ ಇದು ಸಾಧ್ಯ.

ಹಣಕಾಸಿನ ತೊಂದರೆಗಳಿಂದಾಗಿ ಪತ್ರಿಕೆಯನ್ನು ನಡೆಸುವುದು ಕಷ್ಟವಾಗಿತ್ತು. ಆದರೆ ಪರಿಸ್ಥಿತಿಯನ್ನು ಪರಾಮರ್ಶಿಸಿ, ಸ್ವಾಧೀನತಾದ ಅವಕಾಶವನ್ನು ವಿಸ್ತರಿಸುವ ನಿರ್ಧಾರವನ್ನು ತೆಗೆದುಕೊಂಡೆವು ಹಾಗೂ ಪತ್ರಿಕೆಗಾಗಿ ಎರಡು ಲಕ್ಷ ರೂಪಾಯಿ ನಿಧಿಯನ್ನು ಸ್ಥಾಪಿಸುವಂತೆ ಕರೆ ನೀಡಿದೆವು. ನಿಧಿ ಸಂಗ್ರಹಕ್ಕಾಗಿ ನಾನು 1957 ಸೆಪ್ಟೆಂಬರ್‌ನಲ್ಲಿ ಅಸನ್‌ಸೋಲ್, ಬುರ್ನಾಪುರ ಮತ್ತು ಕಣಿಗುದನೆಗೆ ಭೇಟಿ ನೀಡಿದೆ. ಕಾಮ್ರೇಡ್ ಹರೇಕೃಷ್ಣ ಕೋನಾರ್ ನನ್ನ ಜತೆಗಿದ್ದರು.

1957 ಡಿಸೆಂಬರ್ 26 ರಂದು ಕಲ್ಕತ್ತದ ಪಾರ್ಕ್ ಸರ್ಕಸ್ ಮೈದಾನದಲ್ಲಿ ನಾವೊಂದು ರ್‍ಯಾಲಿ ನಡೆಸಿದೆವು. "ಖಾಲಿ ಜೇಬಾಗಿದ್ದ ಸ್ವಾಧೀನತಾ ಈಗ ನಿಧಿಯೊಂದರ ಒಡೆಯನಾಗಿದೆ. ಲೆಕ್ಕವಿಲ್ಲದಷ್ಟು ಜನರ ಸಣ್ಣ ಪುಟ್ಟ ಕೂಡುಗೆಗಳಿಂದ ಈ ನಿಧಿ ಒಟ್ಟಾಗಿದೆ. ಈಗ ಸ್ವಾಧೀನತಾದ ಪ್ರಗತಿಯನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ" ಎಂದು ಸ್ವಾಧೀನತಾ ಸಂಪಾದಕ ಕಾಮ್ರೇಡ್ ಸರೋಜ್ ಮುಖರ್ಜಿ ರ್‍ಯಾಲಿಯಲ್ಲಿ ಹೇಳಿದರು.

ಆ 'ಸ್ವಾದೀನತಾ' ವಾರ್ಷಿಕೋತ್ಸವ ವೇಳೆ ಅಭಿನಂದನೆ ಸಂದೇಶ ಕಳಿಸುವಂತೆ ಜಗತ್ತಿನ ನಾನಾ ಕಮ್ಯುನಿಸ್ಟ್ ಪಕ್ಷಗಳಿಗೆ ನಾವು ಮನವಿ ಮಾಡಿದೆವು. ಸೋವಿಯತ್ ಒಕ್ಕೂಟ, ಚೀನಾ, ಬ್ರಿಟನ್, ಫ್ರಾನ್ಸ್, ಇಟಲಿ, ಅಮೆರಿಕ, ಇಂಡೋನೇಶ್ಯಾ, ಉತ್ತರ ಕೊರಿಯಾ, ಜಪಾನ್ ಮತ್ತು ಆಸ್ಟ್ರೇಲಿಯಾಗಳಿಂದ ಸಂದೇಶಗಳು ಹರಿದು ಬಂದವು. ಪಕ್ಷದ ಬೇರೆ ರಾಜ್ಯ ಘಟಕಗಳು ಕೂಡ ತಂತಿ ಸಂದೇಶಗಳನ್ನು ಕಳಿಸಿದವು.

ಮಹತ್ವದ ಆಚರಣೆ

ಕಮ್ಯೂನಿಸ್ಟ್ ಪಕ್ಷದ ಪ್ರಗತಿ ಮತ್ತು ಅದರ ವಿಶ್ವ ಮೈತ್ರಿಯ ಸಂದೇಶದಲ್ಲಿ 'ಸ್ವಾಧೀನತಾ'ದ ಆಚರಣೆಗಳು ಒಂದು ಮಹತ್ವದ ಹೆಜ್ಜೆಯಾಗಿತ್ತು.

1957 ನವೆಂಬರ್‌ನಲ್ಲಿ 64 ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಮಾಸ್ಕೋದಲ್ಲಿ ಸಭೆ ಸೇರಿ ಯುದ್ಧ ಮತ್ತು ಶಾಂತಿಗೆ ಸಂಬಂಧಿಸಿ ಒಂದು ಜಂಟಿ ಪ್ರಣಾಳಿಕೆಯನ್ನು ಹೊರಡಿಸಿದವು.

"ಯಾರದೇ ಆದೇಶದ ಮೇಲೆ ಈಗ ಯುದ್ಧ ನಡೆಸಲಾಗದು. ಯುದ್ಧೋನ್ಮಾದವನ್ನು ತಡೆಯಲು ಹಾಗೂ ಶಾಂತಿಯನ್ನು ರಕ್ಷಿಸಲು ಈಗ ಸಾಧ್ಯ. ಶಸ್ತ್ರಾಸ್ತ್ರ ಪೈಪೋಟಿಯನ್ನು ನಿಲ್ಲಿಸಬೇಕು. ಅಣ್ವಸ್ತ್ರಗಳು ಇರಲೇ ಬಾರದು ಹಾಗೂ ಮಿಲಿಟರಿ ಕಾರ್ಯಚರಣೆಗಾಗಿ ಮೈತ್ರಿಕೂಟಗಳನ್ನು ರಚಿಸಿಕೊಳ್ಳಬಾರದು ಎಂದು ಈ ಪ್ರಣಾಳಿಕೆ ಹೇಳಿತು.

ಈ ನಡುವೆ ಕೇರಳದ ಕಮ್ಯುನಿಸ್ಟ್ ಸರಕಾರವನ್ನು ಉರುಳಿಸುವ ಹೀನ ಕೃತ್ಯಕ್ಕೆ ಕಾಂಗ್ರೆಸ್ ಕೈ ಹಾಕಿತು. ಮುಷ್ಕರ ಮುರಿಯಲು ಪೋಲೀಸರನ್ನು ಬಳಸಲು ಕೇರಳ ಸರಕಾರ ನಿರಾಕರಿಸಿದ ಹಿನ್ನೆಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ಕೆದಕಲಾಯಿತು. ಬಹುತೇಕ ಎಲ್ಲಾ ಬಂಡವಾಳಶಾಹಿ ಪತ್ರಿಕೆಗಳು ಇ.ಎಂ.ಎಸ್. ಸರಕಾರದ ವಿರುದ್ಧ ಬರೆದವು. ಕೇರಳದಲ್ಲಿ ಧರ್ಮ ಮತ್ತು ಆಸ್ತಿ ಹಕ್ಕು ಪವಿತ್ರವಾಗಿಲ್ಲ ಎಂದು ಅವು ಪ್ರಚಾರ ಮಾಡಿದವು. ಬ್ರಿಟಿಷ್ ಮತ್ತು ಅಮೆರಿಕದ ಕೆಲವು ಪತ್ರಿಕೆಗಳೂ ಕೇರಳ ಸರಕಾರದ ವಿರುದ್ಧ ತಪ್ಪು ಮಾಹಿತಿಯನ್ನು ಹರಡಿದವು.

ಈ ಅಪಪ್ರಚಾರಕ್ಕೆ ಕಾಂಗ್ರೆಸ್‌ನ ಬೆಂಬಲವಿದ್ದದ್ದು ಸ್ಪಷ್ಟವಾಗಿತ್ತು. ಕಾಮ್ರೇಡ್ ಎಂ.ಎಸ್. ಗೋವಿಂದನ್ ನಾಯರ್ 1957ರ ಆಗಸ್ಟ್‌ನಲ್ಲಿ ಕೇರಳದಿಂದ ಕಲ್ಕತ್ತಕ್ಕೆ ಬಂದರು. ಪಕ್ಷದ ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿ ಆಗಿದ್ದ ಅವರು ವೆಲ್ಲಿಂಗ್ಟನ್ ಚೌಕದಲ್ಲಿ ಬೃಹತ್ ರ್‍ಯಾಲಿಯಲ್ಲಿ ಮಾತನಾಡಿದರು. ನಾನು ಸಭೆಯ ಅಧ್ಯಕ್ಷತೆ ವಹಿಸಿದ್ದೆ.

ಆದರೆ, ಇ.ಎಂ.ಎಸ್. ಅವರೇ ಸ್ವತಃ ಬಂಗಾಳಕ್ಕೆ ಬಂದಾಗ ಜನರ ಸಂತೋಷಕ್ಕೆ ಪಾರವೇ ಇರಲಿಲ್ಲ. ಅಖಿಲ ಭಾರತ ಕೃಷಿಕ ಸಭಾ 1957 ಅಕ್ಟೋಬರ್ 27 ರಂದು ಬೋಂಗಾವ್‌ನಲ್ಲಿ ಎಂಟು ದಿನಗಳ ಅಧಿವೇಶನವನ್ನು ಆರಂಭಿಸಿತು. ಆ ಹೊತ್ತಿಗೆ ಕೃಷಿಕ ಸಭಾದ ಸದಸ್ಯತ್ವ ಏಳು ಲಕ್ಷವನ್ನು ಮೀರಿತ್ತು. ಡಂಡಂ ವಿಮಾನ ನಿಲ್ದಾಣ ಮತ್ತು ಸಭೆಯ ಸ್ಥಳದ ನಡುವಿನ ರಸ್ತೆಯುದ್ದಕ್ಕೂ ಜನರು ನೆರೆದು ಕಾ. ಇ.ಎಂ.ಎಸ್.ರನ್ನು ಸ್ವಾಗತಿಸಿದರು. ಈ ರೀತಿಯಾಗಿ ಕಲ್ಕತ್ತ ಮತ್ತು ಪಶ್ಚಿಮ ಬಂಗಾಳದ ಜನರು ದೇಶದ ಪ್ರಥಮ ಕಮ್ಯುನಿಸ್ಟ್ ಮುಖ್ಯಮಂತ್ರಿಯನ್ನು ಅಭಿನಂದಿಸಿದರು.

ಕಲ್ಕತ್ತದಲ್ಲಿ ನಡೆದ ರ್‍ಯಾಲಿಯಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಈ ರ್‍ಯಾಲಿಯಲ್ಲಿ ನಾವು ಇ.ಎಂ.ಎಸ್.ರನ್ನು ಸತ್ಕರಿಸಿದೆವು. ಇದು ಆ ಕಾಲದ ಅತ್ಯಂತ ದೊಡ್ಡ ರ್‍ಯಾಲಿಯಾಗಿತ್ತು. ಕೇರಳ ಸರಕಾರವನ್ನು ಪದಚ್ಯುತಗೊಳಿಸಲು ಕಾಂಗ್ರೆಸ್ ನಡೆಸುತ್ತಿರುವ ಪಿತೂರಿಯ ವಿರುದ್ಧ ಇ.ಎಂ.ಎಸ್. ಪ್ರಬಲ ವಾದ ಮಂಡಿಸಿದರು. ನಾನೂ ಆ ರ್‍ಯಾಲಿಯಲ್ಲಿ ಮಾತನಾಡಿದೆ.

ಈ ಅವಧಿಯಲ್ಲಿ ನಾನು ಮಾಡಿದ ವಿದೇಶಿ ಪ್ರವಾಸಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಕೇವಲ ನೆನಪಿನ ಆಧಾರದಲ್ಲಿ ನಾನು ಇದನ್ನು ಬರೆಯುತ್ತಿರುವುದರಿಂದ ಪ್ರವಾಸದ ದಿನಾಂಕಗಳಲ್ಲಿ ಸ್ವಲ್ಪ ಹೆಚ್ಚು ಕಮ್ಮಿ ಇದ್ದರೂ ಇರಬಹುದು. ಏನಿದ್ದರೂ ಪ್ರವಾಸಗಳ ವಿವರ ಮಾತ್ರ ಸರಿಯಾಗಿಯೇ ಇದೆ.

1955 ರಲ್ಲಿ ಭಾರತದ ಕಾರ್ಮಿಕ ಸಂಘಗಳ ಪ್ರಾತಿನಿಧಿಕ ತಂಡವೊಂದು ಚೀನಾದ ಕಾರ್ಮಿಕ ಸಂಘಗಳ ಆಹ್ವಾನದ ಮೇರೆಗೆ ಆ ದೇಶಕ್ಕೆ ಭೇಟಿ ನೀಡಿತು. ನಾನು ಎ.ಐ.ಟಿ.ಯು.ಸಿ.ಯನ್ನು ಪ್ರತಿನಿಧಿಸಿದೆ. ಮಹಮದ್ ಇಲ್ಯಾಸ್ ಮೊದಲಾದ ಟ್ರೇಡ್ ಯೂನಿಯನ್ ನಾಯಕರೂ ನಿಯೋಗದಲ್ಲಿದ್ದರು. ಚೌ.ಎನ್.ಲಾಯ್ ಮೊದಲಾದ ಉನ್ನತ ಮುಖಂಡರನ್ನು ಭೇಟಿ ಮಾಡುವ ಸುಯೋಗ ನಮ್ಮದಾಗಿತ್ತು. ಅವರೊಡನೆ ನಾವು ನಾನಾ ವಿಷಯಗಳ ಬಗ್ಗೆ ಚರ್ಚಿಸಿದೆವು ಆ ದೇಶದ ಪ್ರಗತಿ ನಮ್ಮ ಮೇಲೆ ತುಂಬಾ ಪ್ರಭಾವ ಬೀರಿತು.

ನಾವು ಹೋದಲ್ಲೆಲ್ಲ ನಮ್ಮನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಭಾರತಕ್ಕೆ ಹಿಂದಿರುಗಿದ ಮೇ[ಲೆ] ನಮ್ಮ ಅನುಭವಗಳನ್ನು ಪಕ್ಷದ ಸಂಗಾತಿಗಳ ಜ[ತೆ] ನಾನು ಹಂಚಿಕೊಂಡೆ ಜೆಕೊಸ್ಲಾವಾಕೀಯಕ್ಕೆ ಒಂದ[ು] ನಿಯೋಗವನ್ನು ಕಳಿಸಲು ಪಕ್ಷ 1945 ರಲ್ಲಿ ನಿರ್ಧರಿಸಿತು. ಬಿ.ಟಿ. ರಣದಿವೆ, ಎಸ್.ಎ.ಡಾಂಗೆ ಮತ್ತು ನಾನು ನಿಯೋಗದಲ್ಲಿ ಇದ್ದೆವು. ರಣದಿವೆ ಅವರಿಗೆ ಪಾಸ್‌ಪೋರ್ಟ್ ನೀಡಲು ಸರಕಾ[ರ] ನಿರಾಕರಿಸಿತು. ಹೀಗಾಗಿ ಅಂತಿಮವಾಗಿ ನಾನ[ು] ಮತ್ತು ಡಾಂಗೆಯಷ್ಟೆ ಜಕೊಸ್ಲಾವಾಕಿಯಕ್ಕೆ ತೆರಳಿದೆವು.

ಆಗ ಅಜಯ್ ಘೋಷ್ ಸೋವಿಯತ ಒಕ್ಕೂಟದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಮಾಸ್ಕೊದ[ಲ್ಲಿ] ನಾವು ಸ್ವಲ್ಪ ಹೊತ್ತು ಅವರೊಂದಿಗೆ ಕಳೆದೆವು.

ಅವಿಭಜಿತ ಭಾರತ ಕಮ್ಯುನಿಸ್ಟ್ ಪಕ್ಷದ ಕೊನೆಯ ಮಹಾಧಿವೇಶನ 1964 ರಲ್ಲಿ ಆಂಧ್ರ ಪ್ರದೇಶದ ವಿಜಯವಾಡದಲ್ಲಿ ನಡೆಯಿತು. ಪಕ್ಷ ಒಡೆಯುತ್ತದೆ ಎನ್ನುವುದು ಅಧಿವೇಶನ ನಡೆಯುತ್ತಿದ್ದಾಗಲೇ ಸ್ಪಷ್ಟವಾಗಿತ್ತು. ಆದರೆ ಅಜಯ ಘೋಷರ ಕೊನೆ ಕ್ಷಣದ ಪ್ರಯತ್ನಗಳಿಂದಾ[ಗಿ] ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿತ್ತು.

ಈ ಮಹಾಧಿವೇಶನದಲ್ಲೇ ನಾನು ಕಾರ್ಯಸಮಿತಿಯ ಸದಸ್ಯನಾಗಲು ನಿರಾಕರಿಸಿದೆ ಆದರೆ ರಾಷ್ಟ್ರೀಯ ಮಂಡಳಿ ಸದಸ್ಯನಾಗಲು ಒಪ್ಪಿದೆ ಆದರೆ ಹಲವು ಸಂಗಾತಿಗಳು ಪದೇ ಪದೇ ಮನವಿ ಮಾಡಿದ್ದರಿಂದ ಕಾರ್ಯಸಮಿತಿ ಸೇರಲು ನಾನು ಒಪ್ಪಿಕೊಂಡೆ.

ಸ್ಟಾಲಿನ್‌ಗೆ ಮಸಿ ಹಚ್ಚಲು ಯತ್ನ

ಸೋವಿಯತ್ ಒಕ್ಕೂಟದಲ್ಲಿ ಜಗತ್ತಿನೆಲ್ಲೆಡೆಯಲ್ಲೂ ಸ್ಟಾಲಿನ್‌ಗೆ ಅಪಕೀರ್ತಿ ತರಲು ಕ್ರುಶ್ಚೇವ್ ನಾಯಕತ್ವದಲ್ಲಿ ಪ್ರಯತ್ನ ನಡೆಯುತ್ತಿತ್ತು. ಮಾಸ್ಕೊದಲ್ಲಿ ಸೋವಿಯತ್ ನಾಯಕತ್ವದೊಂದಿಗೆ ಮಾತುಕತೆ ನಡೆಸಲು ಸಿಪಿಐ ತ್ರಿಸದಸ್ಯ ನಿಯೋಗವನ್ನು ಕಳಿಸಿತು. ಭೂಪೇಶ್ ಗುಪ್ತ ಗೋವಿಂದನ್ ನಾಯರ್ ಮತ್ತು ನಾನು ನಿಯೋಗದಲ್ಲಿದ್ದೆವು.

(ಮುಂದುವರಿಯುವುದು)

ಕರ್ನಾಟಕ ಈ ವಾರ-ಒಂದು ನೋಟ

ನೋಡುಗ: ಗುರುಶಾಂತ್.ಎಸ್.ವೈ

ರದ್ದುಗೊಳಿಸಲೇಬೇಕಾದ ವಿಧಾನಪರಿಷತ್ತಿನಲ್ಲಿ ಖಾಲಿ ಇದ್ದ 11 ಸ್ಥಾನಗಳಲ್ಲಿ ಕಾಂಗ್ರೆಸ್ 8, ಬಿಜೆಪಿ 2, ಜೆ.ಡಿ.ಯು1, ಹಂಚಿಕೊಂಡಿವೆ. ಈ ಪಕ್ಷಗಳು ಒಳ ಒಡಂಬಡಿಕೆಯನ್ನೇ ಅವಿರೋಧ ಆಯ್ಕೆಯೆಂದೂ ಪ್ರಕಟಿಸಲಾಗಿದೆ. ಸ್ಪರ್ಧೆ ಬಯಸಿದ್ದ ವಾಟಾಳ್ ನಾಗರಾಜ್‌ರವರ ನಾಮಪತ್ರವನ್ನೂ ಹಲವಾರು ತಾಂತ್ರಿಕ ಕಾರಣಗಳಿಂದ ತಿರಸ್ಕರಿಸಲಾಗಿದೆ. ಗೆಲ್ಲುವುದು ಅಸಾಧ್ಯವೆಂದು ತಿಳಿದೂ ವಾಟಾಳ್ ಸ್ಪರ್ಧಿಸಿದ್ದೇಕೆ ಎಂಬುದು ಇನ್ನೂ ತಿಳಿದು ಬಂದಿಲ್ಲವಾದರೂ ಉಳಿದ ಪಕ್ಷಗಳ ನಾಯಕರಂತೂ ನಾಮಪತ್ರ ತಿರಸ್ಕೃತವಾದ್ದರಿಂದ ನೆಮ್ಮದಿ ನಿಟ್ಟುಸಿರಿಟ್ಟಿದ್ದಾರೆ. ಒಂದು ವೇಳೆ ಇವರಲ್ಲಿ ಸ್ಪರ್ಧೆ ಏರ್ಪಟ್ಟಿದ್ದರೆ ಗೆದ್ದವರೆಲ್ಲಾ ಮತಹಾಕಿಸಿಕೊಳ್ಳಲು ಅದೆಷ್ಟು ಕೋಟಿಗಳನ್ನು ಬಿಚ್ಚಬೇಕಾಗುತ್ತದೋ ಏನೋ ಎಂಬ ಗುಮಾನಿ ರಾಜ್ಯದ ಜನರಿಗೆ ಸಹಜ. ಯಾಕೆಂದರೆ ಕಳೆದ ರಾಜ್ಯ ಸಭೆಗೆ ನಡೆದ ಚುನಾವಣೆ ಶಾಸಕರ ಮೌಲ್ಯ ದಿಡೀರನೇ ಹೆಚ್ಚಿದ್ದು ತರಾತುರಿಯಲ್ಲಿ ಕೆಲವು ನೋಟೆಡ್ ಶಾಸಕರನ್ನು ಕಾಂಗ್ರೆಸ್ಸಿಗೆ ಸೇರಿಸಿಕೊಳ್ಳಲಾಗಿದೆಯೆಂದು ಮುಖ್ಯಮಂತ್ರಿಗಳು ಪ್ರಕಟಿಸಿ, ಮರುದಿನಗಳಲ್ಲಿ 'ಸೇರಿಸಿಕೊಂಡದ್ದು ನಿಜವೇ? ಎಂದು ಪರಸ್ಪರ ಪರಿಶೀಲಿಸಿಕೊಂಡದ್ದೂ ಇದೆ. ಆದ್ದರಿಂದಲೇ ಸ್ಪರ್ಧೆ ಏರ್ಪಟ್ಟರೆ ಈ ಎಲ್ಲಾ ವ್ಯವಹಾರ,.... ಇತ್ಯಾದಿಗಳು, ಮತ್ತು ತಮ್ಮ ಪಕ್ಷದ ಶಾಸಕರೇ ಕೈಕೊಡುವ ಭಯ. ಹೀಗಾಗಿ ಈ ರಾಜಿ ಸೂತ್ರಗಳು ಇಂತಹ ಪರಸ್ಪರ ಹಸ್ತಲಾಘವಗಳು ಬಂಡವಾಳಶಾಹಿ ಪಕ್ಷಗಳು ಏಳುತ್ತಿರುವ ದಿವಾಳಿತನ ಸಂಘಟನಾ ಶಿಥಿಲತೆ ಹಾಗೂ ವಿಘಟನೆಗಳನ್ನೂ ಎತ್ತಿತೋರಿಸುತ್ತಿವೆ.



ಪಂಚಾಯತ್ ಚುನಾವಣೆಗಳು ಮುಗಿದಿವೆ. ಫಲಿತಾಂಶಗಳು ಪ್ರಕಟಗೊಳ್ಳುತ್ತಿವೆ. ಈ ಚುನಾವಣಾ ಪ್ರಕ್ರಿಯೆ ಸಂದರ್ಭದಲ್ಲಿ ರಾಜ್ಯದ ವಿವಿಧ ಕಡೆ ಘರ್ಷಣೆಗಳೂ ನಡೆದಿವೆ. ಚಿತ್ರದುರ್ಗದಲ್ಲಿ ದಳ-ಕಾಂಗ್ರೆಸ್‌ನವರ ನಡುವೆ, ಮಾರಾಮಾರಿ ಶಿವಮೊಗ್ಗದಲ್ಲಿ ಮತಪೆಟ್ಟಿಗೆಯೊಳಗೆ ನೀರು ಹಾಕಿದ ಅಭ್ಯರ್ಥಿ, ಹೊಸಕೋಟೆಯಲ್ಲಿ ದಳ(ಯು) ಮತ್ತು ಕಾಂಗ್ರೆಸ್ಸಿಗರ ನಡುವೆ ಗುಂಡಿನ ಚಕಮಕಿ, ನಂದಗುಡಿ ಪ್ರದೇಶದಲ್ಲಿ ಕೊಲೆ ಮತ್ತು ವ್ಯಾಪಕ ಹಿಂಸಾಚಾರ, ಕನಕಪುರದಲ್ಲಿ ಅವಹೇಳನಕಾರಿ ವ್ಯಕ್ತಿಗತ ಟೀಕೆ ಮಾಡಿದ್ದಕ್ಕೆ ಬಡಿಸಿಕೊಂಡ ಸಚಿವ ಶಿವಕುಮಾರ್ ಹೀಗೆ ಈ ಗಲಭೆ, ಘರ್ಷಣೆ ನಡೆಸಿದವರು ಜನಸಾಮಾನ್ಯರಲ್ಲಿ, ಬದಲಾಗಿ ವಿವಿಧ ಪಕ್ಷಗಳ ನಾಯಕರು, ಗ್ರಾಮಾಂತರ ಪ್ರದೇಶದೊಳಗೆ ಮೆರೆಯುವ ಭೂಮಾಲಿಕ, ಹಾಗೂ ಹಣವುಳ್ಳ ಸ್ಥಾಪಿತ ಹಿತಾಸಕ್ತಿಗಳು, ಆ ಪ್ರದೇಶದಲ್ಲಿ ರಾಜಕೀಯ ಹಿಡಿತ ಸಾಧಿಸಲು ಹಣಾಹಣಿಗೆ ನಿಂತಿದೆ. ಬಹಳ ಮುಖ್ಯವಾಗಿ ಬೆಂಗಳೂರಿನ ಸುತ್ತ ಮುತ್ತ ಕೈಗಾರಿಕಾ ಪ್ರದೇಶಗಳು ಬೆಳೆಯುತ್ತಿದ್ದು ಭೂಮಿಗಳ ಬೆಲೆ ಹೆಚ್ಚಿದೆ. ಈ ಶಕ್ತಿಗಳೇ ಸರ್ಕಾರದ ಹಾಗೂ ಜನಸಾಮಾನ್ಯ ರೈತರು ಹಾಗೂ ದುರ್ಬಲರ ಭೂಮಿಗಳನ್ನು ಒತ್ತುವರಿ ಮಾಡಿ, ಅಧಿಕಾರ ಯಂತ್ರ ಬಳಸಿ ಅಕ್ರಮವಾಗಿ ಭೂ ಕಬಳಿಕೆ ನಡೆಸುತ್ತಿರುವುದು ಹೆಚ್ಚಾಗುತ್ತಿದೆ. ಪಂಚಾಯತ್ ಅಧಿಕಾರ ತಮ್ಮ ಹತೋಟಿಗೆ ತೆಗೆದುಕೊಂಡರೆ ಭೂ ಕಬಳಿಕೆ ದಾಹಕ್ಕೆ ಅಭಿವೃದ್ಧಿ ಹಣ ಲೂಟಿ ಹೊಡೆಯಲಿಕ್ಕೆ ಬೇಕಾದಂತೆ ಆಟ ಆಡಬಹುದು. ಕೋಟ್ಯಾಧೀಶರೂ ಆಗಬಹುದು ಎಂಬುದು ಈ ಶಕ್ತಿಗಳ ಹವಣಿಕೆ. ಆದಕ್ಕೆಂದೇ ಎಲ್ಲಿಲ್ಲದ ಸ್ಪರ್ಧೆ, ಹಣ ಹಂಚಿಕೆ, ಸಂಘರ್ಷ, ಈ ಪಕ್ಷಗಳ ಪ್ರಚಾರದಲ್ಲಿಯೂ ನಿರ್ದಿಷ್ಟ ಪ್ರಶ್ನೆಗಳು, ರಾಜಕೀಯ ವಿಚಾರ ಮಾಯವಾಗಿ ವ್ಯಕ್ತಿಗತ ನಿಂದನೆ, ಹಣ ತೋಳ್ಬಲ ವಿಜೃಂಭಿಸಿವೆ. ಈ ಚುನಾವಣೆಗಳಲ್ಲಿ ಮತದಾನ ಬಹುತೇಕ ಶೇ. 50 ದಾಟಲಿಲ್ಲ. ಯಾರನ್ನಾರಿಸಿದರೂ ತಮಗೇನೆಂದು ಜನರಿಗೆ ತಿರಸ್ಕಾರ, ಸಿಟ್ಟು, ಈ ಬಂಡವಾಳಶಾಹಿ ಪಕ್ಷಗಳು ಮತದಾರನ ತೀರ್ಪಿನಿಂದ ಪಾಠ ಕಲಿಯುವುದಿಲ್ಲ, ಅದೂ ಬೇಕಾಗಿಯೂ ಇಲ್ಲ, ಶೇ 92 ರಷ್ಟು ಮತಹಾಕುವ ಪ.ಬಂಗಾಳ ಎಲ್ಲಿ, ತಮ್ಮದೇ ಕ್ರಾಂತಿಕಾರಿ ಎಂದು ಡಂಗೂರ ಹೊಡೆಯುವ ಕರ್ನಾಟಕದ ಸಚಿವರಾದ ಘೋರ್ಪಡೆಯವರ ಮಾತುಗಳೆಲ್ಲಿ.

ಮುಖ್ಯಮಂತ್ರಿ ಕೃಷ್ಣರವರ ದಿಡೀರ್ ಭೇಟಿಯ ಎರಡನೇ ಕಂತು ಮುಗಿದಿದೆ. ಈ ಬಾರಿ ಬೆಂಗಳೂರಿನಲ್ಲಿ ಪಡಿತರ ವಸ್ತುಗಳ ಅಂಗಡಿ ಹಾಗೂ ಆಹಾರ ಸಂಗ್ರಹಣೆಯ ಗೋದಾಮುಗಳಿಗೆ. ಕಳಪೆ ಅಕ್ಕಿ ವಾಪಸು, ಕೆಲವರ ಸಸ್ಪೆಂಡ್ ಹಲವರಿಗೆ ನೋಟೀಸ್ ಜಾರಿ... ಮತ್ತೇ ವಿಧಾನಸೌಧದತ್ತ ದಾಪುಗಾಲು. ಈ ಕ್ರಮ ಅಲ್ಪ ಪರಿಣಾಮ ಬೀರಿದೆ ನಿಜ. ಆದರೆ ರಾಜ್ಯದ ಏಕೆ, ಬೆಂಗಳೂರಿನ ಇನ್ನೂ ಭೇಟಿಯೇ ನೀಡದ ಸಾವಿರಾರು ಪಡಿತರ ವಿತರಣಾ ಅಂಗಡಿಗಳಲ್ಲಿ ಯಥಾಸ್ಥಿತಿ ಮುಂದುವರಿದಿದೆ. ಮಾಲು ಮಾಮೂಲು. ಮುಖ್ಯಮಂತ್ರಿಗಳಿಗೆ ನಿಜಕ್ಕೂ ಏನು ಬೇಕಾಗಿದೆ? ಸಮಸ್ಯೆ ಪರಿಹಾರವೋ, ಅಥವಾ ಪ್ರಚಾರವೋ ಸ್ವತಃ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಕೃಷ್ಣಾ ತಮ್ಮ ಪಕ್ಷವು ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗುವಂತೆ ಕ್ರಮವಹಿಸಿಲ್ಲ. ಅಧಿಕಾರಿಗಳನ್ನು ಎಚ್ಚರಿಸಿ, ಕಾನೂನು ಜಾರಿಗೆ ಕಟ್ಟುನಿಟ್ಟಿನ ಆಜ್ಞೆ ಹೊರಡಿಸಿ, ಮಿಂಚಿನ ಕಾರ್ಯಾಚರಣೆ ಮಾಡಿಸಲಿಲ್ಲ. ಆದ್ದರಿಂದ ಜನರ ಪಾಲಿಗೆ ತಪ್ಪದ ಬವಣೆ. ಕೃಷ್ಣಾ ನೀ ಬೇಗನೇ ಬಾರೋ' ಎಂದು ರಾಜ್ಯದ ಗ್ರಾಮ ಗ್ರಾಮಗಳ ಜನ ಮೊರೆದರೆ ಎಲ್ಲಿಗೆಂದು ಹೋಗಬಲ್ಲರು ಇವರು. ಈ ಸಮಯ ಸಂಯಮ ಹಾಗೂ ಇನ್ನಾದರೂ ಆಡಳಿತ ಹಾಗೂ ಜನರನ್ನು ಚುರುಕುಗೊಳಿಸಿ ರಾಜ್ಯದಾದ್ಯಂತ ಕಾರ್ಯಪ್ರವೃತ್ತರಾಗಬೇಕು.

ಅಖಿಲ ಭಾರತ ವಿದ್ಯಾರ್ಥಿ ಪರಿಷತ್(ಎಬಿವಿಪಿ) ನ ಮಾಜಿ ಅಧ್ಯಕ್ಷ ಪಿ.ವಿ.ಕೃಷ್ಣಭಟ್ಟರಿಗೆ ಅರವತ್ತು ವಯಸ್ಸು ತುಂಬೇಬಿಟ್ಟಿತಂತೆ. ರಾಜ್ಯದ ವಿದ್ಯಾರ್ಥಿಗಳು ಓದುವುದಕ್ಕಿಂತ ಪರರ ಮನೆ ಗಳ ಹಿರಿದು, ಅನ್ಯರ(ಆಗದವರ - ಅಲ್ಪಸಂಖ್ಯಾತರ.... ಎಂದೆಲ್ಲಾ ಓದಿಕೊಳ್ಳಿ) ತಲೆ ಒಡೆಯುವುದು ಹೇಗೆ? ತರಕಾರಿ ಕೊಯ್ದು ಸಪ್ಪೆ ಆಗಿರುವ ಚಾಕು ಚೂರಿಗಳನ್ನು ಬಳಸಿ ಎದೆ ಬಗೆಯುವುದು ಹೇಗೆ? ಮನೆಯೊಳಗೆ ಬೆಳಕು ನೀಡುತ್ತಿದ್ದ ದೀಪದಿಂದಲೇ

ಪುಟ 9 ಕ್ಕೆ

ಸಿಪಿಐ(ಎಂ) - ಬಾಗೇಪಲ್ಲಿ ಕ್ಷೇತ್ರದಲ್ಲಿ ಮೂರು ಜಿಲ್ಲಾ ಪಂಚಾಯತ್ ಸ್ಥಾನ

ಕ್ಷೇತ್ರ	ಗೆದ್ದ ಅಭ್ಯರ್ಥಿಗಳು	ಮತಗಳ ಅಂತರ	ಪಡೆದ ಮತಗಳು
ಮಿಟ್ಟೆಮರಿ ಕ್ಷೇತ್ರ	ಬಿ.ರಾಮರೆಡ್ಡಿ	1004	8773
ಗೂಳೂರು ಕ್ಷೇತ್ರ	ಶ್ರೀರಾಮಪ್ಪ	2773	9676
ಬಾಗೇಪಲ್ಲಿ ಕಸಬಾಕ್ಷೇತ್ರ	ಎನ್.ಭಾರತಿದೇವಿ	168	6600

ತಾಲ್ಲೂಕು ಪಂಚಾಯತಿ

		ಮತಗಳ ಅಂತರ
ಕೊತ್ತಕೊಟ್ಲು	ಡಾ।। ಗಂಗಾಧರ್	280
ಗೊರ್ತಪಲ್ಲಿ	ವೈ.ಬಿ.ಬಯಪ್ಪ	1476
ಚೆಳ್ಳೂರು	ಭಾಗ್ಯಮ್ಮ	286
ಸೋಮನಾಥಪುರ	ಪದ್ಮಮ್ಮ	1116
ಎಲ್ಲಂಪಲ್ಲಿ	ಪುಷ್ಪ ಸುಧಾ	315
ಗುಡಿಬಂಡೆ	ಮುನಿಯಪ್ಪ	586
ಚಿಕ ನಂಚೇರಲು	ಲಕ್ಷ್ಮಿ ದೇವಮ್ಮ	212
ಚೆಂಡೂರು	ವೆಂಕಟೇಶಪ್ಪ	542

ಜಿಲ್ಲಾ ಪಂಚಾಯ್ತಿ / ತಾಲ್ಲೂಕು ಪಂಚಾಯ್ತಿ ಚುನಾವಣೆಗಳು ಕರ್ನಾಟಕದಲ್ಲಿ ಬಿಜೆಪಿಯ ನಿಜವಾದ ಸ್ಥಾನವನ್ನು ತೋರಿಸಿಕೊಟ್ಟಿವೆ. ಹೀನಾಯವಾದ ನಾಲ್ಕನೇ ಸ್ಥಾನ.ಜನತಾದಳ ಎರಡು ತುಣುಕುಗಳಿಗಿಂತಲೂ ಕಡೆಯಾದುದು. ವಿಧಾನಸಭಾ, ಲೋಕಸಭಾ ಚುನಾವಣೆಗಳ ನಂತರ ಕೇಂದ್ರ ಸರ್ಕಾರದ ನೀತಿಗಳಿಗೆ ಜನರು ಮುನಿದಿರುವ ಸೂಚನೆ ಇದು.

ಜನತಾದಳದ ಒಡಕು ಕಾಂಗ್ರೆಸ್‌ಗೊಂದು ಸಮರ್ಥ ಎದುರಾಳಿಯೇ ಇಲ್ಲದಂತೆ ಮಾಡಿ ಕಾಂಗ್ರೆಸ್‌ನ ಮಹಾಜಯಭೇರಿಗೆ ಕಾರಣವಾಗಿದೆ. ಈ ಜಯವೇ ಕಾಂಗ್ರೆಸ್‌ಗೆ ಮುಳುವಾಗುತ್ತದೆ ಕೂಡ. ಏಕೆಂದರೆ ಇಂದು ಗ್ರಾಮದಿಂದ ಹಿಡಿದು ರಾಜ್ಯದವರೆಗೆ ಎಲ್ಲಿ ಏನೇ ತೊಡಕಾದರೂ - ಸಣ್ಣದಿರಲಿ, ದೊಡ್ಡದಿರಲಿ, ಕಾಂಗ್ರೆಸ್ ಪಕ್ಷವೇ ಎಲ್ಲಾ ಹೊಣೆಹೊರಬೇಕಾಗುತ್ತದೆ. ಸಿಕ್ಕ ಜನಬೆಂಬಲದಿಂದ- ಸೊಕ್ಕಿದರೆ - ಇನ್ನು ನಮಗೆ ಎದುರ್‍ಯಾರು? ಎಂದು ಬೀಗಿದರೆ ಇನ್ನು ಮುಂದೆ ಯಾವ ಚುನಾವಣೆಯೂ ಎದುರಿಲ್ಲ ನಾವು ಆಡಿದ್ದೇ ಆಟವೆಂಬಂತೆ ವಿದ್ಯುತ್, ನೀರು, ನೀರಾವರಿ, ಸಾರಿಗೆ ದರಗಳ ಏರಿಕೆಗೆ ಕೈಹಾಕಿದರೆ ಜನತೆ ಎದುರು ನಿಲ್ಲುತ್ತಾರೆ. ಹಲವು ಚಳುವಳಿಗಳು ಎದ್ದು ಬರುತ್ತವೆ.

ರಾಯಚೂರು ತಾಲ್ಲೂಕು ಪಂಚಾಯತಿಯಲ್ಲಿ ಮೊಸರಕಲ್ಲು ಕ್ಷೇತ್ರದಿಂದ ನಿಂಗಮ್ಮನವರು ಸಿಪಿಐ(ಎಂ)ನಿಂದ ಆಯ್ಕೆಯಾಗಿದ್ದಾರೆ.

ಗುಲ್ಬರ್ಗ ಜಿಲ್ಲೆಯ ವಿ.ಕೆ.ಸಲಗರ ಕ್ಷೇತ್ರದಿಂದ ಪಾಂಡುರಂಗರವರು ಸಿಪಿಐ(ಎಂ)ನಿಂದ ಆಯ್ಕೆಯಾಗಿದ್ದಾರೆ.

ಕೊಡಗಿನಲ್ಲಿ ಅಪೂರ್ವ ವಿಜಯ

ಕೊಡಗು ಜಿಲ್ಲಾ ಪಂಚಾಯತಿ ಕ್ಷೇತ್ರದಲ್ಲಿ ಸಿಪಿಐ(ಎಂ) ಜಯಗಳಿಸಿದೆ. ಹೆಚ್.ಎಂ.ಕಾಳಯ್ಯನವರು 2857 ಮತಗಳನ್ನು ಪಡೆದು 37 ಮತಗಳ ಅಂತರದಲ್ಲಿ ಗೆದ್ದಿದ್ದಾರೆ.

ಜಿಲ್ಲಾ ಪಂಚಾಯ್ತಿ ಪಕ್ಷವಾರು ಬಲಾಬಲ

ಜಿಲ್ಲೆ	ಒಟ್ಟು ಸ್ಥಾನ	ಪ್ರ.ಫಲಿತಾಂಶ	ಕಾಂಗ್ರೆ	ಬಿಜೆಪಿ	ಜೆಡಿ(ಎಸ್)	ಜೆಡಿ(ಯು)	ಸಿಪಿಐ(ಎಂ)	ಬಿಎಸ್‌ಪಿ	ಪಕ್ಷೇತರ
ಬೆಂಗಳೂರು (ನಗರ)	17	17	15	01	-	01	-	-	-
ಬೆಂಗಳೂರು (ಗ್ರಾಮಾಂತರ)	38	38	23	01	06	08	-	-	-
ಕೋಲಾರ	47	47	29	-	-	09	03	-	06
ತುಮಕೂರು	52	52	36	04	07	02	-	-	03
ಚಿತ್ರದುರ್ಗ	31	31	24	02	01	03	-	-	01
ದಾವಣಗೆರೆ	31	31	24	02	02	03	-	-	-
ಶಿವಮೊಗ್ಗ	27	27	18	05	-	01	-	-	03
ಮೈಸೂರು	41	41	18	02	20	-	-	-	01
ಚಾಮರಾಜನಗರ	21	21	16	-	01	03	-	-	01
ಹಾಸನ	37	37	20	-	16	-	-	-	01
ಕೊಡಗು	26	26	22	01	01	-	01	-	01
ಮಂಡ್ಯ	39	39	21	01	12	01	-	-	04
ಚಿಕ್ಕಮಗಳೂರು	30	30	20	02	05	02	-	-	01
ಉಡುಪಿ	24	24	24	-	-	-	-	-	
ದ.ಕನ್ನಡ	31	31	30	01	-	-	-	-	
ಬೆಳಗಾವಿ	76	76	53	-	-	12	-	-	11
ಬಿಜಾಪುರ	32	32	30	01	-	-	-	01	
ಬಾಗಲಕೋಟೆ	26	25	19	-	01	04	-	-	01
ಧಾರವಾಡ	18	18	15	02	01	-	-	-	-
ಗದಗ	17	17	15	-	-	02	-	-	-
ಹಾವೇರಿ	29	29	23	01	-	05	-	-	-
ಉ. ಕನ್ನಡ	35	35	27	03	04	-	-	-	01
ಬೀದರ್	26	26	22	03	-	-	-	01	-
ಬಳ್ಳಾರಿ	32	32	23	04	-	05	-	-	-
ರಾಯಚೂರು	29	29	21	02	-	06	-	-	-
ಗುಲ್ಬರ್ಗಾ	55	55	45	03	01	04	-	-	02
ಕೊಪ್ಪಳ	23	23	16	-	-	04	-	-	03
ಒಟ್ಟು	890	889	649	041	080	073	004	001	041

ತಾಲ್ಲೂಕು ಪಂಚಾಯ್ತಿ ಪಕ್ಷವಾರು ಬಲಾಬಲ

ತಾಲ್ಲೂಕು	ಒಟ್ಟು ಸ್ಥಾನ	ಪ್ರ.ಫಲಿತಾಂಶ	ಕಾಂಗ್ರೆ	ಬಿಜೆಪಿ	ಜೆಡಿ(ಎಸ್)	ಜೆಡಿ(ಯು)	ಸಿಪಿಐ(ಎಂ)	ಪಕ್ಷೇತರ	ಬಿಎಸ್‌ಪಿ
ಬೆಂಗಳೂರು (ನಗರ)	68	68	51	08	02	03	-	04	-
ಬೆಂಗಳೂರು (ಗ್ರಾಮಾಂತರ)	139	139	86	06	21	25	-	01	-
ಕೋಲಾರ	181	181	118	-	31	-	08	27	-
ತುಮಕೂರು	195	195	113	16	44	06	-	16	-
ಚಿತ್ರದುರ್ಗ	115	115	68	12	10	16	-	09	-
ದಾವಣಗೆರೆ	115	115	68	09	02	21	-	14	01
ಶಿವಮೊಗ್ಗ	99	99	73	13	02	03	-	08	-
ಮೈಸೂರು	152	152	72	07	57	05	-	11	-
ಚಾಮರಾಜನಗರ	81	81	53	04	02	17	-	05	-
ಹಾಸನ	139	139	81	23	33	01	-	01	-
ಕೊಡಗು	46	46	40	04	-	-	-	02	-
ಮಂಡ್ಯ	144	144	63	04	50	13	-	14	-
ಚಿಕ್ಕಮಗಳೂರು	103	103	64	05	12	11	-	11	-
ಉಡುಪಿ	88	88	83	04	-	01	-	-	-
ದ.ಕನ್ನಡ	115	115	87	22	04	02	-	-	-
ಬೆಳಗಾವಿ	287	287	174	03	01	54	-	55	-
ಬಿಜಾಪುರ	124	124	83	18	-	17	-	06	-
ಬಾಗಲಕೋಟೆ	99	99	61	04	-	29	-	05	-
ಧಾರವಾಡ	66	66	36	16	03	03	-	08	-
ಗದಗ	66	66	53	-	04	08	-	01	-
ಹಾವೇರಿ	109	109	79	05	02	17	-	06	-
ಉ. ಕನ್ನಡ	123	122	99	15	06	01	-	01	-
ಬೀದರ್	101	101	76	18	01	03	-	03	-
ಬಳ್ಳಾರಿ	112	112	60	15	02	28	-	07	-
ರಾಯಚೂರು	107	107	66	08	02	20	01	10	-
ಗುಲ್ಬರ್ಗಾ	198	196	139	10	08	29	01	08	01
ಕೊಪ್ಪಳ	83	83	53	-	01	24	-	05	-
ಒಟ್ಟು	3255	3252	2099	249	300	357	10	238	02

ಖಾಸಗಿ ಶಿಕ್ಷಣ ಸಂಸ್ಥೆಗಳ ಭ್ರಷ್ಟತೆಯ ವಿಶ್ವರೂಪ

"ನಿಮ್ಮನ್ನೆಲ್ಲಾ ಕೆಲಸಕ್ಕಿಟ್ಟಿರೋದು ತನಿಖಾ ಸಮಿತಿಗಳು (Inspection Committee) ಬಂದಾಗ ತೋರಿಸಲಿಕ್ಕಷ್ಟೆ. ನೀವೆಲ್ಲಾ ಇಲ್ಲದೇನೇ ಕೆಲಸ ಹ್ಯಾಗೆ ಮಾಡಬೇಕೂಂತ ಗೊತ್ತು"

"ಲೋ ಆ ಬೋ............ನನ್ನು ಸಂಬಳ ಕೊಡದೆ ಹೊರಗಟ್ಟು"

ಈ ಸಾಲುಗಳನ್ನು ಓದಿದಾಗ ಬಹುಶಃ ಯಾರೋ ದಿನಗೂಲಿಗಳ ಹತ್ತಿರ ಅವರ ಯಜಮಾನರುಗಳು ಆಡುವ ಮಾತೇನೋ ಅಂದುಕೊಳ್ಳಬಹುದು. ಆದರೆ ಇದು ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಸರ್ವೆಸಾಮಾನ್ಯವಾಗಿ ಕಂಡು ಬರುವ ದೃಶ್ಯ. ಬಹುಶಃ ಭಾರತದಲ್ಲೆಲ್ಲೂ ಕರ್ನಾಟಕದಲ್ಲಿಯಷ್ಟು ಖಾಸಗೀ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಂಡಿಲ್ಲ. ಈ ಸಂಸ್ಥೆಗಳಲ್ಲಿ ಕೆಲಸ ಮಾಡುವ ಅಧ್ಯಾಪಕರು ನೌಕರರು, ಓದುವ ವಿದ್ಯಾರ್ಥಿಗಳ ಸ್ಥಿತಿ ಮೇಲಿನ ಮಾತುಗಳಲ್ಲೇ ಅರ್ಥವಾಗಬಹುದು.

ರಾಜೀವ್ ಗಾಂಧಿಯ ಹೊಸ ಶಿಕ್ಷಣ ನೀತಿಯ ನಂತರ ಭರದಿಂದ ಸಾಗಿದ ಶಿಕ್ಷಣದ ಖಾಸಗೀಕರಣ ಕರ್ನಾಟಕದಲ್ಲಿ ತೀವ್ರತೆಯನ್ನು ಮುಟ್ಟಿದೆ. ವರ್ಷಕ್ಕೆ ಇಷ್ಟಿಷ್ಟು ಮೆಡಿಕಲ್, ಇಂಜಿನಿಯರಿಂಗ್, ಪ್ರಥಮ ದರ್ಜೆ, ಸ್ನಾತಕೋತ್ತರ ಕಾಲೇಜ್‌ಗಳೆಂದು ಹುಟ್ಟಿಕೊಳ್ಳುತ್ತಲಿವೆ. ಈ ಖಾಸಗೀ ಶಿಕ್ಷಣ ಸಂಸ್ಥೆಗಳನ್ನು ನಡೆಸುವವರಲ್ಲಿ ಒಂದಲ್ಲಾ ಒಂದು ಬಲಪಂಥೀಯ ಪಕ್ಷಗಳ ರಾಜಕಾರಣಿಗಳು ಸೇರಿರುತ್ತಾರೆ. ಅವರುಗಳು ಆ ಸಂಸ್ಥೆಯಲ್ಲಿ 'ನಿರ್ದೇಶಕ'ರಾಗಿರುತ್ತಾರೆ. ಅಥವಾ ಆ ಶಿಕ್ಷಣ ಸಂಸ್ಥೆಯ ದತ್ತಿ (Trust)ಯಲ್ಲಿ ಸದಸ್ಯರಾಗಿರುತ್ತಾರೆ. ಹೀಗೆ ರಾಜಕಾರಣಿಗಳ ಕೃಪಾಶ್ರಯದಲ್ಲೇ ಈ ಸಂಸ್ಥೆಗಳು ನಡೆಯುತ್ತಿರುವುದು.

ಈ ಶಿಕ್ಷಣ ಸಂಸ್ಥೆಗಳಿಗೆ ಒಂದಲ್ಲಾ ಒಂದು ಹಣೆಪಟ್ಟಿ ಪಚ್ಚೆ ಹುಟ್ಟು ಹಾಕಲಾಗುತ್ತದೆ. ಒಂದೋ ಭಾಷಾ ಅಲ್ಪಸಂಖ್ಯಾತರು ಎಂದೋ, ಧಾರ್ಮಿಕ ಅಲ್ಪಸಂಖ್ಯಾತರು ಎಂದೋ, ಹಿಂದುಳಿದ ವರ್ಗದವರೆಂದೋ, ಪರಿಶಿಷ್ಟ ಜಾತಿ/ಪಂಗಡ ಎಂಬೀ ತರಹದ ಅಂತಸ್ತುಗಳಿಂದಾಗಿ ಈ ಸಂಸ್ಥೆಗಳಿಗೆ ಕಾನೂನಿನ ಪರಿಧಿ ಮೀರಿಯೂ ವ್ಯವಹರಿಸಲು ಸಾಧ್ಯವಾಗಿದೆ.

ಖಾಸಗಿ ಶಿಕ್ಷಣದ ಕರಾಳ ಮುಖ

ಈ ಖಾಸಗಿ ಶಿಕ್ಷಣದ ಒಂದು ಕರಾಳ ಮುಖ ಕ್ಯಾಪಿಟೇಶನ್ ಡೋನೇಷನ್. ಸರ್ಕಾರವು ಕ್ಯಾಪಿಟೇಶನ್ ಶುಲ್ಕವನ್ನು ನಿಷೇಧಿಸಿದಾಗ ಈ ಶಿಕ್ಷಣ ಸಂಸ್ಥೆಗಳು ಕಂಡುಕೊಂಡ ಬೇರೊಂದು ದಾರಿ ಕಾಲೇಜ್ ಅಭಿವೃದ್ಧಿ ಶುಲ್ಕ, ಕಾಲೇಜ್ ದುರಸ್ತಿಗಾಗಿ ಶುಲ್ಕ ಮುಂತಾಗಿ ಬೇರೆ, ಬೇರೆ ಹೆಸರಲ್ಲಿ ಹಣವನ್ನು ವಸೂಲು ಮಾಡುವುದು.

ಖಾಸಗಿ ಶಿಕ್ಷಣ ಸಂಸ್ಥೆಗಳು ವಸೂಲು ಮಾಡುವ ಫೀಸು ದುಬಾರಿಯಾಗಿದ್ದು ಬಡವರು, ಕೆಳ ಮತ್ತು ಬಹುಮಟ್ಟಿಗಿನ ಮೇಲ್‌ಮಧ್ಯಮ ವರ್ಗದವರೂ ಭರಿಸಲಿಕ್ಕೆ ಸಾಧ್ಯವಾಗದ್ದು. ಪದವಿ ತರಗತಿಗಳ ಅರ್ಜಿಗೆ ಸರ್ಕಾರ ನಿಗದಿಪಡಿಸಿರುವುದು ರೂ. 75/- ಆದರೆ ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆ ಅರ್ಜಿಗಳಿಗೆ 300-500 ರೂ. ಕಡಿಮೆಯಿರದಂತೆ ಸುಲಿಯುತ್ತಾರೆ. ಅಡ್ಮಿಷನ್ ಫೀ ರೂ. 1000 ಇದ್ದರೆ ಖಾಸಗಿಯವರು ರೂ. 5000 ಪ್ರತಿ ವರ್ಷವೂ ವಸೂಲು ಮಾಡುತ್ತಾರೆ. ಇದರಲ್ಲಿ ಡೊನೇಷನ್ ಪ್ರತ್ಯೇಕ. ಭಾರತದಂತಹ ಬಡ ದೇಶದಲ್ಲಿ ಎಷ್ಟು ಜನಕ್ಕೆ ಡೊನೇಷನ್, ಫೀಸ್ ಎರಡೂ ಕೊಟ್ಟು ಓದಲು ಸಾಧ್ಯವಿದೆ?

ಅತ್ಯುಚ್ಚ ನ್ಯಾಯಾಲಯದ ಪ್ರಕಾರ ಈ ಶಿಕ್ಷಣ ಸಂಸ್ಥೆಗಳು ತಮಗೊಂದಿಷ್ಟು ಸೀಟನ್ನು ನಿಗದಿಗೊಳಿಸಿ ಸರ್ಕಾರಕ್ಕೊಂದು ಒಂದಷ್ಟು ಸೀಟುಗಳನ್ನು ಮೀಸಲಿರಿಸ ಬೇಕಾಗುತ್ತದೆ. ವಿದ್ಯಾರ್ಥಿಗಳನ್ನು ಇದರ ಬಗ್ಗೆ ವಿಚಾರಿಸಿದಾಗ ಡೊನೇಷನ್ ಕೊಟ್ಟು ಸೇರುವ ವಿದ್ಯಾರ್ಥಿಗಳಿಗೆ ಈ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ತುಂಬಾ ಅಕ್ಕರೆಯಿಂದ ನೋಡಲಾಗುತ್ತದೆ (ವಿದ್ಯಾರ್ಥಿಗಳ ಬೇಡಿಕೆಗಳು ಖಾಸಗಿಯವರ ಕಟ್ಟುಪಾಡನ್ನು ಮೀರದೆಯಿರುವವರೆಗೆ ಎಂದು ಓದಿಕೊಳ್ಳಿ). ಆದರೆ ಸರ್ಕಾರದಿಂದ ಆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಕಳುಹಿಸಲ್ಪಟ್ಟ ವಿದ್ಯಾರ್ಥಿಗಳ ಪಾಡು ನಾಯಿ ಪಾಡು. ವಿದ್ಯಾರ್ಥಿಗಳು ಏನಾದರೂ ಪ್ರಶ್ನಿಸಿದರೆ ಮೊದಲು ನಡೆಯುವುದು ಕಪಾಳ ಮೋಕ್ಷ.

ಈ ಖಾಸಗಿ ಶಿಕ್ಷಣ ಸಂಸ್ಥೆಗಳು ನಡೆಸುವ ಇನ್ನೊಂದು ಹಗಲು ದರೋಡೆ ಹೆಚ್ಚುವರಿ ಸೇರಿಸಿಕೊಳ್ಳುವಿಕೆ(excess admission) ವಿದ್ಯಾರ್ಥಿಗಳನ್ನು ಸರ್ಕಾರ ನಿಗದಿಪಡಿಸಿದ್ದಕ್ಕಿಂತ ಅತಿಯಾಗಿ ಸೇರಿಸಿಕೊಳ್ಳುವುದು (ಇತ್ತೀಚಿನ ದಂತ ವೈದ್ಯಕೀಯ ಕಾಲೇಜುಗಳ ಹಗರಣವೇ ಸಾಕ್ಷಿ). ಸರ್ಕಾರ ಪ್ರಥಮ ವರ್ಷಕ್ಕೆ 30 ವಿದ್ಯಾರ್ಥಿಗಳನ್ನು ಒಂದು ಕಾಲೇಜಿಗೆ ನಿಗದಿಪಡಿಸಿದೆ ಎಂದಿಟ್ಟುಕೊಂಡರೆ, ಆ ಕಾಲೇಜಿನವರು 60 ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ವಿಶ್ವವಿದ್ಯಾಲಯದಲ್ಲಿ ತಮಗಿರುವ ವಶೀಲಿ ಪ್ರಭಾವದಿಂದಾಗಿ ಅದನ್ನು ಸರಿಪಡಿಸಿಕೊಳ್ಳುತ್ತಾರೆ. ಇದು ಮುಂದೆ ಯಾವುದೋ ಸಮಿತಿಯ ಪರಿಶೀಲನೆಯಿಂದಾಗಿ ಹಗರಣವಾಗಿ ಹೊರಬೀಳುತ್ತದೆ. ಇತ್ತೀಚಿಗೆ ವಿಶ್ವವಿದ್ಯಾಲಯದ ಪದವಿ, ಸ್ನಾತಕೋತ್ತರ (MCA, MBA ಮುಂತಾದ) ತರಗತಿಗಳಿಗೆ ಆಗಿರುವ ಸೇರ್ಪಡೆಯನ್ನು ತನಿಖೆಗೆ ಒಳಪಡಿಸಿದರೆ ಬಹುಶಃ ಒಂದು ದೊಡ್ಡ ಹಗರಣವನ್ನೇ ಪತ್ತೆ ಹಚ್ಚಬಹುದು.

ಖಾಸಗೀ ಶಿಕ್ಷಣ ಸಂಸ್ಥೆಗಳಿಗೆ ನಮ್ಮ ಸರ್ಕಾರಗಳು ನಿರಂತರವಾಗಿ ತೋರುವ ಧಾರಾಳತನ ಆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಹೊಸ ಹೊಸದಾಗಿ ಆರಂಭವಾಗುವ ಕೋರ್ಸ್‌ಗಳಲ್ಲಿ ಕಾಣಿಸಿಕೊಳ್ಳುತ್ತದೆ. ವರ್ಷಕ್ಕೆ ಐದು, ಆರು ಹೊಸ ಕೋರ್ಸ್‌ಗಳನ್ನು ದಯಪಾಲಿಸುತ್ತಾರೆ. ಆ ಕೋರ್ಸ್‌ಗಾಗಿ ಶಿಕ್ಷಣ ಸಂಸ್ಥೆಗಳಲ್ಲಿ ಏನಾದರೂ ಸೌಲಭ್ಯವಿದೆಯಾ ಇಲ್ಲವಾ ಅದರಿಂದ ವಿದ್ಯಾರ್ಥಿಗಳ ಜೀವನಕ್ಕೇನಾದರೂ ಲಾಭವಿದೆಯಾ ಎಂಬುದೆಲ್ಲಾ ಇಲ್ಲ. ಹೊಸ ಕೋರ್ಸ್ ಕೋಟಿಗಟ್ಟಲೆ ಹಣ ತರುವ ಹಾಗಿದ್ದರೆ ಅದು ಖಾಸಗಿ ಶಿಕ್ಷಣ ಸಂಸ್ಥೆಗೂ ಲಾಭ ಮತ್ತು ಅದನ್ನು ಪೋಷಿಸುವ ರಾಜಕಾರಣಿಗೂ ಲಾಭ.

ಹಿಂದೆಲ್ಲಾ ಪದವಿಪೂರ್ವ ಮತ್ತು ಪದವಿ ಮಟ್ಟದಲ್ಲೂ ಕಲಾ (Arts) ತರಗತಿಗಳಿದ್ದವು. ಆದರೆ ಇಂದು ಎಲ್ಲೋ ಬೆರಳೆಣಿಕೆಯಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಬಿ.ಎ., ಬಿ.ಕಾಂ. ಕೋರ್ಸ್‌ಗಳನ್ನು ಬಿಟ್ಟರೆ ಬಹುತೇಕ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವಿಜ್ಞಾನಕ್ಕೆ ಸಂಬಂಧಪಟ್ಟ ಕೋರ್ಸ್‌ಗಳನ್ನು ಶುರುಮಾಡುತ್ತಾರೆ. ಇಂದು ಕಾಂಬಿನೇಷನ್ ಆಯ್ಕೆ ನೆಪಕ್ಕಾಗಿ ವಿದ್ಯಾರ್ಥಿಗಳಿಗೋಸ್ಕರವೆಂದಿದ್ದರೂ ತೆರೆಮರೆಯಲ್ಲಿ ಈ ಕಾಂಬಿನೇಷನ್‌ಗಳು ರೂಪುಗೊಳ್ಳೋದು ಯಾವುದರಿಂದಾಗಿ ಬೇಗ ಹಣ ಮಾಡಬಹುದು ಮತ್ತು ವಿದ್ಯಾರ್ಥಿಗಳು ಯಾವುದಕ್ಕಾಗಿ ಮುಗಿ ಬೀಳುತ್ತಾರೆ ಎಂಬುದರ ಮೇಲೆ. ಆದರೆ ಇಂಥ ಕಾಂಬಿನೇಷನ್‌ಗಳನ್ನು ನಮ್ಮ ಸರ್ಕಾರಿ ಕಾಲೇಜುಗಳಲ್ಲಿ ಪರಿಚಯಿಸುವುದಕ್ಕೂ ಪಾಪ ನಮ್ಮ ಸರ್ಕಾರಗಳಿಗೆ ಯಾಕೋ ತುಂಬಾ ನಾಚಿಕೆ.

ನಿಯಮಗಳು ಕಸದ ಬುಟ್ಟಿಗೆ


ಕಾಲೇಜಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕೆ ವಿಶ್ವವಿದ್ಯಾಲಯವು ಒಂದು ದಿನಾಂಕವನ್ನು ನಿಗದಿಪಡಿಸಿರುತ್ತದೆ. ಅದರ ನಂತರ ಒಂದಷ್ಟು ದಿನಗಳು ದಂಡ ತೆತ್ತು ಸೇರಬಹುದಾಗಿರುತ್ತದೆ. ಅದರ ನಂತರ ಪ್ರವೇಶವನ್ನು ನಿಲ್ಲಿಸಲಾಗುತ್ತದೆ. ಆದರೆ ಎಷ್ಟೋ ಖಾಸಗಿ ಶಿಕ್ಷಣ ಸಂಸ್ಥೆಗಳು ಈ ನಿಯಮವನ್ನು ಮೀರುತ್ತಿವೆ. ಅನೇಕ ವಿದ್ಯಾರ್ಥಿಗಳ ಪ್ರಕಾರ ಎಷ್ಟೋ ಕಾಲೇಜುಗಳಲ್ಲಿ ವರ್ಷದ ಕೊನೆಯಲ್ಲೂ ಜಾಸ್ತಿ ಡೋನೇಷನ್ ಕೊಟ್ಟು ಸೇರಲು ಸಾಧ್ಯವಿದೆ.

ಬಹಳಷ್ಟು ಖಾಸಗಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ನಿಗದಿತ ಅಂಕಗಳಿಗಿಂತ ಕಡಿಮೆಯಿದ್ದರೂ ಸೇರ್ಪಡುವಿಕೆ ಸಾಧ್ಯವಿದೆ. ವಿಶ್ವವಿದ್ಯಾಲಯದ ಪ್ರಕಾರ ಒಂದೊಂದು ಕೋರ್ಸಿಗೆ ಒಂದಿಷ್ಟು ಅಂಕಗಳನ್ನು ಕನಿಷ್ಠ ಅರ್ಹತೆಯಾಗಿ ನಿಗದಿಪಡಿಸಲಾಗಿದೆ. ಆದರೆ ಇದನ್ನು ಕಡೆಗಣಿಸಿ ಸಾಕಷ್ಟು ಕಾಲೇಜ್‌ಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸಲಾಗುತ್ತದೆ. ಇದನ್ನು ವಿದ್ಯಾರ್ಥಿಗಳು ಪ್ರಶ್ನಿಸಿದರೆ ಸಿಗುವ ಉತ್ತರ 'ನಿನಗೆ ಪದವಿ ಬೇಕೋ ಬೇಡವೋ' ಎಂದು. ಇಂದು ಶಿಕ್ಷಣ ದುಬಾರಿಯಾಗುತ್ತಿರುವ ವೇಳೆ ವಿದ್ಯಾರ್ಥಿಗಳು ಸೀಟು ಸಿಕ್ಕರೆ ಸಾಕೆಂದು ಏನೊಂದನ್ನು ಪ್ರಶ್ನಿಸದೆ ಸೇರುತ್ತಾರೆ.

ಇಂದು ಸರ್ಕಾರವು ಆದಷ್ಟು ಬೇಗ ಎಲ್ಲವನ್ನೂ ಖಾಸಗೀಕರಿಸಲು ಮುಂದಾಗುತ್ತಿದೆ. ಶಿಕ್ಷಣವೂ ಇದಕ್ಕೆ ಹೊರತಾಗಿಲ್ಲ. ಬಿಜೆಪಿ ಆಡಳಿತದ ಕೇಂದ್ರ ಸರ್ಕಾರವು ಇಂದು ಶಿಕ್ಷಣಕ್ಕೆ ಆಯವ್ಯಯ ಪಟ್ಟಿಯಲ್ಲಿ ಇಟ್ಟಿರುವ ಹಣ ತೀರಾ ಅತ್ಯಲ್ಪ. ಇದೇ ನಿಟ್ಟಿನಲ್ಲಿ ನಮ್ಮ ರಾಜ್ಯ ಸರ್ಕಾರವೂ ಅತ್ಯುಚ್ಚ ಶಿಕ್ಷಣದ ಖರ್ಚನ್ನು ಖೋತಾ ಮಾಡಿ ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ಕೊಡುತ್ತೇವೆ ಎಂದು ರೈಲು ಬಿಡಹತ್ತಿದ್ದಾರೆ. ಪ್ರಪ್ರಥಮವಾಗಿ ಸರ್ಕಾರಿ ಶಿಕ್ಷಣ ಸಂಸ್ಥೆಗಳ ಮೇಲೆ ಹೇರುವ ಆರೋಪ ಅವುಗಳು ಸರಿಯಾಗಿ ಕಾರ್ಯವೆಸಗುತ್ತಿಲ್ಲ. ಅವುಗಳ ನಿರ್ವಹಣೆ ಸರಿಯಿಲ್ಲವೆಂದು. ಆದರೆ ನಿಜವಾಗಿ ನಮ್ಮ ರಾಜಕಾರಣಿಗಳು ಬೆಂಬಲಿಸುವ ಈ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಏನಿವೆ ಏನಿಲ್ಲಾ? ನಮ್ಮ ವಿದ್ಯಾರ್ಥಿಗಳ ಪ್ರಕಾರ, ಎಷ್ಟೋ ಖಾಸಗಿ ಸಂಸ್ಥೆಗಳಲ್ಲಿ

ವಿ. ನಾಗರಾಜನ್

ಲ್ಯಾಬೋರೇಟರಿಗಳಲ್ಲಿ ನೀರಿದ್ದರೆ ಗ್ಯಾಸಿಲ್ಲ, ಗ್ಯಾಸಿದ್ದರೆ ನೀರಿಲ್ಲ. ಇವೆಲ್ಲಾ ಇದ್ದರೆ ಪ್ರಯೋಗಕ್ಕೆ ಬೇಕಾದ ಉಪಕರಣಗಳಾಗಲೀ, ರಾಸಾಯನಿಕಗಳಾಗಲೀ ಇರುವುದಿಲ್ಲ. ಒಂದಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಇವೆಲ್ಲಾ ಇದ್ದರೂ ಆ ಕಾಲೇಜಿನ ಆಡಳಿತ ವರ್ಗ ಅಧ್ಯಾಪಕರನ್ನು ನಡೆಸಿಕೊಳ್ಳುವ ರೀತಿಯಿಂದಾಗಿ ಸರಿಯಾದ ಪಾಠವೇ ನಡೆಯುವುದಿಲ್ಲ. ಇಂತಹದರಲ್ಲಿ ಈ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸ್ವಯಂ ಆಡಳಿತ(autonomous) ಮಾಡಲು ಹೊರಟಿದೆ ಸರ್ಕಾರ. ಒಂದಷ್ಟು ಕಾಲೇಜುಗಳಂತೂ ಸ್ವಯಂಘೋಷಿತ ವಿಶ್ವವಿದ್ಯಾಲಯಗಳಾಗಲಿವೆ.



ಬೆಂಗಳೂರಿನ ಒಂದು ಪ್ರಸಿದ್ಧ ಖಾಸಗಿ ಶಿಕ್ಷಣಸಂಸ್ಥೆ

ಚಿನ್ನದ ಕೋಳಿಗಳು

ಕರ್ನಾಟಕದಲ್ಲಿ ಅಣಬೆಗಳಂತೆ ತಲೆ ಎತ್ತುತ್ತಿರುವ ಈ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಕರ್ನಾಟಕದ ವಿದ್ಯಾರ್ಥಿಗಳಿಗೆ ಆಗುವ ಅನುಕೂಲ ಏನೂ ಇಲ್ಲ. ಅವುಗಳ ಮುಖ್ಯ ಗುರಿ ಹೊರ ರಾಜ್ಯದ ವಿದ್ಯಾರ್ಥಿಗಳ ಮೇಲೆ. ಹೋಗಲಿ ಅಲ್ಲಿನ ಬಡ ವಿದ್ಯಾರ್ಥಿಗಳಿಗೇನಾದರೂ ಸೀಟು ಕೊಡುತ್ತಾರಾ? ಅದೂ ಇಲ್ಲ. ಹಣ ಬಿಚ್ಚುವ ಮೇಲು ಮಧ್ಯಮ ವರ್ಗ, ಶ್ರೀಮಂತ ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ ಇಲ್ಲಿ ಸೇರಲು ಅವಕಾಶ. ಶಿಕ್ಷಣವನ್ನು ಬೆಳೆಸುತ್ತೇವೆ ಶಿಕ್ಷಣ ತಜ್ಞರು ಎಂದೆಲ್ಲಾ ಕೊಚ್ಚಿಕೊಳ್ಳುವ ಈ ಖಾಸಗಿ ಶಿಕ್ಷಣ ಸಂಸ್ಥೆಯವರ ಗುರಿ ಹಣದ ಥೈಲಿ ಮಾತ್ರ. ವ್ಯಂಗ್ಯವೇನೆಂದರೆ ಈ 'ತಜ್ಞರಿಗೆ' ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಪುರಸ್ಕಾರ ನೀಡುತ್ತವೆ. ಹೊರರಾಜ್ಯಗಳಲ್ಲಿ ಏಜೆಂಟ್‌ಗಳನ್ನಿಟ್ಟು ಬಣ್ಣ ಬಣ್ಣದ ವಿವರ ಪುಸ್ತಕಗಳನ್ನು(brochures) ಮುದ್ರಿಸಿ ಆ ರಾಜ್ಯದ ಪ್ರಖ್ಯಾತ ಹೋಟೆಲ್‌ಗಳಲ್ಲಿ ಸಂದರ್ಶನ ನಡೆಸಿ ಅಲ್ಲಿಂದಲೇ ಬಸ್ಸುಗಳಲ್ಲಿ ವಿದ್ಯಾರ್ಥಿಗಳನ್ನು ತುಂಬಿಸಿ ತರುತ್ತಾರೆ.

ಹೊರರಾಜ್ಯದಿಂದ ಬರುವ ಈ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಬರೀ ಡೊನೇಷನ್ ಕೊಡುವ ಚಿನ್ನದ ಬಾತುಗಳಷ್ಟೇ ಅಲ್ಲ, ಅವರುಗಳು ಬೇರೆ ರೀತಿಯಲ್ಲೂ ಮೇನೇಜ್‌ಮೆಂಟ್‌ಗಳಿಗೆ ಚಿನ್ನದ ಬಾತುಗಳಾಗುತ್ತಾರೆ. ಭೇಟಿಯಾದ ಒಂದಷ್ಟು ವಿದ್ಯಾರ್ಥಿಗಳ ಪ್ರಕಾರ ಒಂದಷ್ಟು ಶಿಕ್ಷಣ ಸಂಸ್ಥೆಗಳಲ್ಲಿ ಸುಮಾರು 1000-1500 ರಷ್ಟು ಹೊರರಾಜ್ಯದ ವಿದ್ಯಾರ್ಥಿಗಳಿದ್ದಾರೆ. ಇವರುಗಳನ್ನು ಕಡ್ಡಾಯವಾಗಿ ಹಾಸ್ಟೆಲ್‌ನಲ್ಲಿರಿಸಲಾಗುತ್ತದೆ. ಆಡಳಿತ ವರ್ಗದ ವಿರುದ್ಧವಾಗಿ ಹೊರಗೆ ಉಳಿದವರು ಬೇರೆ ತೊಂದರೆ ಎದುರಿಸಬೇಕು. ವಾರಕ್ಕೆ 2 ಬಾರಿ ಮಾಂಸದೂಟ(ನೆಪಮಾತ್ರಕ್ಕೆ). ರೂಂ ಬಾಡಿಗೆ ಸೇರಿ ತಿಂಗಳಿಗೆ 2000 ರೂ. ಆದರೆ ಈ ರೂಂಗಳಲ್ಲಿ ಪ್ರತ್ಯೇಕತೆಯಿರುವುದಿಲ್ಲ. ಒಂದು ರೂಮಿನಲ್ಲಿ 10-12 ಜನರಿರುತ್ತಾರೆ. ಹಾಸ್ಟಲ್‌ಗೆಂದು ಪ್ರತ್ಯೇಕ ಕಟ್ಟಡವಿರುವುದಿಲ್ಲ. ಯಾವುದೋ ಮನೆಯನ್ನು ಬಾಡಿಗೆಗೆ ಪಡೆದು ಅದನ್ನೇ ಹಾಸ್ಟೆಲ್ ಆಗಿ ಪರಿವರ್ತಿಸುತ್ತಾರೆ. ಈಗ ಒಬ್ಬ ವಿದ್ಯಾರ್ಥಿಗೆ 2000 ರೂ. ಆದರೆ 20000 ರೂ ತಿಂಗಳಿಗೆ. ಊಟಕ್ಕೆಂದು ಮ್ಯಾನೇಜ್‌ಮೆಂಟೇನೂ ಹೊರಗಡೆಯಿಂದ ಅಕ್ಕಿ ತರಕಾರಿ ಪ್ರತ್ಯೇಕವಾಗಿ ತರಿಸುವುದಿಲ್ಲ. ಅದನ್ನು ತಮ್ಮಲ್ಲೇ ಹೊಂದಿಸುತ್ತಾರೆ. ಈಗ ನೀವೇ ನಿರ್ಧರಿಸಿ ಇವರುಗಳ ಲಾಭ ಎಷ್ಟೆಂದು.

ಅಶಿಸ್ತಿಗೆ ಪ್ರೋತ್ಸಾಹ

ವಿದ್ಯಾರ್ಥಿಗಳು ಇಂತಹ ಅನೀತಿಗಳ ವಿರುದ್ಧ ಪ್ರತಿಭಟಿಸದಿರಲೆಂದು ಈ ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತು ಬದ್ಧ ಜೀವನ ಕ್ರಮಕ್ಕೆ ವ್ಯತಿರಿಕ್ತವಾದ ಬೇರೆಲ್ಲಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಾರೆ. ವಿದ್ಯಾರ್ಥಿಗಳ ಪ್ರಕಾರ ವಿದ್ಯಾರ್ಥಿಗಳ ಮಧ್ಯೆ ಉತ್ತರ ಭಾರತದವರು, ದಕ್ಷಿಣ ಭಾರತದವರು ಎಂಬ ಒಡಕು ತಂದಿಡುವುದು, ವಿದ್ಯಾರ್ಥಿಗಳು ಮಾದಕ ವಸ್ತುಗಳ ಸೇವನೆಯಲ್ಲಿ ತೊಡಗಿದ್ದರೂ ವಿರೋಧಿಸದಿರುವುದು, ರ್‍ಯಾಗಿಂಗ್ ತರಹದ ಹಿಂಸಾಕೃತ್ಯಗಳನ್ನು ತಡೆಯದಿರುವುದು; ಈ ಲೇಖಕನೇ ಕಂಡ ಹಾಗೆ ಹುಡುಗರು/ಹುಡುಗಿಯರು Corex, Phencidil ತರಹದ ಔಷಧಿಗಳನ್ನು ಮಾದಕ ಪದಾರ್ಥಗಳಾಗಿ ಸೇವಿಸುತ್ತಿದ್ದರೂ ಇದರ ಬಗ್ಗೆ ಗಮನ ಹರಿಸಿಲ್ಲ. ಒಂದಷ್ಟು ಕಾಲೇಜುಗಳ ಬಳಿ ಪಾನ್‌ಪರಾಗ್, ಗುಟ್ಕಾ ತರಹದ ಹೊಗೆಸೊಪ್ಪು ಪದಾರ್ಥಗಳ ಮಾರಾಟ ದಿನಕ್ಕೆ 1500-2000!! ರೂ. ನಷ್ಟು.

ಪುಟ 8 ಕ್ಕೆ

'ಸ್ವದೇಶಿ' ಸರ್ಕಾರದ ವಿದೇಶಿ ವಂಚನೆ

1998-99 ರಲ್ಲಿ ಆಳಿದ ಬಿಜೆಪಿ ಸರ್ಕಾರದ ಹಗರಣಗಳಿಗೆ ಲೆಕ್ಕವೇ ಇಲ್ಲ. ಟೆಲಿಕಾಂ ಹಗರಣ, ಉಕ್ಕು ಬೆಲೆ ಹಗರಣ, ಮಿಲಿಟರಿ ಖರೀದಿ ಹಗರಣ ಇತ್ಯಾದಿ ಒಂದೊಂದು ಬೃಹತ್ ಹಗರಣಗಳೇ. ಹವಾಲ ಪ್ರಕರಣದ ಆರೋಪಿ ಅರ್ಥಸಚಿವ ಯಶವಂತ ಸಿನ್ಹಾ ಆಗಲೂ ಉಕ್ಕು ಬೆಲೆ ಹಗರಣದ ಭಾಗಿದಾರನೆಂದು ಆಪಾದಿತ. ವಿದೇಶಿ ಬಂಡವಾಳ ಸಂಸ್ಥೆಗಳು ಭಾರತಕ್ಕೆ ಮಾಡಿರುವ 3000 ಕೋಟಿ ರೂ. ಬಂಡವಾಳ ಲಾಭದ ಮೇಲಿನ ತೆರಿಗೆ ವಂಚನೆಯಲ್ಲಿ ಕೇಂದ್ರದಲ್ಲಿ ಯಶವಂತ ಸಿನ್ಹಾ ಮತ್ತು ಅವನ ಸೊಸೆಯ ನೇರ ಕೈವಾಡ ಎದ್ದು ಕಾಣುವಂತಿದೆ.

3000 ಕೋಟಿ ರೂ ಹಗರಣದಲ್ಲಿ ಯಶವಂತ್‌ಸಿನ್ಹಾ-ವಾಜಪೇಯಿ ಸರ್ಕಾರ ದೇಶವನ್ನು ವಂಚಿಸುವ ಮತ್ತೊಂದು ಹಗರಣವನ್ನು ನಡೆಸಿದೆ. ದೇಶದ ಬೊಕ್ಕಸಕ್ಕೆ ಅಪಾರ ಪ್ರಮಾಣದ ನಷ್ಟವಾಗಿದೆ. 1999ರಲ್ಲಿ ಟೆಲಿಕಾಂ ಹಗರಣ, ಸಕ್ಕರೆ ಹಗರಣಗಳನ್ನು ನಡೆಸಿ ಸಾವಿರಾರು ಕೋಟಿಗಳನ್ನು ಭಾರತದ ಜನತೆಗೆ ವಂಚಿಸಿದ್ದನ್ನು ಮರೆಯುವ ಮೊದಲೇ, ಭಾರತದ ಷೇರು ಮಾರುಕಟ್ಟೆಯಲ್ಲಿ ವಿಪರೀತ ಲಾಭ ಗಳಿಸುತ್ತಿರುವ ವಿದೇಶೀ ಸಾಂಸ್ಥಿಕ (ಬಂಡವಾಳ) ಹೂಡಿಕೆದಾರರು (FII-Foreign Institutional Investors) ತಮ್ಮ ಲಾಭಕ್ಕೆ ಸರಿಯಾದ ತೆರಿಗೆಯನ್ನು ಕೊಡಬೇಕಾಗಿಲ್ಲವೆಂದು ತೀರ್ಮಾನಿಸಿ ದೇಶಕ್ಕೆ ಸುಮಾರು 3000 ಕೋಟಿ ರೂಗಳ ಬೃಹತ್ ವಂಚನೆಯನ್ನು ಮಾಡಿದ್ದಾರೆ.

ಈ ವರ್ಷದ ಏಪ್ರಿಲ್ ತಿಂಗಳಲ್ಲಿ ಆದಾಯ ತೆರಿಗೆ ಇಲಾಖೆಯವರು 5 ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಗೆ ನೋಟಿಸನ್ನು ಜಾರಿ ಮಾಡಿ ಅವರು ತಮ್ಮ ಬಂಡವಾಳದ ಮೇಲೆ ಗಳಿಸಿರುವ ಲಾಭಕ್ಕೆ (ಅಂದರೆ ತಮ್ಮ



ಷೇರುಗಳನ್ನು ಮಾರುವುದರಿಂದ ಬರುವ ಲಾಭಕ್ಕೆ) ಸರಿಯಾದ ತೆರಿಗೆಯನ್ನು ಕಟ್ಟಬೇಕೆಂದು ಹೇಳಿದರು. ನಮ್ಮ ದೇಶದ ಈ ಕಾನೂನನ್ನು ಗೌರವಿಸಿ ತೆರಿಗೆ ಕಟ್ಟುವ ಬದಲಿಗೆ ಈ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಭಾರತದ ಷೇರು ಮಾರುಕಟ್ಟೆಯಿಂದ ತಮ್ಮ ಹೂಡಿಕೆಯನ್ನು ವಾಪಸ್ ತೆಗೆಯುವ ಬೆದರಿಕೆಯನ್ನು ಹಾಕಿದರು! ಇದ್ದಕ್ಕಿದ್ದಂತೆ ಗಾಬರಿಗೊಳಗಾಗಿ ಮಧ್ಯ ಪ್ರವೇಶಿಸಿದ ಹಣಕಾಸು ಮಂತ್ರಿ ಯಶವಂತ ಸಿನ್ಹಾರವರು ಈ ವಿದೇಶಿ ಹೂಡಿಕೆದಾರರು ಕಾನೂನುಬದ್ಧ ತೆರಿಗೆಯನ್ನು ಕಟ್ಟಬೇಕಾಗಿಲ್ಲ ಎಂದು ಘೋಷಿಸಿದರು. ಮಾತ್ರವಲ್ಲ ಮಾರಿಷಸ್ ಎಂಬ ಒಂದು ಸಣ್ಣ ದೇಶದಲ್ಲಿ ನೋಂದಣಿ ಮಾಡಿಕೊಂಡಿರುವ ವಿದೇಶೀ ಸಾಂಸ್ಥಿಕ ಹೂಡಿಕೆದಾರರು ಭಾರತದಲ್ಲಿ ತೆರಿಗೆಯನ್ನು ಕಟ್ಟಬೇಕಾಗಿಲ್ಲ ಎಂದು ಸರ್ಕಾರಿ ಸುತ್ತೋಲೆಯನ್ನೂ ಹೊರಡಿಸಿದರು.

ಇದಕ್ಕೆ ಕೊಟ್ಟ ಕಾರಣವೇನು?

ಮಾರಿಷಸ್ ದೇಶದೊಂದಿಗೆ ಭಾರತವು ಮಾಡಿಕೊಂಡಿರುವ 'ದ್ವಿ' ತೆರಿಗೆ ತಡೆ ಒಪ್ಪಂದ (DTAA- Double Tax Avoidance Agreement) ದ ಪ್ರಕಾರ ಮಾರಿಷಸ್‌ನಲ್ಲಿ ನೋಂದಣಿಯಾದ ಈ ಕಂಪನಿಗಳು ಬಾರತದಲ್ಲಿ ತೆರಿಗೆಯನ್ನು ಕಟ್ಟಬೇಕಾಗಿಲ್ಲ! ವಂಚನೆಯ ಜಾಲ ಬಯಲಾಗತೊಡಗಿದ್ದು ಇಲ್ಲಿಂದಲೇ.

ಭಾರತವು ಇಂತಹ DTAA ಒಪ್ಪಂದಗಳನ್ನು ಹಲವಾರು ದೇಶಗಳೊಂದಿಗೆ ಮಾಡಿಕೊಂಡಿದೆ. ಅಮೇರಿಕಾದ ಜೊತೆಯೂ ಒಪ್ಪಂದವಾಗಿದೆ. ಆದರೆ ಈ ಒಪ್ಪಂದಗಳೆಲ್ಲಾ ಹೇಳುವುದೇನೆಂದರೆ ಯಾವುದೇ ವಿದೇಶೀ ಸಾಂಸ್ಥಿಕ ಹೂಡಿಕೆದಾರ ಕಂಪನಿಯು ಯಾವ ದೇಶದಲ್ಲಿ ಲಾಭ ಮಾಡುತ್ತದೆಯೋ ಆ ದೇಶದಲ್ಲಿ ತೆರಿಗೆಯನ್ನು ಕಟ್ಟಬೇಕು.

ಉದಾ: ಅಮೇರಿಕಾದಲ್ಲಿ ನೋಂದಣಿಯಾಗಿರುವ ಕಂಪನಿಯು ಭಾರತದ ಷೇರು ಮಾರುಕಟ್ಟೆಯಲ್ಲಿ ಲಾಭ ಮಾಡಿದರೆ, ಆ ಲಾಭಕ್ಕನುಗುಣವಾಗಿ ಇಲ್ಲಿ ತೆರಿಗೆ ಕಟ್ಟಬೇಕು ಮತ್ತು ಅಮೇರಿಕದಲ್ಲಿ ಡಿವಿಡೆಂಡ್ ತೆರಿಗೆಯನ್ನು ಕಟ್ಟಬೇಕು.

ಇದಕ್ಕೆ ಪೂರ್ತಿ ಭಿನ್ನವಾದಂತಹ ಒಪ್ಪಂದವನ್ನು ಮಾರಿಷಸ್ ಜೊತೆಯಲ್ಲಿ ಮಾಡಲಾಗಿದೆ. ಯಾವುದೇ ದೇಶದ ಇಂತಹ ಕಂಪನಿಗಳು ಮಾರಿಷಸ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದು, ಭಾರತದ ಷೇರು ಮಾರುಕಟ್ಟೆಯಲ್ಲಿ ಬಂಡವಾಳ ತೊಡಗಿಸಿ ಲಾಭ ಮಾಡಿದರೆ ಆ ಲಾಭಕ್ಕೆ ತೆರಿಗೆ ಕಟ್ಟಬೇಕಾಗಿಲ್ಲ. ಈ ರೀತಿ ವಂಚಿಸಬೇಕೆನ್ನುವ ಕಂಪನಿಗಳಿಗೆ ಮಾರಿಷಸ್ ಒಂದು ಅಂಚೆ ಪೆಟ್ಟಿಗೆಯಿದ್ದಂತೆ.

ಇಷ್ಟು ಮಾತ್ರವಲ್ಲ, ಮಾರಿಷಸ್‌ನಲ್ಲಿ ಇಂತಹ ಲಾಭದ ಮೇಲೆ ತೆರಿಗೆ ಹಾಕುವ ಪದ್ಧತಿಯೇ ಇಲ್ಲ. ಹೀಗಾಗಿ ಯಾವುದೇ ಕಂಪನಿಗೆ 'ದ್ವಿ' ತೆರಿಗೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ರೀತಿಯಾಗಿ ಎರಡೂ ಕಡೆ ಲಾಭ ಮಾಡುವ ಕಾರಣಕ್ಕಾಗಿ ವಿದೇಶೀ ಸಾಂಸ್ಥಿಕ ಹೂಡಿಕೆದಾರ ಕಂಪನಿಗಳು ಮಾರಿಷಸ್‌ನಲ್ಲಿ ನೋಂದಣಿ ಮಾಡಿಕೊಳ್ಳುವ ಮೂಲಕ ಸಂಪೂರ್ಣ ತೆರಿಗೆ ವಿನಾಯಿತಿಯ ಲಾಭವನ್ನು ಮಾಡುತ್ತಿವೆ. ವಾಜಪೇಯಿ ಸರ್ಕಾರದ ಇಂತಹ ಉದ್ದೇಶಪೂರ್ವಕ ದೋಷವನ್ನು ಉಪಯೋಗಿಸಿ ಜಗತ್ತಿನ, ಮುಖ್ಯವಾಗಿ ಅಮೇರಿಕಾದ, ನೂರಾರು ಕಂಪನಿಗಳು ಸಾವಿರಾರು ಕೋಟಿ ರೂಗಳನ್ನು ದೇಶಕ್ಕೆ ವಂಚಿಸಿವೆ.

ಮೋಸ ಬಯಲಾಯಿತು

ಅಮೇರಿಕಾದ ಮೇರಿಲ್ಯಾಂಡ್‌ನಲ್ಲಿರುವ 'ಇಂಡಿಯಾ ಫಂಡ್' ಎಂಬ ವಿದೇಶೀ ಸಾಂಸ್ಥಿಕ ಹೂಡಿಕೆದಾರ ಕಂಪನಿಯೊಂದು ಮಾರಿಷಸ್‌ನಲ್ಲಿ ತನ್ನ ಶಾಖಾ ಕಛೇರಿಯೊಂದನ್ನು ತೆರೆದಿದೆ. ಭಾರತದಲ್ಲಿ ಇದು ನೇರವಾಗಿ ಹಣ ತೊಡಗಿಸದೆ, ಮಾರಿಷಸ್ ಜೊತೆಯಲ್ಲಿ ಭಾರತ ಹೊಂದಿರುವ ದೋಷಪೂರಿತ DTAA ದ ಲಾಭವನ್ನು ಪಡೆಯಲು ತನ್ನ ಎಲ್ಲಾ ಹೂಡಿಕೆಯನ್ನು ಮಾರಿಷಸ್ ಮೂಲಕ ಮಾಡಿದೆ.

1999 ರಲ್ಲಿ ಈ ಕಂಪನಿಯ ನಿವ್ವಳ ಸಂಪತ್ತಿನ ಮೌಲ್ಯವು 300 ಮಿಲಿಯನ್ ಡಾಲರ್‌ನಿಂದ 700 ಮಿಲಿಯನ್ ಡಾಲರ್‌ಗೆ ಏರಿದೆ. ಅಂದರೆ, ಒಂದು ಡಾಲರ್‌ಗೆ 44 ರೂಗಳ ರೀತಿಯಲ್ಲಿ ಲೆಕ್ಕ ಹಾಕಿದರೂ ಒಂದೇ ವರ್ಷದಲ್ಲಿ 1760 ಕೋಟಿ ರೂಗಳನ್ನು ಲಾಭ ಮಾಡಿದೆ. ಇಷ್ಟೊಂದು ಲಾಭ ಮಾಡಿದ ಈ ಕಂಪನಿ ಭಾರತಕ್ಕೆ ಒಂದೇ ಒಂದು ಪೈಸೆ ತೆರಿಗೆಯನ್ನು ಕಟ್ಟಲಿಲ್ಲ. ಮಾರಿಷಸ್‌ನಲ್ಲಿ ನೋಂದಣಿ ಇದ್ದರೂ ಅಲ್ಲಿ ಇಂತಹ ತೆರಿಗೆ ಪದ್ಧತಿ ಇಲ್ಲದಿರುವುದರಿಂದ ಅಲ್ಲಿಯೂ ಒಂದು ಪೈಸೆ ತೆರಿಗೆ ಕಟ್ಟಲಿಲ್ಲ. ಮಾತ್ರವಲ್ಲ, ಅಮೇರಿಕದಲ್ಲೂ ಕಟ್ಟಲಿಲ್ಲ ಏಕೆಂದರೆ ಇದು ಮಾರಿಷಸ್‌ನಲ್ಲಿ ಲಾಭ ಮಾಡಿಲ್ಲವಲ್ಲ ಅದಕ್ಕೆ!

ಈ ಇಂಡಿಯಾ ಫಂಡ್ ಕಂಪನಿಗೊಬ್ಬರು ಬಂಡವಾಳ ಹೂಡಿಕೆ ಮೇನೇಜರ್ ಇದ್ದಾರೆ. ಅವರು ಶ್ರೀಮತಿ ಪುನೀತಾ ಕುಮಾರ್ ಸಿನ್ಹಾ ಇವರು ಬೇರಾರೂ ಅಲ್ಲ. ಹಣಕಾಸು ಮಂತ್ರಿ ಯಶವಂತ ಸಿನ್ಹಾರ ಸೊಸೆ.

ಈ ಕಂಪನಿಯ ದಾಖಲೆಗಳ ಪ್ರಕಾರ ಶ್ರೀಮತಿ ಪುನೀತಾ ಸಿನ್ಹಾರವರಿಗೆ ಸುಮಾರು 24 ಕೋಟಿ ರೂಗಳನ್ನು (5.3 ಮಿಲಿಯನ್ ಡಾಲರ್) ಈ ಕಂಪನಿಯಿಂದ ಪಾವತಿಸಲಾಗಿದೆ. ಭಾರತದ ದೇಶಪ್ರೇಮಿ ಹಣಕಾಸು

ಪುಟ 8 ಕ್ಕೆ

ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ಹಲ್ಲೆ

ಚರ್ಚ್‌ಗಳ ಮೇಲೆ ಬಾಂಬ್

ಸಿಮೆಂಟ್ ನಗರವೆಂದೇ ಖ್ಯಾತವಾಗಿರುವ ವಾಡಿಯ ಸೇಂಟ್ ಅನ್ನೀಸ್(ಕ್ಯಾಥೋಲಿಕ್) ಚರ್ಚ್‌ನ ಆವರಣದಲ್ಲಿ ಈ ಜೂನ್ 8 ರಂದು ಬೆಳಿಗ್ಗೆ ಎರಡು ಬಾಂಬ್‌ಗಳು ಸ್ಫೋಟಗೊಂಡಿವೆ. ಈ ಚರ್ಚ್ ಗ್ರಾಮದ ಹೃದಯಭಾಗದಲ್ಲಿದ್ದು ಸುತ್ತಲೂ ಹಿಂದೂ-ಮುಸ್ಲಿಂ ಧರ್ಮಗಳ ಜನರು ವಾಸವಾಗಿದ್ದು ಸೌಹಾರ್ದತೆಯ ವಾತಾವರಣ ಕಂಡುಬರುತ್ತದೆ. ಈ ಊರಿನಲ್ಲಿರುವ ಒಟ್ಟು ಕ್ರಿಶ್ಚಿಯನ್ ಕುಟುಂಬಗಳು 180. ಎರಡು ಕ್ಯಾಥೊಲಿಕ್ ಇನ್ನೆರೆಡು ಮೆಥೊಡಿಸ್ಟ್ ಚರ್ಚ್‌ಗಳು ಇವೆ. ಈ ಘಟನೆಯ ನಂತರ ಎಲ್ಲರಲ್ಲಿ ಆತಂಕ, ತಲ್ಲಣಗಳು ಹರಡಿವೆ.

ಘಟನೆ ನಡೆದಿರುವುದು ಹೀಗೆ: 8 ರ ಬೆಳಗಿನ ಜಾವ ಸುಮಾರು 6.05 ಗಂಟೆ ಹೊತ್ತಿಗೆ ಸ್ಫೋಟದ ಭಯಂಕರ ಶಬ್ದ ಕೇಳಿಸಿದೆ. ಈ ಶಬ್ದ ಎಷ್ಟು ಪ್ರಬಲವಾಗಿತ್ತೆಂದರೆ 3 ಕಿ.ಮಿ.ನಲ್ಲಿರುವ ರಾವೂರಿನ ಜನರೂ ಕೇಳಿದ್ದಾರಂತೆ. ಅಕ್ಕಪಕ್ಕದ ಮನೆಯವರು ಹೊರಗೋಡಿ ಏನಾಯ್ತು ಎಂದು ನೋಡಿದರೆ ಅವರ ಅಂಗಳದಲ್ಲಿ ಕೆಲವು ಕಲ್ಲುಗಳು ಸಿಡಿದಿರುವುದು ಕಾಣಿಸಿದೆ ಮತ್ತು ದಟ್ಟವಾದ ಹೊಗೆ ಅಲ್ಲೆಲ್ಲಾ ಮುಸುಕಿದೆ. ಚರ್ಚ್‌ನ ಪ್ರಾರ್ಥನಾ ಮಂದಿರದ ಎಡಭಾಗದ ಸಿಮೆಂಟ್ ಪಿಲ್ಲರ್‌ನ ಪಕ್ಕದಲ್ಲಿ ಬಾಂಬ್ ಸ್ಫೋಟಗೊಂಡಿದ್ದು ಗೋಡೆ ಪಕ್ಕ ಅರ್ಧ ಅಡಿಯಷ್ಟು ಕುಣಿ ಬಿದ್ದಿದ್ದು ಕಿಟಕಿಯ ಒಳಭಾಗದ ಐದು ಬಾಗಿಲುಗಳು ಮುರಿದು ಚೆಲ್ಲಾಪಿಲ್ಲಿಯಾಗಿವೆ. ಸ್ಫೋಟದಿಂದ ಗೋಡೆಯಲ್ಲಿ ಬಿರುಕುಗಳು ಉಂಟಾಗಿವೆ. ಸ್ಫೋಟದ ಸುಮಾರು 20 ಅಡಿ ಆಚೆ-ಈಚೆ ಬದಿಯಲ್ಲಿನ ಅಶೋಕ ವೃಕ್ಷದ ಕೆಲವು ಕೊಂಬೆಗಳು ಉದುರಿಬಿದ್ದು ಎಲೆಗಳು ಸುಟ್ಟಂತೆ ಕಾಣುತ್ತವೆ ಹಾಗೂ ಸಿಮೆಂಟ್ ಗೋಡೆಗಳಿಗೆ ಸ್ಫೋಟದ ಲೋಹದ ತುಂಡುಗಳು ಬಡಿದು ಸಿಮೆಂಟನ್ನು ಉದುರಿಸಿದ ಗುರುತುಗಳು ಅನೇಕ.

ನಮ್ಮ ನಿಯೋಗದ ಜೊತೆ ಸಹಕರಿಸುತ್ತಿದ್ದ ಚರ್ಚ್‌ನ ರಾಯಪ್ಪ, ಜೇಮ್ಸ್‌ರವರು ಪ್ರಾರ್ಥನಾ ಮಂದಿರದೊಳಗೆ ಕರೆದೊಯ್ದರು. ಅಸ್ತವ್ಯಸ್ತವಾಗಿ ಬೆಂಚ್‌ಗಳ ಮೇಲೆ, ಕೆಳಗೆ ಬಿದ್ದಿರುವ ಕಿಟಕಿ, ಬಾಗಿಲುಗಳು, ಕಲ್ಲುಗಳ ಚೂರುಗಳು, ಮಾತ್ರವಲ್ಲ ಇನ್ನೊಂದು ಬದಿಯ ಗೋಡೆಗೆ ಬಡಿದಿರುವ ಲೋಹದ ತುಣುಕುಗಳು, ಪುಡಿಪುಡಿಯಾದ ಮೇಲ್ಭಾಗದ ಗಾಜುಗಳು, ಹರಡಿಕೊಂಡಿದ್ದವು. ಬಾಲಯೇಸುವನ್ನು ಎರಡುಕೈಗಳಲ್ಲಿ ಎತ್ತಿಕೊಂಡಿರುವ ತಾಯಿಯ ಎರಡೂ ಬದಿಗಳಲ್ಲಿ ಕಂಬಗಳಿದ್ದು, ಅದರ ಮೇಲು ಹೊದಿಕೆಯ ಕಲ್ಲಿನ ಕಮಾನು ಸ್ಫೋಟಕ್ಕೆ ಒಡೆದಿದೆ.

ಚರ್ಚ್‌ನ ಹತ್ತಿರದಲ್ಲೇ ಮನೆ ಇರುವ ಮಹ್ಮದ್ ರಫಿ ಹೇಳುತ್ತಾನೆ "ಸ್ಫೋಟದ ಭಾರೀ ಶಬ್ದ ಕೇಳಿ ಇದು ವಿದ್ಯುತ್ ಕಂಬದ ಟ್ರಾನ್ಸ್‌ಫಾರ್ಮರ್ ಇರಬೇಕೆಂದು ಹೊರಗೋಡಿ ಬಂದು ನೋಡಿದೆ. ದಟ್ಟ ಹೊಗೆ ಆವರಿಸಿದ್ದು ಕಂಡು ಚರ್ಚ್‌ನ ಕಾಂಪೌಂಡಿನೊಳಗೆ ಧಾವಿಸಿ

ಪುಟ 8 ಕ್ಕೆ



ಸಿಪಿಐ(ಎಂ) ನಿಯೋಗದ ಭೇಟಿ

ಬಾಂಬ್ ಸ್ಫೋಟಗೊಂಡ ಪ್ರದೇಶಕ್ಕೆ 9ರಂದು ಸಿಪಿಐ(ಎಂ) ನಿಯೋಗವು ಭೇಟಿ ನೀಡಿತು. ಪಕ್ಷದ ಗುಲ್ಬರ್ಗ ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ, ಎಸ್.ವೈ.ಗುರುಶಾಂತ್, ರಾಜ್ಯ ಸಮಿತಿ ಸದಸ್ಯೆ ನೀಲಾ ಕೆ., ಜಿಲ್ಲಾ ಸಮಿತಿ ಸದಸ್ಯ ಶಾಂತಕುಮಾರ್, ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಶ್ರೀಮಂತ ಹೊಳ್ಕರ್ ನಿಯೋಗದಲ್ಲಿದ್ದರು. ಘಟನೆಯ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದ ನಿಯೋಗವು ಈ ಕೃತ್ಯವನ್ನು ಉಗ್ರವಾಗಿ ಖಂಡಿಸಿದೆ. ಈ ಘಟನೆಯಲ್ಲಿ ಆರ್.ಎಸ್.ಎಸ್.-ಪರಿವಾರದ ಕೈವಾಡವಿದ್ದು ಕೂಡಲೇ ಆಳವಾದ ತನಿಖೆ ನಡೆಸುವಂತೆ ಕ್ರಮವಹಿಸಲು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ. ಮುಖ್ಯಮಂತ್ರಿ, ಗೃಹಸಚಿವರು ಭೇಟಿ ನೀಡಬೇಕೆಂದು ಮತ್ತು ಕೂಡಲೇ ಸೂಕ್ತವಾದ ರಕ್ಷಣೆಯನ್ನು ಅಲ್ಪಸಂಖ್ಯಾತರಿಗೆ ನೀಡಬೇಕೆಂದು ಆಗ್ರಹಿಸಿದೆ. ಅಲ್ಲದೇ ಜನತೆ ಶಾಂತಿ-ಸೌಹಾರ್ದತೆ ಕಾಪಾಡಿಕೊಂಡು ಬರಲು ಮತ್ತು ಎಲ್ಲಾ ವಿಭಾಗಗಳ, ಧರ್ಮಗಳ ಜನತೆ ಪ್ರತಿಭಟಿಸಲು ವಿನಂತಿಸಿದೆ.

ಸಂಪೂರ್ಣ ಸಾಕ್ಷರತೆ ಹಾಗೂ ಜನವಿಜ್ಞಾನ ಆಂದೋಲ
ಸಾಧನೆಗೈದಿರುವ ಕೇರಳ ಇದೀಗ 'ಜನರೂಪಿತ ಯೋಜನೆ' (ಹೀ

ವಿಶ್ವದ ಗಮನ ಸೆಳೆದಿರುವ ಕೇರಳ

ಕೆ.ಮಹಾಂತೇಶ್

'ವಿಥುರಾ' ಕೇರಳದ ತಿರುವನಂತಪುರ ಜಿಲ್ಲೆಯಲ್ಲಿ ಬರುವ ಒಂದು ದೊಡ್ಡಗ್ರಾಮ. ಕಳೆದ ಮೂರು ವರ್ಷಗಳಿಂದ ಕೇರಳದಲ್ಲಿ ಜಾರಿಯಾಗುತ್ತಿರುವ ಮತ್ತು ವಿಶ್ವದ ಗಮನವನ್ನೇ ಸೆಳೆದಿರುವ ಜನರೂಪಿತ ಯೋಜನೆಯನ್ನು ಯಶಸ್ವಿಯಾಗಿ ತನ್ನ ಪಂಚಾಯ್ತಿ ವ್ಯಾಪ್ತಿಯಲ್ಲಿ ಜಾರಿಗೊಳಿಸಿ ಆ ದಿಶೆಯಲ್ಲಿ ಸಾಕಷ್ಟು ಪ್ರಸಿದ್ಧಿಯನ್ನು ಪುರಸ್ಕಾರವನ್ನು ಗಳಿಸಿರುವ ಪಂಚಾಯ್ತಿ.

ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಪ್ರಭುತ್ವ ರಂಗ ಸರ್ಕಾರ ಈ ಜನರೂಪಿತ ಯೋಜನೆಯನ್ನು ಜಾರಿ ಮಾಡಲೊರಟಾಗ ಅಲ್ಲಿನ ವಿರೋಧ ಪಕ್ಷವಾದ ಕಾಂಗ್ರೆಸ್(ಐ) ಆಡಳಿತದಲ್ಲಿರುವ ಎಡರಂಗವು ಪಂಚಾಯ್ತಿ ಆಡಳಿತವನ್ನು ತನ್ನ ಸ್ವಾರ್ಥಕ್ಕೆ ಬಳಕೆ ಮಾಡಲೊರಟಿದೆ ಎಂದು ಬೊಬ್ಬೆ ಹಾಕಿತ್ತು. ಆದರೆ ಕಳೆದ ಮೂರು ವರ್ಷದ ಅನುಭವಗಳು ಎಲ್ಲಾ ಅನುಮಾನಗಳನ್ನು ದೂರ ಮಾಡಿದೆ ಮಾತ್ರವಲ್ಲ, ಭ್ರಷ್ಟಾಚಾರ ರಹಿತ ಆಡಳಿತವನ್ನು ನೀಡುತ್ತಾ ಹಳ್ಳಿಗಳು ಅಭಿವೃದ್ಧಿ ಸಾಧಿಸುತ್ತ ಆಡಳಿತ ಸಂಪೂರ್ಣ ವಿಕೇಂದ್ರಿಕರಣಗೊಂಡು ಜನರು ನೇರವಾಗಿ ಆಡಳಿತದ ಎಲ್ಲಾ ಹಂತಗಳಲ್ಲಿ ಪಾಲ್ಗೊಳ್ಳುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ.

ಜನರೂಪಿತ ಯೋಜನೆ (Peopels Planing) ಎಂದರೇನು?

ಸರಳವಾಗಿ ಹೇಳುವುದಾದರೆ ಜನರೇ ನೇರವಾಗಿ ತಮ್ಮ ಗ್ರಾಮದ ಸಂಪನ್ಮೂಲಗಳು ನೆಲ, ಜಲ, ಬೆಳೆ, ಪಶುಗಳನ್ನು ಸಮರ್ಥವಾಗಿ ಬಳಸಿ ಜೀವನಕ್ಕೆ ಬೇಕಾದ ಪರಿಸ್ಥಿತಿ ಪರಿಸರವನ್ನು ತಾವೇ ರೂಪಿಸುಕೊಳ್ಳುವುದು ತಮ್ಮ ಹಳ್ಳಿಗಳಿಗೆ ಅಥವಾ ಗ್ರಾಮಕ್ಕೆ ಅವಶ್ಯಕವಾಗಿರುವ ಕುಡಿಯುವ ನೀರು ವಸತಿಗಳು, ಶೌಚಾಲಯಗಳು, ಶಾಲೆ, ಆಸ್ಪತ್ರೆ, ಇತ್ಯಾದಿಗಳನ್ನು ಪಡೆಮುಕೊಳ್ಳಲು ತಾವೇ ತಮ್ಮ ಹಳ್ಳಿಗಳ ಗ್ರಾಮಸಭೆಗಳಲ್ಲಿ ಯೋಜನೆಯನ್ನು ರೂಪಿಸುವುದು ಹಾಗೆ ಜನರೇ ರೂಪಿಸಿದ ಯೋಜನೆಯನ್ನು ಸಂಬಂಧಿಸಿದ ಪಂಚಾಯ್ತಿ ಸಭೆಯಲ್ಲಿ ಮಂಡಿಸಿ ಅನುಮೋದಿಸಿ ತಾಲೂಕು ಜಿಲ್ಲಾ ಮಂಡಳಿಗಳಿಂದ ಅನುಮೋದನೆ ಪಡೆದ ನಂತರದಲ್ಲಿ ಪಂಚಾಯ್ತಿ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರೂ ಸೇರಿದಂತೆ ಗ್ರಾಮದ ಎಲ್ಲಾ ಜನರು ಯೋಜನೆಯನ್ನು ಜಾರಿಗೊಳಿಸಲು ಶ್ರಮಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶ.

ಈ ಜನರೂಪಿತ ಯೋಜನೆಯ ಮತ್ತಷ್ಟು ವಿಶಿಷ್ಟವೆಂದರೆ ಪಂಚಾಯ್ತಿ ವ್ಯಾಪ್ತಿಯ ಯಾವುದೇ ಕಾಮಗಾರಿಗಳನ್ನು ಯಾವುದೇ ಕಂಟ್ರಾಕ್ಟರ್ ಪದ್ದತಿಗೆ ನೀಡುವುದನ್ನು ನಿಲ್ಲಿಸಿರುವುದು. ಎಲ್ಲಾ ರೀತಿಯ ಕಾಮಗಾರಿಗಳು ನೇರವಾಗಿ ಪಂಚಾಯ್ತಿ ಎಲ್ಲಾ ಸದಸ್ಯರ ಉಸ್ತುವಾರಿಯಲ್ಲಿ ಮತ್ತು ನೆರೆಹೊರೆಯ ಬಳಗ(Nighbour wood group) ನೇತೃತ್ವದಲ್ಲಿ ನಡೆಯುತ್ತದೆ.

ಭ್ರಷ್ಟಾಚಾರ ರಹಿತ, ಪಾರದರ್ಶಕ ಆಡಳಿತ

ಇದಕ್ಕೊಂದು ನಿದರ್ಶನ ಇಲ್ಲಿದೆ ನೋಡಿ! 1999 ರ ಸಾಲಿನಲ್ಲಿ ಈ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು 400 ಫಲಾನುಭವಿಗಳನ್ನು 'ಗ್ರಾಮ ಸಭೆ' ನೇರವಾಗಿ ಆಯ್ಕೆ ಮಾಡಿ, ಪಂಚಾಯ್ತಿ ಮೂಲಕ ವಿವಿಧ ರೀತಿಯ ಯೋಜನೆಗಳಿಗೆ ಸಹಾಯ ಧನವನ್ನು ನೀಡಿತ್ತು. ಆದರೆ ತಿರುವನಂತಪುರದ ಗ್ರಾಮೀಣಾಭಿವೃದ್ಧಿ ಮತ್ತು ಸಂಶೋಧನ ಕೇಂದ್ರದ ತಜ್ಞರ ತಂಡವೊಂದು ಇತ್ತೀಚೆಗೆ ಪಂಚಾಯ್ತಿಗೆ ಭೇಟಿ ನೀಡಿ ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಕುರಿತಂತೆ ಮಾಹಿತಿ ಸಂಗ್ರಹಿಸಿ ಈ ಪಂಚಾಯ್ತಿ ವ್ಯಾಪ್ತಿಯಲ್ಲಿ ಆಯ್ಕೆಗೊಂಡಿರುವ ಫಲಾನುಭವಿಗಳ ಪೈಕಿ 400 ಜನರನ್ನು ಆಯ್ಕೆ ಮಾಡುವಲ್ಲಿ ಹಣದ



ಜನರೂಪಿತ ಯೋಜನೆಯಲ್ಲಿ ಜನರಿಂದ ನಿರ್ಮಾಣಗೊಂಡ ಕಾಲುವೆ

ವ್ಯವಹಾರ ನಡೆದಿರುವುದೆಂದು (ಶೇ 2.00) ಎಂದು ಅನುಮಾನ ವ್ಯಕ್ತಪಡಿಸಿತ್ತು.

ಆದರೆ ನಮ್ಮ ತಂಡ ವಿಥುರ ಗ್ರಾಮಪಂಚಾಯ್ತಿಗೆ ಭೇಟಿ ನೀಡಿದ ಸಂದರ್ಭದಲ್ಲೇ ಅಲ್ಲಿನ ಪಂಚಾಯ್ತಿ ಅಧ್ಯಕ್ಷರು ಮತ್ತು ಗುಡ್ಡಗಾಡು ಜನಾಂಗದ ಮುಖಂಡ ಅಪ್ಪು ಕುಟ್ಟನ್‌ಕಣಿಯವರು ತಿರುವನಂತಪುರಕ್ಕೆ ಹೋಗಿ ಈ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸಿ, ಸಂಶೋಧನಾ ತಜ್ಞರ ತಂಡಕ್ಕೆ ಸವಾಲುಹಾಕಿದ್ದು ಹೀಗೆ.... "ವಿಥುರ ಪಂಚಾಯ್ತಿ ವ್ಯಾಪ್ತಿಯಲ್ಲಿ ಸರ್ಕಾರದ ಅನುದಾನವನ್ನು ವಿತರಿಸುವಲ್ಲಿ ಶೇ 2 ರಷ್ಟು ಭ್ರಷ್ಟಾಚಾರದ ಅನುಮಾನ ವ್ಯಕ್ತಪಡಿಸಿದ್ದೀರಿ. ಅದೂ ನಿರ್ದಿಷ್ಟವಾಗಿ ತಿಳಿಸಿಲ್ಲ. ಅದನ್ನು ನೀವು ಸಾಬೀತು ಪಡಿಸಿದರೆ ನಾನು ನನ್ನ ಅಧ್ಯಕ್ಷತೆಗೆ ರಾಜೀನಾಮೆ ನೀಡುತ್ತೇನೆ....' ಅವರ ಪ್ರಕಾರ ಈ ಅಧಿಕಾರಿಗಳು ಈ ಹಿಂದೆ ಆಡಳಿತ ನಡೆಸುತ್ತಿದ್ದವರೊಂದಿಗೆ ಹೊಂದಿದ್ದ 'ಗುಪ್ತ ಹೊಂದಾಣಿಕೆ'ಯೇ ಈ ರೀತಿಯ ಅಪಾದನೆಗೆ ಕಾರಣವೆನ್ನುತ್ತಾರೆ. ಈಗ ಆಡಳಿತದಲ್ಲಿ ಜನರೇ ನೇರವಾಗಿ ಪಾಲ್ಗೊಂಡು ಪ್ರತಿಯೊಂದನ್ನು ಪ್ರಶ್ನಿಸುತ್ತಿರುವುದರಿಂದ ಅಧಿಕಾರಿಶಾಹಿಗಳು ತತ್ತರಿಸುತ್ತಿದ್ದಾರೆ ಎಂದರು.

ಬಹಿರಂಗ ನೋಟಿಸ್ ಬೋರ್ಡ್‌ಗಳು

ಸರ್ಕಾರದಿಂದ ಬರುವ ಅನುದಾನದಲ್ಲಿ 'ಗ್ರಾಮಸಭೆ'ಗಳು ಆಯ್ಕೆ ಮಾಡುವ ಫಲಾನುಭವಿಗಳ ಹೆಸರನ್ನು ಅವರಿಗೆ ನೀಡಲಾಗಿರುವ ಸಹಾಯಧನದ ಮೊತ್ತವನ್ನು ಮತ್ತು ಈ ವರ್ಷದಲ್ಲಿ ಯಾವ್ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬುದನ್ನು ಪಂಚಾಯ್ತಿ ವ್ಯಾಪ್ತಿಯ ಹಲವಾರು ವೃತ್ತಗಳಲ್ಲಿ ಬಹಿರಂಗ ಫಲಕಗಳನ್ನು ಹಾಕಿ ಸಾರ್ವಜನಿಕ ಗಮನಕ್ಕೆ ತರಲಾಗುತ್ತದೆ: ಈ ಬಗ್ಗೆ ಯಾವುದೇ ತಕರಾರುಗಳು, ಭಿನ್ನಾಭಿಪ್ರಾಯಗಳಿದ್ದರೂ ಜನರು ನೇರವಾಗಿ ತಿಳಿಸಬಹುದಾಗಿದೆ. ಹೀಗಾಗಿ ಈ ಯೋಜನೆಗಳು-ಭ್ರಷ್ಟಾಚಾರ ಮುಕ್ತ ಪಾರದರ್ಶಕ ಆಡಳಿತ ನೀಡಲು ಪ್ರಾರಂಭಿಸಿವೆ.

ವಿಥುರ ಪಂಚಾಯ್ತಿ ವ್ಯಾಪ್ತಿಯಲ್ಲಿನ 11 ವಾರ್ಡುಗಳಲ್ಲಿ ವಾಸಿಸುತ್ತಿರುವ ಎಲ್ಲಾ ಎಸ್‌ಸಿ/ಎಸ್‌ಟಿ ಕುಟುಂಬಗಳೂ ಸ್ವಂತದ್ದಾದ ಮನೆಗಳನ್ನು ಹೊಂದಲು ಸಾಧ್ಯವಾಗಿರುವುದು ಮತ್ತು ಪ್ರತಿ 200 ಮೀಟರಿಗೊಂದರಂತೆ ಕುಡಿಯುವ ನೀರನ್ನು ಒದಗಿಸಿರುವುದು ಈ ಪಂಚಾಯ್ತಿಯ ಹೆಗ್ಗಳಿಕೆ. ಹೀಗಾಗಿ ಇದುವರೆಗೂ ಯಾವುದೇ ರೀತಿಯ ದೂರು ಈ ಪಂಚಾಯ್ತಿ ವಿರುದ್ಧ ದಾಖಲಾಗಿಲ್ಲ ಮಾತ್ರವಲ್ಲ, 1999 ನೇ ಸಾಲಿನಲ್ಲಿ ಇಡೀ ಕೇರಳಕ್ಕೆ 'ಮಾದರಿ ಪಂಚಾಯ್ತಿ' ಎಂಬ ಬಿರುದುಗಳಿಸಿ ಅದಕ್ಕಾಗಿ ರಾಜ್ಯ ಸರ್ಕಾರ ನೀಡುವ 10 ಲಕ್ಷ ರೂ.ಗಳನ್ನು ತನ್ನದಾಗಿಸಿಕೊಂಡಿದೆ. ಸರ್ಕಾರದ ಈ ಪ್ರಶಸ್ತಿ ಹಣದಿಂದ ಭೂರಹಿತ ಕಾರ್ಮಿಕರಿಗೆ ಭೂಮಿ ನೀಡುವ ಗುರಿ ಪಂಚಾಯ್ತಿಯದು.

ಈ ಹಿಂದೆ ಪಂಚಾಯ್ತಿಯು ಎಲ್ಲಾ ಕಾಮಗಾರಿಗಳನ್ನು ಕಂಟ್ರಾಕ್ಟ್‌ರಿಗೆ ವಹಿಸಿಕೊಡುತ್ತಿದ್ದರಿಂದ, ಸರ್ಕಾರದಿಂದ ಒಂದು ಲಕ್ಷ ಹಣ ಬಿಡುಗಡೆಯಾದರೆ ಕೆಲಸ ನಡೆಯುತ್ತಿದುದು ಶೇ 15 ರಷ್ಟು ಮಾತ್ರ. ಆದರೆ ಈಗ ಪಂಚಾಯ್ತಿಯ ಯಾವುದೇ ಕಾಮಗಾರಿಗಳನ್ನು ಫಲಾನುಭವಿ ಸಮಿತಿ(Bennifiary Committee) ಮತ್ತು ಸ್ವಯಂ ಸೇವಕರು, ನೇರವಾಗಿ ಭಾಗವಹಿಸಿ ಶ್ರಮ ಹಾಕುವುದರಿಂದ ಒಂದು ಲಕ್ಷ ರೂಗಳಲ್ಲಿ ಮೂರು ಲಕ್ಷ ರೂ.ಗಳ ಕಾಮಗಾರಿಗಳನ್ನು ಮುಗಿಸಬಹುದು. ಅಲ್ಲದೆ ಒಂದು ಕೋಟಿ ರೂಪಾಯಿಗಳ ದುಡಿಮೆಯನ್ನು ಜನರೇ ಮಾಡುತ್ತಾರೆ.

ಜನರೂಪಿತ ಯೋಜನೆ ಸಂಪೂರ್ಣ ಯಶಸ್ವಿಯಾಗಿದೆಯೇ?

ಪ್ರೊ. ಐಸಾಕ್‌ರವರ ಪ್ರಕಾರ 1000 ಪಂಚಾಯ್ತಿಯಲ್ಲಿ 250 ಪಂಚಾಯ್ತಿಗಳು ಮಾತ್ರ ಸದ್ಯಕ್ಕೆ ಈ ಜನರೂಪಿತ ಯೋಜನೆಯನ ಸಂಪೂರ್ಣವಾಗಿ ದಕ್ಷತೆಯಿಂದ ಜಾರಿ ಮಾಡುತ್ತಿವೆ ಉಳಿದ 750 ಪಂಚಾಯ್ತಿಗಳಲ್ಲಿ 25(ಪಂಚಾಯ್ತಿಗಳು ಸಂಪೂರ್ಣವಾಗಿ ಭ್ರಷ್ಟಾಚಾ ಕೂಪದಿಂದ ಹೊರಬಂದು 'ಜನಪರ ಆಡಳಿತ ನೀಡಲು ಸಾಧ್ಯವಾಗಿಲ್ಲ. ಅವು ಭ್ರಷ್ಟರ ಆಡಳಿತದ ಸಿಕ್ಕುಕೊಂಡಿವೆ. ಉಳಿದಂತೆ 500 ಪಂಚಾಯ್ತಿಗ ಎರಡೂ ರೀತಿಯ ಆಡಳಿತವನ್ನು ನೀಡುತ್ತಿವೆ ಆದ್ದರಿಂದ ಈಗ ನಮ್ಮ ಮುಂದಿರುವ ಗುರಿ 25(ಪಾರದರ್ಶಕ ಆಡಳಿತ ನೀಡುತ್ತಿರುವ ಪಂಚಾಯ್ತಿಗ ಜೊತೆ ಹೊಯ್ದಾಟದಲ್ಲಿರುವ 500 ಪಂಚಾಯ್ತಿಗಳನ್ನ ಸರಿಪಡಿಸಲು ಪ್ರಯತ್ನಿಸುವುದು. ಈ ಪ್ರಯತ್ನದಲ್ಲಿ ಯಶಸ್ವಿಯಾದರೆ ಉಳಿದ 250 ಪಂಚಾಯ್ತಿಗಳನ್ನ ಸರಿಪಡಿಸುವುದು ಕಷ್ಟವೇನಲ್ಲ ಎನ್ನುತ್ತಾರೆ.

ಆದರೆ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಸಾಕಷ್ಟು ಸಮಯದಿಂದ ಹಣವನ್ನು ಪಂಚಾಯ್ತಿ ಮೂಲಕ ಲೂಟಿ ಮಾಡಿರುವ ಭ್ರಷ್ಟ ಆಡಳಿತಗಾರರು, ಅಧಿಕಾರಶಾಹಿಗಳು, ಕಂಟ್ರಾಕ್ಟರುಗಳು ಈ ಯೋಜನೆಯನ್ನು ವಿಫಲಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಜನರ ಬೆಂಬಲ ಈ ಯೋಜನೆಗೆ ಸ್ಫೂರ್ತಿದಾಯಕವಾಗಿರುವುದರಿಂದ ಅವರ ಪ್ರಯತ್ನ ಯಶಸ್ಸು ಕಾಣುತ್ತಿಲ್ಲ.

ರಾಜಕೀಯ ಬದ್ಧತೆ ಮತ್ತು ಇಚ್ಛೆ ಅಗತ್ಯ

ಕರ್ನಾಟಕದಲ್ಲಿ 1986 ರಿಂದಲೇ ಅಧಿಕಾರ ವಿಕೇಂದ್ರೀಕರಣದ ಮೂಲಕ ಜನರ ಬಳಿಗೆ ಆಡಳಿತವನ್ನು ತೆಗೆದುಕೊಂಡು ಹೋಗುವ ಪ್ರಯತ್ನ ನಡೆಯುತ್ತಿದ್ದರೂ ಸಾಕಷ್ಟು ಯಶಸ್ಸು ಕಾಣಲಿಲ್ಲ. ಅದಕ್ಕೆ ತಕ್ಕ ವ್ಯವಸ್ಥೆಯೂ ಇಲ್ಲ. ಆರಂಭದಲ್ಲಿ ಪಂಚಾಯ್ತಿ ವ್ಯಾಪ್ತಿಯಲ್ಲಿ 'ಗ್ರಾಮ ಸಭೆಗಳೆಂಬ' ಅಣಕದ ಪ್ರಯತ್ನಗಳು ನಡೆದರೂ, ಬಹುಸಂಖ್ಯಾತರು, ದಲಿತರನ್ನು, ಮಹಿಳೆಯರನ್ನು ಇತರೆ ವಿಭಾಗಗಳನ್ನು ದೂರ ಸರಿಸಿ ದೊಡ್ಡ ಗೌಡರುಗಳ - ಶ್ರೀಮಂತರುಗಳ ಕಟ್ಟೆಗಳಿಗೆ ಮಾತ್ರ ಸೀಮಿತಗೊಂಡು ಇತಿಹಾಸ ಸೇರಿದವು. ಜೊತೆಗೆ ಅಧಿಕಾರ ವಿಕೇಂದ್ರೀಕರಣ ಜನರ ಬಳಿಗೆ ಕೊಂಡೊಯ್ಯುವ 'ರಾಜಕೀಯ ಬದ್ಧತೆ ಮತ್ತು ಇಚ್ಛೆ'ಯ ಕೊರತೆ ಸ್ಥಾಪಿತ ಹಿತಾಸಕ್ತಿಗಳ ಹಿತಕಾಯುವ ಬಯಕೆ, ಪಂಚಾಯ್ತಿ ವ್ಯವಸ್ಥೆಯ ಜನಪರತೆಯನ್ನೇ

ಪುಟ 7 ಕ್ಕೆ →

ಜನಪ್ರಿಯಗೊಳ್ಳುತ್ತಿರುವ 'ನೆರೆಹೊರೆಯ ಬಳಗಗಳು'

ಕೇರಳದಲ್ಲಿ ಪಂಚಾಯ್ತಿ ವ್ಯಾಪ್ತಿಯಲ್ಲಿ 'ಗ್ರಾಮಸಭೆ'ಗಳು ನಿರಂತರವಾಗಿ ನಡೆಯುತ್ತಿರುವಾಗಲೇ ಸಮೀಪದ 40-50 ಮನೆಗಳನ್ನು ಸೇರಿಸಿ ರಚಿತವಾಗಿರುವ ನೆರೆಹೊರೆಯ ಬಳಗಗಳು, ಅವುಗಳ ಕೆಲಸಗಳು ಪ್ರಖ್ಯಾತಿ ಹೊಂದುತ್ತಿವೆ. ಫಲಾನುಭವಿಗಳನ್ನು ಆಯ್ಕೆ ಮಾಡುವುದರಿಂದ ಹಿಡಿದು.... ಭ್ರಷ್ಟಾಚಾರ ನಿಯಂತ್ರಿಸುವುದು ಮತ್ತು ತಮ್ಮ ಸುತ್ತಮುತ್ತಲಿನ ಯಾವುದೇ ವ್ಯಾಜ್ಯ, ಸಮಸ್ಯೆಗಳು ತಲೆದೋರಿದರೂ ಈ ಬಳಗಗಳೇ ಪಂಚಾಯ್ತಿ ಅಧ್ಯಕ್ಷರ ಮಧ್ಯಸ್ಥಿಕೆಯಲ್ಲಿ ಬಗೆಹರಿಸಿ, ಜನರು ಅನಾವಶ್ಯಕವಾಗಿ ಪೋಲೀಸ್, ಕೋರ್ಟು, ಕಛೇರಿ ಅಲೆದಾಡುವುದನ್ನು ತಪ್ಪಿಸಲಾಗುತ್ತದೆ. ಈ ಮಧ್ಯಸ್ಥಿಕೆಯಲ್ಲಿ ಎಲ್ಲಾ ಜಾತೀಯ, ವಿಭಾಗದ ಮತ್ತು ವಿವಿಧ ರಾಜಕೀಯ ಮುಖಂಡರುಗಳು ಆಸಕ್ತಿಯಿಂದ ಭಾಗವಹಿಸುತ್ತಿರುವುದರಿಂದ ಈ ನೆರೆಹೊರೆಯ ಬಳಗಗಳು ಜನಪ್ರಿಯತೆ ಪಡೆದುಕೊಂಡಿವೆ.

ಮಕ್ಕಳ ಗ್ರಾಮಸಭೆ

ನಮ್ಮ ತಂಡ ಗ್ರಾಮ ಪಂಚಾಯ್ತಿ ಕಛೇರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲೇ ಪಕ್ಕದ ಒಂದು ಕಟ್ಟಡದಲ್ಲಿ ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳೇ ಭಾಗವಹಿಸಿದ್ದ ಒಂದು ಸಭೆ ನಡೆಯುತ್ತಿತ್ತು. ಪಂಚಾಯ್ತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ನಮ್ಮನ್ನು ಅಲ್ಲಿಗೆ ಕರೆದೊಯ್ದರು. ಅದು 'ಮಕ್ಕಳ ಉತ್ಸವ ಸಮಿತಿ ಸಭೆ'

ಮೇ ತಿಂಗಳಲ್ಲಿ ಪಂಚಾಯ್ತಿ ವ್ಯಾಪ್ತಿಯಲ್ಲಿ ಪ್ರತಿವರ್ಷದಂತೆ 'ಮಕ್ಕಳ ಉತ್ಸವ'ನಡೆಸುವ ಸಲುವಾಗಿ ರಚನೆಯಾಗಿರುವ 'ಸಿದ್ಧತಾ ಸಮಿತಿ' ಸಭೆ ಅದಾಗಿತ್ತು. ಪ್ರತಿಗ್ರಾಮದಲ್ಲಿ ರಚನೆಯಾಗಿರುವ 'ಮಕ್ಕಳ ಗ್ರಾಮಸಭೆ' ಮತ್ತು ಪಂಚಾಯ್ತಿ ಆಡಳಿತದ ಆಶ್ರಯದಲ್ಲಿ ಈ ಉತ್ಸವವನ್ನು ನಡೆಸಲಾಗುತ್ತದೆ. ಈ ರೀತಿಯ ಉತ್ಸವಗಳ ಮೂಲಕ ಮಕ್ಕಳಲ್ಲಿರುವ ಪ್ರತಿಭೆಗಳನ್ನು ಪ್ರೋತ್ಸಾಹಿಸಲಾಗುತ್ತದೆ ಅಲ್ಲದೆ, ವಿಜ್ಞಾನ, ಗಣಿತಕ್ಕೆ ಸಂಬಂಧಿಸಿದಂತೆ ಉಚಿತ ತರಗತಿಗಳನ್ನು ನಿರಂತರವಾಗಿ ನಡೆಸಲಾಗುತ್ತದೆ. ಇನ್ನೊಂದು ವಿಶೇಷವೆಂದರೆ ಹೀಗೆ ರಚನೆಯಾಗುವ 'ಮಕ್ಕಳ ಗ್ರಾಮಸಭೆಗಳು' ಪ್ರತಿ 15 ದಿನಗಳಿಗೊಮ್ಮೆ ಸಭೆ ಸೇರುತ್ತವೆ. ಹಿರಿಯರೆ ಇರುವ 'ನೆರೆಹೊರೆಯ ಬಳಗಗಳು' ತಮ್ಮ ವೈಯಕ್ತಿಕ ಸಮಸ್ಯೆಗಳ ಬಗ್ಗೆ ಮಾತ್ರ ಚರ್ಚಿಸಿದರೆ ಈ ಮಕ್ಕಳ ಗ್ರಾಮಸಭೆಗಳು, ಸಮಾಜದಲ್ಲಿರುವ ಸಮಸ್ಯೆಗಳು, ಗ್ರಾಮಗಳ ಅಭಿವೃದ್ಧಿ, ಶಿಕ್ಷಣದ ಸಮಸ್ಯೆ, ಕ್ರೀಡಾ, ಸಾಂಸ್ಕತಿಕ.... ಇತ್ಯಾದಿ ಕುರಿತಂತೆ ಚರ್ಚೆ ನಡೆಸುತ್ತವೆ. ಕಳೆದ ವರ್ಷದಲ್ಲಿ ಗ್ರಾಮದ ಶಾಲೆಗೆ ಅಗತ್ಯವಿರುವ ವಿಜ್ಞಾನ ಶಿಕ್ಷಕರನ್ನು ಪಂಚಾಯ್ತಿ ಮೇಲೆ ಒತ್ತಡ ತಂದು ಕರೆ ತಂದಿರುವುದು ಈ ಮಕ್ಕಳ ಗ್ರಾಮಸಭೆಯ ಸಾಧನೆಯಲ್ಲೊಂದು ಎನ್ನುತ್ತಾರೆ ದೆಹಲಿಯ ಜವಹರಲಾಲ್ - ವಿಶ್ವವಿದ್ಯಾಲಯದ ಮಾಜಿ ವಿದ್ಯಾರ್ಥಿ ಮತ್ತು ಈ ಕೇರಳ ಜನರೂಪಿತ ಯೋಜನೆಯಲ್ಲಿ ತೊಡಗಿಕೊಂಡಿರುವ ಶ್ರೀ ಹನಿಯನ್ ರವರು.

...ಲಕ ಇಡೀ ಜನತೆಯನ್ನು ತೊಡಗಿಸಿ, ಅಭೂತಪೂರ್ವ ...ನಿಂಗ್) ಮೂಲಕ ಮತ್ತೆ ದೇಶ ವಿದೇಶಗಳಲ್ಲಿ ಗಮನಸೆಳೆದಿದೆ.

ಸಂಪೂರ್ಣ ಸಾಕ್ಷರತೆ ಹಾಗೂ ಜನವಿಜ್ಞಾನ ಆಂದೋಲನದ ಮೂಲಕ ಇಡೀ ಜನತೆಯನ್ನು ತೊಡಗಿಸಿ, ಅಭೂತಪೂರ್ವ ಸಾಧನೆಗೈದಿರುವ ಕೇರಳ ಇದೀಗ 'ಜನರೂಪಿತ ಯೋಜನೆ' (ಪೀಪಲ್ಸ್ ಪ್ಲಾನಿಂಗ್) ಮೂಲಕ ಮತ್ತೆ ದೇಶ ವಿದೇಶಗಳಲ್ಲಿ ಗಮನಸೆಳೆದಿದೆ. ಜನತೆಯ ಕೈಗೆ ಅಧಿಕಾರ ನೀಡುವ ದೇಶೆಯಲ್ಲಿ ಈ ವಿನೂತನ ಪ್ರಯೋಗದ ಬಗ್ಗೆ ಕೇಳಿ-ಓದಿ ತಿಳಿದಿದ್ದ ನಮಗೆ ಕೇರಳಕ್ಕೆ ಕಾಲಿಟ್ಟ ದಿನವೇ ಅದನ್ನು ಅರಿಯುವ ಹಂಬಲ. ಡಿವೈಎಫ್ಐ ಆರನೆಯ ರಾಷ್ಟ್ರ ಸಮ್ಮೇಳನ ಸಮಾರೋಪಗೊಂಡ ಮರುದಿನವೇ ನಮ್ಮ ಯುವ ಆಂದೋಲನವೂ ಮುಖ್ಯ ಶಕ್ತಿ ತುಂಬಿತು. ಆದರೆ ಕೇರಳದಲ್ಲಿ ಪ. ಬಂಗಾಳದಂತೆ ಅಧಿಕಾರ ವಿಕೇಂದ್ರೀಕರಣ ಬೇಗ ಆಗಲಿಲ್ಲ ಎಂದು ಪ್ರಸ್ತಾಪಿಸುತ್ತಾ ಕೇರಳ ಬೆಳೆಯಬೇಕಾದರೆ 'ಜನರ ಆರ್ಥಿಕತೆಯೂ ಬೆಳೆಯಬೇಕು. ಇಲ್ಲಿ ನಿರುದ್ಯೋಗವಿದೆ, ಗ್ರಾಮೀಣ ಬಡತನವಿದೆ. ಬೃಹತ್ ಕೈಗಾರಿಕೆಗಳಿಲ್ಲ. ಪ್ರಧಾನವಾಗಿರುವ ಕೃಷಿಯೂ ಸಹ ಹೊಸ ಹಂತದಲ್ಲಿಲ್ಲ. ಈ ಹಂತ ಮೀರಿ ಬೆಳೆಯುವುದು ಒಂದು ಸಾಹಸ ಎಂದರು. ಒಂದು ಕಡೆ ಐಎಂಎಫ್, ವಿಶ್ವಬ್ಯಾಂಕ್‌ಗಳ ಉದಾರೀಕರಣ

ಎಸ್.ವೈ.ಗುರುಶಾಂತ್

ನರೂಪಿತ ಪಂಚಾಯತ್ ಯೋಜನೆ

ಜಾಗತೀಕರಣ...

ನಿಯೋಗವನ್ನು ರಾಜ್ಯ ಯೋಜನಾಮಂಡಳಿ ಕಛೇರಿಗೆ ಆಹ್ವಾನಿಸಲಾಯಿತು.

ಅಲ್ಲಿ ಆದರದ ಆತಿಥ್ಯದೊಂದಿಗೆ 'ಪೀಪಲ್ಸ್ ಪ್ಲಾನಿಂಗ್'ನ ಬಗ್ಗೆ ಒಂದು ಕಣ್ಣೋಟ ನೀಡಿದವರು ಡಾ| ಥಾಮಸ್ ಐಸಾಕ್‌ರವರು. ಜನತೆಯ ಕೈಗೆ ಅಧಿಕಾರವನ್ನು ನೀಡುವ ಅಧಿಕಾರ ವಿಕೇಂದ್ರೀಕರಣದ ಮೂಲಕ ಪ್ರಜಾಪ್ರಭುತ್ವವನ್ನು ಆಳ- ಹಾಗೂ ವಿಶಾಲಗೊಳಿಸುವ ಕ್ರಾಂತಿಕಾರಿ ಪ್ರಕ್ರಿಯೆಯನ್ನು ಅವರು ತೆರೆದಿಟ್ಟರು. 1991ರಲ್ಲಿ ಜಿಲ್ಲಾ ಪಂಚಾಯತ್ ಮಂಡಳಿಗಳು ಅಸ್ತಿತ್ವಕ್ಕೆ ಬಂದರೂ ಹಲವು ಬಲಹೀನತೆ ರಾಜಕೀಯ

ಯೋಜನೆ ರೂಪಿಸುವಾಗ ನೇರವಾಗಿ ಭಾಗಿಯಾದವರು ಸುಮಾರು 30 ಲಕ್ಷ ಜನ. ಅದರಲ್ಲಿ ಶೇ. 27 ಮಹಿಳೆಯರೇ, ಪ.ಜಾತಿ, ಪಂಗಡದವರೂ ಸಹ ಸಮಭಾಗಿಗಳು.

ಇಚ್ಛಾಶಕ್ತಿಯ ಕೊರತೆ ಹಾಗೂ ವ್ಯಕ್ತಿಗತವಾದ ದೋಷಗಳಿಂದ ನರಳುತ್ತಿತ್ತು.

ಪ. ಬಂಗಾಳದಲ್ಲಿ ಆಡಳಿತ ರಂಗದಲ್ಲೇ ಸಿಪಿಐ(ಎಂ) ಬಲವಾಗಿದೆ. ಮತ್ತು ಅಲ್ಲಿ ಎಡರಂಗ ನಿರಂತರ ಆಳ್ವಿಕೆ ನಡೆಸುತ್ತಿದೆ. ಆದರೆ ಕೇರಳದಲ್ಲಿ ಹಾಗಿಲ್ಲ. ಭೂಸುಧಾರಣೆ ಹೆಜ್ಜೆಗಳು ಪಂಚಾಯತ್ ವ್ಯವಸ್ಥೆಯನ್ನು ಬಂಗಾಳದಲ್ಲಿ ಬಲಪಡಿಸಿದವು. ಜನ

→

ನಾಶಪಡಿಸಿತು.

ಕೇರಳದಲ್ಲಿ ಕಳೆದ ಮೂರು ವರ್ಷಗಳಿಂದ ಜಾರಿಯಾಗುತ್ತಿರುವ 'ಜನರೂಪಿತ ಯೋಜನೆ' ಹಿಂದಿರುವ ಸ್ಪಷ್ಟತೆ, ಕಾ|| ಇ.ಎಂ.ಎಸ್. ರವರ ಗ್ರಾಮಾಭಿವೃದ್ಧಿ ದೃಷ್ಟಿಕೋನ ಮತ್ತು ಕನಸು ಹಾಗೂ ಕಾಂ. ಎ.ಕೆ.ಗೋಪಾಲನ್ ರವರ ನಿರಂತರ ಹೋರಾಟದ ಸ್ಫೂರ್ತಿ ಜೊತೆಗೆ ಮಾರ್ಕ್ಸ್‌ವಾದಿ ಚಿಂತನೆಗಳು, ಜಾರಿಗೊಳಿಸುವ ರಾಜಕೀಯ ಸಂಕಲ್ಪ ಹೊಂದಿರುವ ಆಡಳಿತ ಮುಂತಾದ ಅಂಶಗಳು ಈ ಕಾರ್ಯದಲ್ಲಿ ಕೈ ಜೋಡಿಸಿವೆ.

ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಏನೇ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಪ್ರಜಾಪ್ರಭುತ್ವ ವಿಕೇಂದ್ರೀಕರಣದ ಪ್ರಕ್ರಿಯೆಯಲ್ಲಿ ಜನರನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಯಶಸ್ವಿಯಾಗುತ್ತಿರುವ ಕೇರಳದ ಈ ಜನರೂಪಿತ ಯೋಜನೆ ವಿಶ್ವದ ಗಮನವನ್ನು ಸೆಳೆದಿರುವುದು ಸತ್ಯ.

ಅವುಗಳಿಂದ ಕೇರಳದಲ್ಲಿ ಪ್ರಧಾನವಾದ ರಬ್ಬರ್, ತೆಂಗು ಇತರ ಬೆಳೆಗಳ ಮೇಲಾದ ಆಘಾತ ಇವುಗಳನ್ನು ಎದುರಿಸಿ ಹೋರಾಡುತ್ತಲೇ ಆರ್ಥಿಕವಾಗಿ ಸಾಮಾಜಿಕವಾಗಿ ಬೆಳವಣಿಗೆ ಸಾಧಿಸಬೇಕು ಎಂದರು. ಈಗಿರುವ ನಮ್ಮ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲ ಬಳಸುವುದು ಅತ್ಯಗತ್ಯ. ಆದ್ದರಿಂದ ಜನತೆಯನ್ನು ತೊಡಗಿಸಿದಲ್ಲಿ ಬೆಳವಣಿಗೆಯೂ ಸಾಧ್ಯವೆಂದರು. ಕೇರಳದ ರಾಜಕೀಯವಲ್ಲಿ ಎರಡು ವಲಯಗಳಿವೆ. ದುಡಿಯುವ ಜನತೆಯ ಎಡಶಕ್ತಿಗಳ ಹಿಂದೆಯಲ್ಲದೇ, ಇನ್ನೊಂದು ವಲಯದಲ್ಲಿಯೂ ಇದ್ದಾರೆ. ಅವರನ್ನು ಜನಯೋಜನೆಯಲ್ಲಿ ತೊಡಗಿಸುವುದು ಅಗತ್ಯ. ಆದ್ದರಿಂದ ಈ ಯೋಜನೆ ಒಂದು ರಾಜಕೀಯ ಅಜೆಂಡಾ ಎಂದರು.

ಈ ಜನರೂಪಿತ ಯೋಜನೆ' ಆಂದೋಲನವು ಮುಖ್ಯವಾಗಿ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಹಾಗೂ ಸಂಪನ್ಮೂಲಗಳನ್ನು ವರ್ಗಾಯಿಸಿ, ಜನತೆಯ ಪಾಲ್ಗೊಳ್ಳುವಿಕೆಯನ್ನು ಖಾತರಿಗೊಳಿಸಿ, ನಿರ್ಧಾರ ಹಾಗೂ ಜಾರಿಯ ಪ್ರಕ್ರಿಯೆಯಲ್ಲಿಯೂ ಅವರನ್ನು ಪೂರ್ಣ ತೊಡಗಿಸುವ ಮೂಲಧ್ಯೇಯ ಹೊಂದಿದೆ. 1997-98ರಲ್ಲಿ ಈ ಆಂದೋಲನವು ಆರಂಭಗೊಂಡಾಗ ಇದರಲ್ಲಿ ಬಹಳಷ್ಟು ಗ್ರಾಮೀಣ ಮಹಿಳೆಯರು ಯುವ ಜನರು ಅತ್ಯಂತ ಉತ್ಸಾಹದಲ್ಲಿ ಪಾಲ್ಗೊಂಡಿದ್ದಾರೆ. ಮೊದಲನೆ ಯೋಜನೆ ರೂಪಿಸುವಾಗ ನೇರವಾಗಿ ಭಾಗಿಯಾದವರು ಸುಮಾರು 30 ಲಕ್ಷ ಜನ. ಅದರಲ್ಲಿ ಶೇ. 27 ಮಹಿಳೆಯರೇ, ಪ.ಜಾತಿ, ಪಂಗಡದವರೂ ಸಹ ಸಮಭಾಗಿಗಳು. ನಾವು ಸಂದರ್ಶಿಸಿದ ವಿಥುರಾ ಮತ್ತು ಕರಕುಲಂ ಪಂಚಾಯತ್‌ಗಳಲ್ಲಿ ಮಹಿಳೆ ಮತ್ತು ಯುವಜನರ ಭಾಗಿತ್ವ ಎದ್ದು ಕಂಡಿತು. ಪಂಚಾಯತ್ ಹಾಗೂ ಮುನ್ಸಿಪಾಲಿಟಿಗಳು ನಡೆಸಿದ ಗ್ರಾಮ/ ವಾರ್ಡ್ ಸಭೆಗಳಲ್ಲಿ ಯಾವುದೇ ರಾಜಕೀಯ ಭೇದವಿಲ್ಲದೇ ಜನತೆ ಉತ್ಸಾಹದಿಂದ ಭಾಗವಹಿಸಿ ಅಲ್ಲಿನ ಸಮಸ್ಯೆಗಳು, ಅಗತ್ಯಗಳು, ಅದರಲ್ಲಿಯೂ ಯಾವುದಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಬೇಕೆಂಬ ವಿಷಯಗಳು ಅಭಿವೃದ್ಧಿ ಯೋಜನೆ ಹೀಗೆ ಮುಕ್ತವಾಗಿ ಚರ್ಚಿಸಿ ಯೋಜನೆ ತಯಾರಿಸಿದರು. 4-6 ಪಂಚಾಯತ್‌ಗಳ ಅಂತಹ ಯೋಜನೆಯ ಪ್ರತಿಗಳನ್ನು ನಾವು ನೋಡಿದೆವು (ಮಲೆಯಾಳಂನಲ್ಲಿದ್ದು 200 ರಿಂದ 300 ಪುಟಗಳವರೆಗೂ ಇವೆ.) ಅನೇಕ ವರದಿ ಆರಂಭದಲ್ಲಿ ಗಾಂಧೀಜಿ, ಇ.ಎಂ.ಎಸ್. ಭಾವಚಿತ್ರಗಳಿರುವುದು ವಿಶೇಷ. ಮೊದಲ ಯೋಜನೆಯಲ್ಲಿಯೇ ಸುಮಾರು 65,000 ಪ್ರಾಜೆಕ್ಟ್ (ಯೋಜನೆ)ಗಳನ್ನು ಜನರೇ ರೂಪಿಸಿದ್ದು, ಅದ್ಭುತವಾದುದು. ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರವೂ ಕೂಡ ಈ ಪಂಚಾಯಿತ್‌ಗಳಿಗೆ ಹಣವನ್ನು ಗವುನಾರ್ಹವಾಗಿ ನೀಡಿ, ಈ ಯೋಜನೆಗಳು ಯಶಸ್ವಿಯಾಗಲು ಮುಂದಾಗಿದೆ. 1997-98ರಲ್ಲಿ 749 ಕೋಟಿ ನಿಧಿ, ಹಾಗೂ 276 ಕೋಟಿಗಳ ರಾಜ್ಯ ಸರ್ಕಾರದ ಸ್ಕೀಂಗಳ ಮೊತ್ತ ನೀಡಿದ್ದಾರೆ. 98-99ರಲ್ಲಿ ಕ್ರಮವಾಗಿ 950 ಕೋಟಿ ರೂ. ಹಾಗೂ 166 ಕೋಟಿ ನೀಡಲಾಗಿದೆ. ಅಂದರೆ ಕೆಲವೇ (ಸಾವಿರ ಅಥವಾ ಲಕ್ಷಗಳನ್ನು ಪಡೆಯುತ್ತಿದ್ದ ಪಂಚಾಯತ್‌ಗಳು ಈಗ ಕೋಟಿಯ ಅಂಚನ್ನೂ ಮೀರಿ ನಿಧಿಪಡೆಯುತ್ತವೆ. ಪಡೆದ ನಿಧಿಯನ್ನು ಪೂರ್ಣವಾಗಿ ಸೋರಿಕೆ ಅಥವಾ ಭ್ರಷ್ಟಾಚಾರವಿಲ್ಲದೇ ಬಳಸುವುದು ಮಾತ್ರವಲ್ಲ. ಜನತೆಯೂ ಸಹ ತಮ್ಮ ಪಾಲನ್ನು ಕೂಡಿಸುವುದು ಮತ್ತು ತಾವೇ ಸ್ವತಃ ಶ್ರಮದಾನ ಮಾಡುವುದರಿಂದ ಮೂರರಷ್ಟು ಅಭಿವೃದ್ಧಿ ನೆಗೆತ ಸಾಧ್ಯವಾಗಿದೆ. ತಮ್ಮ ಶ್ರಮದ ವೃತ್ತಿಯಲ್ಲಿ ಸಂಪನ್ಮೂಲಗಳ ಒಟ್ಟು ನಕಾಶೆ ಸಿದ್ಧಪಡಿಸುವ ಇನ್ನೊಂದು ಮಹತ್ತರ ಪ್ರಕ್ರಿಯೆಯಾಗಿ ತಮ್ಮ ಪ್ರದೇಶದ, ಸಂಪನ್ಮೂಲ ಬಳಸಿ, ಅಭಿವೃದ್ಧಿ ತಮ್ಮಿಂದಲೇ ಸಾಧ್ಯವಾಗಿಸುವಲ್ಲಿ, ಹೊಸ ಹೊಸ ಹಾದಿಗಳನ್ನು ತೆರೆದಿದೆ. ಯೋಜನೆ, ಅಭಿವೃದ್ಧಿ, ಎಲ್ಲವೂ ಕೇಂದ್ರೀಕೃತ ಮತ್ತು ಕೆಲವೇ ಸ್ಥಾಪಿತ ಹಿತಾಸಕ್ತಿಗಳ ಕೈಯಿಂದ ಎನ್ನುವ ಈ ದಿನಗಳಲ್ಲಿ ಈ ಜನರೂಪಿತ ಯೋಜನೆ ಅದರ ಜಾರಿ ಜನರದ್ದೇ ಪರಮಾಧಿಕಾರ


ಅತ್ಯಾಧುನಿಕ ಉನ್ನತವಾದ ಕಂಪ್ಯೂಟರ್‌ನ ತರಬೇತಿಯನ್ನು ಗ್ರಾಮಾಂತರದ ಯುವಜನರಿಗೆ ಪಂಚಾಯತಿಗಳೇ ನೀಡುತ್ತಿವೆ.

ವಾಗಿದೆ. ದೇಶಕ್ಕೆ ಮಾದರಿಯಾಗಿದೆ. ಮತ್ತು ಒಂದು ಸ್ಪಷ್ಟ ಪರ್ಯಾಯ ಮಾರ್ಗವಾಗಿದೆ. ಎಲ್ಲವನ್ನೂ ತೀರ್ಮಾನಿಸುವ ಗ್ರಾಮ ಸಭೆಗಳಲ್ಲಿ ಕನಿಷ್ಟವೆಂದರೂ 180 ಜನರಿಂದ (ಕೇರಳದಲ್ಲಿ ಕರ್ನಾಟಕದಂತೆ ಒಂದೇ ಕಡೆ ವಾಸಿಸುವ ಹಳ್ಳಿಗಳಿಲ್ಲ. ಅವರವರ ಹೊಲ, ತೋಟಗಳಲ್ಲಿ ದೂರ ದೂರವಾಗಿ ವಾಸಿಸುತ್ತಾರೆ ಎಂಬುದನ್ನು ಗಮನಿಸಬೇಕು.) 1500ರ ವರೆಗೂ ಭಾಗಿಗಳು. ಕೇರಳದಲ್ಲಿ ಗ್ರಾಮ ಸಭೆಗೆ ಕನಿಷ್ಟ 100 ಜನರು ಇರಲೇಬೇಕೆಂದು ಕಡ್ಡಾಯವಿದೆ. ಇವುಗಳನ್ನು ತಿಳಿಯುವಾಗ ನಮಗೆ ಕರ್ನಾಟಕದಲ್ಲಿ ಸೇರುವ ನಾಮಕಾವಸ್ಥೆ ಗ್ರಾಮಸಭೆಗಳ ಚಿತ್ರಣ ಕಣ್ಮುಂದೆ ಬಂತು. ಇಲ್ಲಿ ಮಹಿಳೆಯರು, ದುರ್ಬಲ ವರ್ಗದ ಜನರು, ಕೂಲಿಕಾರರಿಗೆ ಇಷ್ಟ-ಕಷ್ಟ ಹೇಳಲು ಅವಕಾಶವಾದರೂ ಎಲ್ಲಿದೆ? ಕರ್ನಾಟಕದಲ್ಲಿ ಯಶಸ್ವಿಗೊಂಡ ಅತೀ ಹೆಚ್ಚಿನ ಜನ ಭಾಗವಹಿಸಿದ ಗ್ರಾಮಸಭೆ ನಡೆದಿರುವುದು ದ.ಕನ್ನಡದಲ್ಲಿ ಅಲ್ಲಿನ ಹಾಜರಾತಿಯೂ ಕೂಡ ಕೇವಲ ಶೇ. 29(!).....

ನಮ್ಮನ್ನು ಕರೆದೊಯ್ಯುತ್ತಿದ್ದ ಎರಡು ವಾಹನಗಳು ನಿಂತದ್ದು ಹಳ್ಳಿಯ 'ಗ್ರಾಮಾಂತರ ಅಧ್ಯಯನ ಕೇಂದ್ರ'ದ ಮುಂದೆ. ನಮ್ಮ ಜೊತೆಗಿದ್ದ 'ಪ್ಲಾನಿಂಗ್' ಪ್ರಚಾರಾಂದೋಲನದ ಶೋಧನಾರ್ಥಿ ಅನಿಯನ್ ಹಾಗೂ ವಿದ್ಯಾರ್ಥಿನಿ ಆರುತಿಯವರು ಉತ್ಸಾಹದಿಂದ ಕೇಂದ್ರವನ್ನು ಪರಿಚಯಿಸಿದರು. 1997-98 ರಿಂದಲೇ ಈ ಕೇಂದ್ರ ಆರಂಭಗೊಂಡಿದ್ದು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಮೂಲ ಆಶಯದೊಂದಿಗೆ, ಕೆಲಸ ಮಾಡುತ್ತಿದೆ. ಪಂಚಾಯತ್ ಹಂತದ ಯೋಜನೆಗಳ ಜಾರಿಗೆ ಬೇಕಾದ ಸಿದ್ಧತೆ, ಮುಖ್ಯವಾಗಿ ಗ್ರಾಮೀಣ ಕೈಗಾರಿಕೆಯ ಆರಂಭ- ಅಭಿವೃದ್ಧಿಗೆ ಒತ್ತು ನೀಡುತ್ತಿದೆ. ನಮ್ಮ ನಿಯೋಗದೊಂದಿಗೆ ಸಂವಾದ ನಡೆಸಿದ ಕೇಂದ್ರದ ಒಡನಾಡಿ ಶ್ರೀಕಂಠನ್, ಅಲ್ಲಿ ತಯಾರಿಸಿದ ಗ್ರಾಮ ಗ್ರಾಮಗಳಲ್ಲಿನ ಸಂಪನ್ಮೂಲಗಳ (ಭೂಮಿ, ನೀರು, ಅರಣ್ಯ, ಖನಿಜ, ರಸ್ತೆ, ಇತ್ಯಾದಿ...) ನಕಾಶೆಗಳನ್ನು ತೋರಿಸಿದರು. ಈ ನಕಾಶೆ ಸದ್ಯದ ಸ್ಥಿತಿ ಮಾತ್ರವಲ್ಲ ಅಭಿವೃದ್ಧಿಯ ಸಾಧ್ಯತೆಯ ಮಹಾಶಕ್ತಿಯನ್ನು ತೋರಿಸಿತು. ಈ ಕೇಂದ್ರ ಹಲವಾರು ಉಪಯುಕ್ತ ಮಾಹಿತಿಗಳನ್ನು ಅದರ ವಿಶ್ಲೇಷಣೆಯನ್ನು ಸಂಗ್ರಹಿಸಿದೆ. ಸಂಗ್ರಹಿಸುತ್ತಿದೆ.

ಈ ಕೇಂದ್ರದ ಇನ್ನೊಂದು ಮುಖ್ಯ ಕೊಡುಗೆಯೆಂದರೆ ಸಂಪನ್ಮೂಲವನ್ನು ಪರಿಣತರನ್ನು ತಯಾರುಮಾಡುವುದು. ಆ ಕಟ್ಟಡದಲ್ಲಿಯೇ ಅತ್ಯಾಧುನಿಕ ಉನ್ನತವಾದ ಕಂಪ್ಯೂಟರ್‌ನ ತರಬೇತಿಯನ್ನು ಗ್ರಾಮಾಂತರದ ಯುವಜನರಿಗೆ ನೀಡಲಾಗುತ್ತಿದೆ. ಇದೇ ಕೋರ್ಸ್‌ಗಳಿಗೆ ಖಾಸಗಿಯಲ್ಲಿ (ಕೆಲವು ಬಹುರಾಷ್ಟ್ರೀಯ ಕಂಪನಿಗಳ ತರಬೇತಿ ಕೇಂದ್ರಗಳಿವೆ) ಕನಿಷ್ಠ 25 ರಿಂದ 30 ಸಾವಿರ ಫೀ ವಸೂಲು ಮಾಡಲಾಗುತ್ತಿದೆ. ಆದರೆ ಗ್ರಾಮ ಪಂಚಾಯತ್ ನಡೆಸುವ ಈ ಕೇಂದ್ರದಲ್ಲಿ ತೀರಾ ಕನಿಷ್ಟ ಫೀ ನಿಗದಿಯಾಗಿದೆ. ಎಸ್.ಸಿ., ಎಸ್.ಟಿಗಳಿಗೆ ತುಂಬಾಕಮ್ಮಿ. 25 ಕೋರ್ಸ್‌ಗಳನ್ನು 18 ಪರಿಣತರು 150 ವಿದ್ಯಾರ್ಥಿಗಳಿಗೆ 3 ತಂಡಗಳಲ್ಲಿ ಬೋಧಿಸುತ್ತಾರೆ. ಗ್ರಾಮಾಂತರ ಪ್ರದೇಶದ ಯುವಜನರೂ ಆಧುನಿಕ ಶಿಕ್ಷಣ- ತಂತ್ರಜ್ಞಾನದ ಅರಿವಿನ ಕೊರತೆಯಿಂದ ಹಿಂದೆ ತಳ್ಳಲ್ಪಡುವ ಸಂದರ್ಭಗಳನ್ನು ಇದು ಪರಿಣಾಮಕಾರಿಯಾಗಿ ಪಡೆದು, ಆತ್ಮ ವಿಶ್ವಾಸ ಹೊಮ್ಮಿಸುತ್ತಿದೆ....

ಕಾಣಿಯುವರನ್ನು ನಾವು ಕೇಳಿದೆವು "ಪಂಚಾಯತ್‌ನ ಕೆಲಸಗಳಿಗೆ ನೀವು ಸದಸ್ಯರು ದಿನವಿಡೀ ಶ್ರಮಿಸುತ್ತಿದ್ದರೂ ಇದು ಬುಡಕಟ್ಟು ಜನಾಂಗವಿರುವ ಪ್ರದೇಶ, ಮೇಲಾಗಿ ಕೂಲಿಕಾರ, ಬಡಜನರ ನಡುವಿನಿಂದ ಬಂದವರು ಹೆಚ್ಚು. ಜೀವನಕ್ಕೆ ಹೇಗೆ?...." ಆಗ ಅವರು ಹೇಳಿದ್ದೇ ನಮಗೆಲ್ಲಾ ಆಶ್ಚರ್ಯ ತಂದಿತು. ಕೇರಳದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ ತಿಂಗಳಿಗೆ ರೂ. 3500, ಉಪಾಧ್ಯಕ್ಷರಿಗೆ ರೂ. 2500, ಸ್ಥಾಯಿ ಸಮಿತಿ ಅಧ್ಯಕ್ಷರಿಗೆ ರೂ. 1500, ಪಂಚಾಯತಿ ಸದಸ್ಯರಿಗೆ ರೂ. 1000 ರೂಗಳನ್ನು ವೇತನವನ್ನಾಗಿ ನೀಡಲಾಗುತ್ತಿದೆ. ಹೀಗಾಗಿ ಅವರು ಪೂರ್ಣಕಾಲ ಜನರ ಸಲುವಾಗಿಯೇ ಕೆಲಸ ಮಾಡಲು ನಿಯೋಜಿತರಾದವರು. ಕೇವಲ ಪಂಚಾಯತಿ ಸಭೆಗಳಲ್ಲಿ ಭಾಗವಹಿಸಿ ನಂತರ ಅಧಿಕಾರಿಗಳ ಕೈಗೊಪ್ಪಿಸಿ ಪ್ರೇಕ್ಷಕರಂತೆ ವೀಕ್ಷಿಸುವ ಕರ್ನಾಟಕದ ಸದಸ್ಯರಂತಲ್ಲ. ಯಾವುದೇ ಅಡೆತಡೆಯಿಲ್ಲದೆ, ಸಾರ್ಥಕವಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿದೆ.



ಗ್ರಾಮೀಣ ಕುಶಲಕರ್ಮಿಗಳೇ ಯೋಜಿಸಿ ಕಡಿಮೆ ಖರ್ಚಿನಲ್ಲಿ ನಿರ್ಮಿಸುತ್ತಿರುವ ಒಂದು ಸೇತುವೆ

ಪುಟ 4 ರಿಂದ

ಖಾಸಗಿ ಶಿಕ್ಷಣ ಸಂಸ್ಥೆಗಳು: ಭ್ರಷ್ಟತೆಯ ಕೂಪಗಳು

ಇಂದು ಬಹಳಷ್ಟು ಕಾಲೇಜುಗಳ ಬಳಿ ಕಾಣುವುದು 'ಇಂಟರ್‌ನೆಟ್ ಪಾಯಿಂಟ್' ಗಳು, ಇವುಗಳಲ್ಲಿ ವಿದ್ಯಾರ್ಥಿಗಳು 'ಸೈಬರ್‌ಸೆಕ್ಸ್' ತರಹದ ಚಟುವಟಿಕೆಯಲ್ಲಿ ತೊಡಗಿದ್ದರೂ ಯಾವುದೇ ಮ್ಯಾನೇಜ್‌ಮೆಂಟ್‌ಗಳು ತಡೆಯುತ್ತಿಲ್ಲ, ಕಾರಣ ಸ್ಪಷ್ಟ. ವಿದ್ಯಾರ್ಥಿಗಳು ಸಂಘಟಿತರಾಗದೆ ಇಂತಹದರಿಂದ ಹಾಳಾಗುವುದೇ ಈ ಸಂಸ್ಥೆಗಳಿಗೆ ಬೇಕಿರುವುದು.

ಶಿಕ್ಷಕರಿಗೇ ಶೋಷಣೆಯ ಶಿಕ್ಷೆ

ಇನ್ನು ಈ ಸಂಸ್ಥೆಗಳಲ್ಲಿ ಕೆಲಸ ಮಾಡುವ ಅಧ್ಯಾಪಕರದ್ದು ಗೋಳಿನ ಕಥೆ. ಕರ್ನಾಟಕದಲ್ಲಿ ಮೂರು ತರಹದ ಕಾಲೇಜುಗಳಿವೆ. ಸರ್ಕಾರಿ ಕಾಲೇಜು, ಸರ್ಕಾರಿ ಅನುದಾನಿತ ಖಾಸಗಿ ಕಾಲೇಜು, ಪೂರ್ಣವಾಗಿ ಖಾಸಗಿ ಕಾಲೇಜುಗಳು. ಇವುಗಳಲ್ಲಿ ಮೊದಲೆರಡರಲ್ಲಿ ಕೆಲಸ ಮಾಡುವ ಅಧ್ಯಾಪಕರು ಅದೃಷ್ಟಶಾಲಿಗಳೆನ್ನುತ್ತಾರೆ ಖಾಸಗಿ ಕಾಲೇಜಿನ ಅಧ್ಯಾಪಕರೊಬ್ಬರು. ಅವರ ಪ್ರಕಾರ ಈ ಖಾಸಗಿಯಲ್ಲಿ ಉದ್ಯೋಗ ಭದ್ರತೆ ಇಲ್ಲ. ಯಾವುದೇ ರೀತಿಯ ನೇಮಕಾತಿ ಪತ್ರವೇ ಇಲ್ಲದ ನೇಮಕಗೊಳ್ಳುವ ಅಧ್ಯಾಪಕ ಯಾವ ಕ್ಷಣದಲ್ಲಿ ತಾನು ಹೊರಗಟ್ಟಲ್ಪಡುವವನೋ ಎಂದು ಕೆಲಸ ಮಾಡಬೇಕಾಗುತ್ತದೆ. ನಮ್ಮಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಪಾಲಿಸುವ Hire & Fire ನೀತಿಯನ್ನು ಬಹಳಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳು ಅಕ್ಷರಶಃ ಪಾಲಿಸುತ್ತಿವೆ. ಒಂದಷ್ಟು ಕಾಲೇಜುಗಳಲ್ಲಿ ಸಂಬಳ ಆಡಳಿತವರ್ಗ ಯಾವಾಗ ಕೊಡುವುದೋ ಆಗಷ್ಟೇ ಪಡೆಯಬೇಕು. 7ನೇ ತಾರೀಖಿನ ಒಳಗೆ ಸಂಬಳ ಪಾವತಿ ಆಗಬೇಕೆಂದು ಕಾನೂನಿದ್ದರೂ ಬಹಳಷ್ಟು ಕಡೆ ಸಂಬಳ ಸಿಗೋದು 10ನೇ ತಾರೀಖಿನ ನಂತರ. ಕಾರಣವಿಷ್ಟೆ ಮಧ್ಯೆ ಕೆಲಸ ಬಿಟ್ಟರೂ 10 ದಿನಗಳ ಸಂಬಳವಿರುತ್ತದಲ್ಲಾ!

ಅಧ್ಯಾಪಕರ ಮಧ್ಯೆಯೇ ಸಾಕಷ್ಟು ಒಡಕಿದೆ. ಇದೇ ಆಡಳಿತ ವರ್ಗಕ್ಕೂ ಬೇಕಿರುವುದು. ಮಧ್ಯಮ ವರ್ಗದ ಅಧ್ಯಾಪಕ ಸಮುದಾಯವ ಪ್ರತಿಯೊಂದನ್ನು ಸಂಶಯದಿಂದ ನೋಡುವುದರಿಂದಾಗಿ ಅವರುಗಳು ಸಂಘಟಿತರಾಗೋದು ಅಷ್ಟು ಸುಲಭವಾಗುತ್ತಿಲ್ಲ.

CL. EL, PF ಸೌಲಭ್ಯಗಳೆಲ್ಲಾ ನಾಮಕಾವಸ್ಥೆ ಮಾತ್ರ. ವರ್ಷಕ್ಕಿಷ್ಟು ಸಂಬಳ ಹೆಚ್ಚಳವಿರುತ್ತದೆ. ಆದರೆ ಅದು ಯಾವ ಮಟ್ಟದಲ್ಲಿ ಇದೆ ಎಂಬುದಕ್ಕೆ ಅಧ್ಯಾಪಕ ಮಿತ್ರರೊಬ್ಬರು ತಮ್ಮ ಕಾಲೇಜಿನಲ್ಲಿ ಆಡಳಿತ ವರ್ಗವನ್ನು ಸಂಬಳ ಹೆಚ್ಚಳಕ್ಕೆಂದು ಸಂಪರ್ಕಿಸಿದಾಗ ಪಡೆದ ಉತ್ತರವೇ ಲೇಖನದ ಆರಂಭದಲ್ಲಿ ಹೇಳಿದ ಮಾತು.

2 ಅಥವಾ 3 ವರ್ಷದ ಮೇಲೆ ಅಧ್ಯಾಪಕರನ್ನು ಬದಲಾಯಿಸಲು ಆಡಳಿತ ವರ್ಗ ಪ್ರಯತ್ನಿಸುತ್ತದೆ. ಕಾರಣವಿಷ್ಟೆ ಹೊಸದಾಗಿ ನೇಮಕಗೊಳ್ಳುವವರು ಮೊದಲಿದ್ದವರಿಗಿಂತ ಕಡಿಮೆ ಸಂಬಳಕ್ಕೆ ದುಡಿಯಲು ಸಿದ್ಧವಿರುವವರು ಎಂಬ ಕಾರಣ. ಹೊಸಬರು ಇಲ್ಲವೆಂದರೆ ನಿವೃತ್ತಿ ಹೊಂದಿದವರು ತುಂಬಾ ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಾರೆ ಎಂದು ಇವರನ್ನೇ ನೇಮಿಸಲಾಗುತ್ತದೆ.

ಅಧ್ಯಾಪಕರಲ್ಲಿ ಒಡಕನ್ನು ತಂದಿಡಲು ಎಲ್ಲಾ ತರಹದ ಚಟುವಟಿಕೆಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಮನೆ ಪಾಠ ಆಡಳಿತವರ್ಗಗಳು ಪರೋಕ್ಷವಾಗಿ ಪ್ರೋತ್ಸಾಹಿಸುತ್ತಿವೆ. ಇದರಿಂದಾಗಿ ಆಡಳಿತವರ್ಗದ ಅನೀತಿಗಳ ಬಗ್ಗೆ ತಲೆ ಕೆಡಿಸಿಕೊಳ್ಳದ ಅಧ್ಯಾಪಕ ಕಾರು, ಬಂಗಲೆ ಎಂಬುದರ ಬಗ್ಗೆ ಕೇಂದ್ರೀಕೃತವಾಗಿ ಟ್ಯೂಷನ್ ಕುದುರೆ ಹತ್ತುತ್ತಾನೆ. ಕೆಲವರು ಶಿಕ್ಷಣ ಸಂಸ್ಥೆಗಳಲ್ಲಿ ಕೊಡುವ ಸಂಬಳಸಾಲದೆ ಹೊಟ್ಟೆ ಪಾಡಿಗೆ ಮನೆಪಾಠ ಮಾಡುತ್ತಾರೆ. ದುರಂತ ಏನೆಂದರೆ ಒಂದಷ್ಟು ಕಾಲೇಜ್ ಅಧ್ಯಾಪಕರುಗಳೇ ವಿದ್ಯಾರ್ಥಿಗಳ ರೀತಿಯಲ್ಲಿ ಕುಡಿತ, ಸೈಬರ್ ಸೆಕ್ಸ್ ತರಹದ ಚಟುವಟಿಕೆಗಳಲ್ಲಿ ತೊಡಗಿರುವುದು.

ಸ್ಥಾನೀಯ ತನಿಖಾ ಸಮಿತಿಗಳು (LIC Local Incpection Committee) : ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಯಾವುದೇ ಕಾಲೇಜುಗಳು ಹೊಸದಾಗಿ ಕೋರ್ಸ್‌ಗಳನ್ನು ಆರಂಭಿಸಿದಾಗ ಮತ್ತೆ ಅವುಗಳ ಪುನರ್ ನವೀಕರಣಕ್ಕಾಗಿ (ಸ್ಥಾನೀಯ ತನಿಖಾ ಸಮಿತಿಗಳ ಪರಿಶೀಲನೆಗೆ ಒಳಪಡಿಸಬೇಕಾಗುತ್ತದೆ. ಈ LIC ಯ ಸದಸ್ಯರುಗಳಲ್ಲಿ ಬೆರಳೆಣಿಕೆಯಷ್ಟು ಸದಸ್ಯರುಗಳನ್ನು ಬಿಟ್ಟರೆ ಮಿಕ್ಕವರೆಲ್ಲಾ ಲಂಚ, ರುಶುವತ್ತುಗಳಿಗೆ ಹೆಸರಾದವರು. LIC ಗಳು ಕಾಲೇಜಿಗೆ ಬಂದರೆ ಅಧ್ಯಾಪಕರುಗಳು ಇವರುಗಳನ್ನು Suitcase Committee ಗಳೆಂದೇ ಛೇಡಿಸುತ್ತಾರೆ.

ಈ ಸ್ಥಾನೀಯ ಸಮಿತಿ ಸದಸ್ಯರುಗಳು ಕಾಲೇಜು ಸಿಬ್ಬಂದಿ ವರ್ಗದ ಎದುರು ಆಡಳಿತ ವರ್ಗವನ್ನು ತರಾಟೆಗೆ ತೆಗೆದುಕೊಂಡ ಹಾಗೆ ನಾಟಕವಾಡಿ ನಂತರ ಆಡಳಿತ ಮಂಡಳಿಯ ಜೊತೆ ಶಾಮೀಲಾಗುವುದು ಮಾಮೂಲು. LICಗಳ ಕೆಲಸ ಸದರಿ ಕಾಲೇಜುಗಳಲ್ಲಿ ಆ ಕೋರ್ಸ್‌ಗಳಿಗೆ ಬೇಕಾದ ಸೌಲಭ್ಯ ಎಲ್ಲಾ ಇದೆಯೋ ಇಲ್ಲವೋ ಎಂದು ಪರಿಶೀಲಿಸಿ ವಿಶ್ವವಿದ್ಯಾಲಯಕ್ಕೆ ವರದಿ ಒಪ್ಪಿಸಬೇಕು. ಆದರೆ ಕಣ್ಣೆದುರಲ್ಲೇ ಆ ಕಾಲೇಜುಗಳಲ್ಲಿ ಏನೊಂದೂ ಸೌಲಭ್ಯಗಳಿಲ್ಲದೇ ಇದ್ದರೂ ಆ ಕಾಲೇಜುಗಳ ಪರವಾಗಿಯೇ ವರದಿ ಒಪ್ಪಿಸೋದು ಎಲ್ಲಾ ಅಧ್ಯಾಪಕ ವರ್ಗದವರ ಕಣ್ಣೆದುರೇ ನಡೆದಿರುವ ಸತ್ಯ. ಇದರಿಂದಾಗಿ ಬರಿಗಾಲಲ್ಲಿ ನಡೆದಾಡುತ್ತಿದ್ದ ಒಂದಷ್ಟು LIC ಸದಸ್ಯರುಗಳುಇಂದು ಮಾರುತಿ, ಸಿಯೆಲೋ, ಎಸ್ಟೀಮೋ ಎಂದು ತಮ್ಮ ಜೀವನಮಟ್ಟವನ್ನು ಏರಿಸಿಕೊಂಡಿದ್ದಾರೆ.

ಸಾಮ್ರಾಜ್ಯಶಾಹಿಯ ಪ್ರಭಾವದಿಂದಾಗಿ ನಮ್ಮ ಆಡಳಿತ ವರ್ಗವು ಶಿಕ್ಷಣದ ಖಾಸಗೀಕರಣವನ್ನು ಭರದಿಂದ ಸಾಗಿಸುತ್ತಿರುವ ಈ ದಿನಗಳಲ್ಲಿ ವಿದ್ಯಾರ್ಥಿಗಳು, ಖಾಸಗಿ ಕಾಲೇಜು ಅಧ್ಯಾಪಕರು, ಸರ್ಕಾರಿ ಕಾಲೇಜುಗಳ ಅಧ್ಯಾಪಕರು ಜೊತೆಗೂಡಿ ಸಂಘಟಿತರಾಗಿ ಪರಿಹಾರ ಕಂಡುಕೊಳ್ಳುವರೆಂದು ಆಶಿಸೋಣ.

○

ಪಶ್ಚಿಮ ಬಂಗಾ

ಇತ್ತೀಚಿಗೆ ನಡೆದ ಮುನಿಸಿಪಾಲಿಟಿ (ನಗರ ಸಭೆ) ಮತ್ತು ವಿವಿಧ ಪಂಚಾಯತ್‌ಗಳಿಗೆ ನಡೆದ ಉಪ ಚುನಾವಣೆಯಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗವು ಅತ್ಯಧಿಕ ಬಹುಮತಗಳನ್ನು ಗಳಿಸಿ ವಿಜಯಿಯಾಗಿದೆ. 79 ನಗರ ಸಭೆಗಳಿಗೆ ಚುನಾವಣೆ ನಡೆದಿದ್ದು ಘೋಷಿತ 78 ರಲ್ಲಿ ಎಡರಂಗ 33 ನಗರ ಸಭೆಗಳಲ್ಲಿ ಬಹುಮತ ಪಡೆದು ಅಧಿಕಾರ ಸ್ಥಾಪಿಸಿದೆ. ಇನ್ನು 6 ಮುನಿಸಿಪಾಲಿಟಿಗಳಲ್ಲಿ ಅತಿದೊಡ್ಡ ರಂಗವಾಗಿ ಮೂಡಿಬಂದಿದೆ. ಈಮೊದಲು ನಡೆದ ಪಂಚಾಯತ್ ಉಪ ಚುನಾವಣೆಗಳಲ್ಲಿ 321 ಸ್ಥಾನಗಳಲ್ಲಿ ಸಿಪಿಐ(ಎಂ) ಒಂದೇ 176 ಸ್ಥಾನಗಳನ್ನು ಪಡೆದಿದ್ದು, ಇನ್ನುಳಿದ ಆರ್.ಎಸ್.ಪಿ, ಫಾರ್ವರ್ಡ್ ಬ್ಲಾಕ್ ಮತ್ತು ಸಿಪಿಐ-30 ಸ್ಥಾನಗಳನ್ನು ಪಡೆದುಕೊಂಡಿದೆ. ಆ ಮೂಲಕ ಸಿಪಿಐ(ಎಂ) ಮತ್ತು ಎಡರಂಗ ತನ್ನ ವಿಜಯದ ಹಾದಿಯಲ್ಲಿ ಮುನ್ನಡೆದಿದೆ.

ಪಶ್ಚಿಮ ಬಂಗಾಳದಲ್ಲಿ ಸತತವಾಗಿ 23 ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಸಿಪಿಐ(ಎಂ) ನೇತೃತ್ವದ ಎಡರಂಗವನ್ನು ಸೋಲಿಸಬೇಕೆಂಬ ಕನಸು ಕಾಣುತ್ತಿರುವ ಬಿಜೆಪಿ-ತೃಣಮೂಲ ಪಕ್ಷಗಳಿಗೆ ಹಿನ್ನಡೆಯಾಗಿದೆ. ತನ್ನನ್ನು ತಾನೇ ಪರ್ಯಾಯವೆಂದು ಹಣೆ ಪಟ್ಟಿ ಹಚ್ಚಿ ಕೊಂಡಿದ್ದ ಈ ಪಕ್ಷಗಳಿಗೆ ಹೀನಾಯ ಸೋಲುಂಟಾಗಿದ್ದು ನಗರ ಸಭೆ ಚುನಾವಣೆಗಳಲ್ಲಿ 3ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಮಧ್ಯಮ ವರ್ಗ ನೌಕರರ ಮಧ್ಯ ಹಾಗೂ ದುಡಿಯುವ ಜನರ ಅದರಲ್ಲೂ ಬಡ ವಿಭಾಗದ ಬೆಂಬಲವನ್ನು ಮುಂದುವರಿಸಿಕೊಂಡ ಎಡರಂಗ ನಗರ ಸಭೆ ಮತ್ತು ಪಂಚಾಯತ್ ಉಪ ಚುನಾವಣೆಗಳಲ್ಲಿ ಭರ್ಜರಿ ಜಯಗಳಿಸಿದೆ. ಅಬ್ಬರದ ಅಪಪ್ರಚಾರವನ್ನು ಮುಂದುವರಿಸಿದ ಸ್ಥಳೀಯ ಪತ್ರಿಕೆಗಳ ಬರಹವನ್ನು ಸುಳ್ಳಾಗಿಸಿದೆ.

ತೀವ್ರ ಪ್ರತಿರೋಧದ ನಡುವೆ ಸಂದಜಯ: ಪಾನ್‌ಸ್ಕುರ ಲೋಕಸಭಾ ಉಪ ಚುನಾವಣೆ ಮತ್ತು ಮುಂದಿನ ವರ್ಷ ನಡೆಯಲಿರುವ ವಿಧಾನ ಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಬಿಜೆಪಿ ತೃಣಮೂಲ ಜೋಡಿಯು ಎಡರಂಗ ಅದರಲ್ಲೂ ಸಿಪಿಐ(ಎಂ) ವಿರುದ್ಧ ದೊಡ್ಡ ದಾಳಿಯನ್ನೇ ಹರಿಯ ಬಿಟ್ಟಿತ್ತು. ಮಿಡ್ನಾಪುರ ಜಿಲ್ಲೆಯ ಕೇಶ್‌ಪುರ್, ಪಿಂಗ್ಲಾ (ಇವು ಪಾನ್‌ಸ್ಕುರ ಲೋಕ ಸಭಾ ಚುನಾವಣಾ ಕ್ಷೇತ್ರದ ಅಡಿಯಲ್ಲಿ ಬರುತ್ತವೆ.) ಮತ್ತಿತರ ಪ್ರದೇಶಗಳಲ್ಲಿ ಸಿಪಿಐ(ಎಂ) ಬೆಂಬಲಿಗರ ಮನೆಗಳಿಗೆ ಬೆಂಕಿ ಹಚ್ಚಿ ಧಾಳಿನಡೆಸಿ, ಹತ್ತಾರು ಕಾರ್ಯಕರ್ತರನ್ನು ಕೊಲ್ಲಲಾಯಿತು. ನೂರಾರು ಅಭಿಮಾನಿಗಳು ಗಾಯಗೊಂಡರು.

ಕೆಲವೊಂದು ಭ್ರಷ್ಟ ಪೋಲೀಸ್ ಅಧಿಕಾರಿಗಳೊಂದಿಗೆ ಶಾಮೀಲಾದ ತೃಣಮೂಲ ಬಿಜೆಪಿ ಗೂಂಡಾಗಳು ಸುಳ್ಳು ಮೊಕದ್ದಮೆಗಳನ್ನು ಹಾಕಿ ಸಿಪಿಐ(ಎಂ) ಬೆಂಬಲಿಗರು ಊರು ಬಿಟ್ಟು ಹೋಗುವಂತೆ ಮಾಡಿದರು. ಇಷ್ಟೊಂದು ಧಾಳಿ ನಡೆಯುತ್ತಿದ್ದರೂ ಕೇಂದ್ರ ಸರಕಾರದ ಆರ್ಥಿಕ ನೀತಿಯ ಪರವಾದ ಪತ್ರಿಕೆಗಳು ತೃಣಮೂಲ ಬಿಜೆಪಿ ಜಯಗಳಿಸುವುದೆಂದು ಭವಿಷ್ಯ ನುಡಿದವು. ಪಟ್ಟಣ ವಾಸಿಗಳ ನಡುವೆ, ಮಧ್ಯಮ ವರ್ಗದ ಮಧ್ಯೆ ಎಡರಂಗವು ತನ್ನ ನೆಲೆಯನ್ನು ಕಳೆದು ಕೊಳ್ಳುತ್ತಿದೆ ಎಂದು ಸಾರಾಸಗಟಾಗಿ ಬಿತ್ತರಿಸಲಾಯಿತು. ಆದರೆ ನಗರ ಸಭೆಗೆ ನಡೆದ ಚುನಾವಣೆ ಹಾಗೂ ಪಂಚಾಯತ್ ಉಪ ಚುನಾವಣೆಗಳು ಇವೆಲ್ಲವನ್ನು

'ಸ್ವದೇಶಿ' ಸರ್ಕಾರದ ವಿದೇಶಿ ವಂಚನೆ

ಪುಟ 5 ರಿಂದ

ಮಂತ್ರಿಗಳು ಆದಾಯ ತೆರಿಗೆ ಕಾಯ್ದೆಯನ್ನು ಸಂಪೂರ್ಣವಾಗಿ ಧಿಕ್ಕರಿಸಿ ಬೊಕ್ಕಸಕ್ಕೆ ಎಷ್ಟೇ ನಷ್ಟವಾದರೂ ಲೆಕ್ಕಿಸದೆ, ಸರ್ಕಾರಿ ಸುತ್ತೋಲೆಯನ್ನು ಈ ಕಂಪನಿಗಳ ಪರವಾಗಿ ಹೊರಡಿಸಲು ತೋರಿದ ಕಾಳಜಿ, ಆತುರ ಅರ್ಥವಾಗಲು ಇನ್ನೇನು ಬೇಕು?

3000 ಕೋಟಿಗೂ ಹೆಚ್ಚು ವಂಚನೆ

ಭಾರತದಲ್ಲಿರುವ 521 ವಿದೇಶೀ ಸಾಂಸ್ಥಿಕ ಹೂಡಿಕೆದಾರ ಕಂಪನಿಗಳ ಒಟ್ಟು ಬಂಡವಾಳ ಹೂಡಿಕೆಯು ಸುಮಾರು 40,000 ಕೋಟಿ ರೂಗಳಿಗೂ ಅಧಿಕವಾಗಿದೆ. ಇದು ನಮ್ಮ ಷೇರು ಮಾರುಕಟ್ಟೆಯ ಮೇಲೆ ಗಣನೀಯ ಪ್ರಭಾವವನ್ನು ಬೀರುತ್ತಿದೆ.

ಈ ಕಾರಣಕ್ಕಾಗಿ ಭಾರತವು ಕಂಪನಿಗಳ ಅಲ್ಪಾವಧಿ ಲಾಭದ ಮೇಲೆ ಶೇ. 30 ರಷ್ಟು ದೀರ್ಘಾವಧಿ ಲಾಭದ ಮೇಲೆ ಶೇ. 10 ರಷ್ಟು ತೆರಿಗೆಯನ್ನು ವಿಧಿಸಿದೆ. ಇಂತಹ ತೆರಿಗೆಗಳನ್ನು ಎರಡು ಕಾರಣಕ್ಕೆ ಹಾಕಲಾಗಿದೆ. ಒಂದು ಕಾನೂನುಬದ್ಧವಾಗಿ ಬೊಕ್ಕಸಕ್ಕೆ ಆದಾಯ ಹೊಂದುವುದು, ಎರಡು, ಷೇರು ಮಾರುಕಟ್ಟೆಯನ್ನು ವಿಪರೀತ ಏರಿಳಿತಗಳಿಂದ ರಕ್ಷಿಸುವುದು.

ಆದರೆ ಮಾರಿಷಸ್ ಜೊತೆಗಿನ ವಾಜಪೇಯಿ ಸರಕಾರದ ಒಪ್ಪಂದದಿಂದಾಗಿ ಬೊಕ್ಕಸಕ್ಕೆ ಆದಾಯ ಮತ್ತು ಷೇರು ಮಾರುಕಟ್ಟೆ ರಕ್ಷಣೆ ಎರಡೂ ಇಲ್ಲವಾಗಿದೆ.

ಇದುವರೆಗೆ ಹೂಡಿಕೆ ಯಾಗಿರುವ 40 ಸಾವಿರ ಕೋಟಿ ರೂ ಬಂಡವಾಳವು ಶೇ. 80 ರಷ್ಟು ಲಾಭ ತಂದಿದೆ. ಅಂದರೆ 32 ಸಾವಿರ ಕೋಟಿ ರೂ. ಇದರ ಮೇಲೆ ಶೇ. 10 ರ ತೆರಿಗೆ ಎಂದರೆ ಸುಮಾರು 3200 ಕೋಟಿ ರೂ. ಯಶವಂತ ಸಿನ್ಹಾ ಮತ್ತು ವಾಜಪೇಯಿ ಸರ್ಕಾರ ದೇಶಕ್ಕೆ ವಂಚಿಸಿರು ವುದು ಈ ಹಣವನ್ನು.

ಸ್ವದೇಶೀ ಎಂಬ ವಿದೇಶೀ ಸೇವೆ

ಬಡತನದ ಬೇಗೆಯನ್ನು ತಾಳಲಾರದೆ ಜನ ತಮ್ಮ ಅಂಗಾಂಗಳನ್ನೇ ಮಾರಿಕೋಳ್ಳುತ್ತಿದ್ದಾರೆ. ಹಸಿವಿನ ನಿವಾರಣೆಗೆ ಆತ್ಮಹತ್ಯೆ ದಾರಿಗಳನ್ನು ಹಿಡಿಯುತ್ತಿ ದ್ದಾರೆ. ಭೀಕರ ಬರಗಾಲಕ್ಕೆ ತುತ್ತಾದ ಜನಕ್ಕೆ ಪರಿಹಾರ ನೀಡಲು ಕೇಂದ್ರ ಸರ್ಕಾರ ನಿರ್ಲಕ್ಷ್ಯವನ್ನು ತಾಳಿದೆ.

ಇಂತಹ ಸಂದರ್ಭದಲ್ಲಿ ಭಾರತದ ಕೋಟ್ಯಾಂತರ ಜನರ ಹಸಿವನ್ನು ಸ್ವಲ್ಪ ಮಟ್ಟಿಗಾದರೂ ನೀಗಿಸುತ್ತಿದ್ದ ರೇಷನ್ ವ್ಯವಸ್ಥೆಯನ್ನು ನಾಶ ಮಾಡಲು, ಅದಕ್ಕೆ ನೀಡುತ್ತಿದ್ದ ಸಬ್ಸಿಡಿಯಲ್ಲಿ 1100 ಕೋಟಿ ರೂಗಳನ್ನು ಕಡಿತ ಮಾಡಿದೆ. ಇದರ ಪರಿಣಾಮವಾಗಿಯೇ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದು.

ನಮ್ಮ ದೇಶದ ಬಡವರ, ಸಾಮಾನ್ಯ ಜನರ ಬದುಕಿಗೆ ಅನುಕೂಲವಾಗಿದ್ದ ಆಹಾರ ಪದಾರ್ಥಗಳಿಗೆ ಸಬ್ಸಿಡಿ ನೀಡಿಕೆಯಿಂದ ದೇಶಕ್ಕೆ ಕಷ್ಟ, ವಿದೇಶೀ ಜೂಜುಕೋರ ಬಂಡವಾಳ ದಾರರಿಗೆ 3000 ಕೋಟಿಗಳಿಗೂ ಹೆಚ್ಚು ತೆರಿಗೆ ವಿನಾಯಿತಿ ನೀಡಿಕೆಯಿಂದ ದೇಶಕ್ಕೆ ಸುಖ! ಬಿಜೆಪಿ ಕೇಂದ್ರ ಸರ್ಕಾರದ ಸ್ವದೇಶೀ ಪ್ರೇಮ ಈ ರೀತಿ ಇದೆ. ವಾಜಪೇಯಿಯವರ ಮುಂದಾಳತ್ವದಲ್ಲಿ ದೇಶ ಮಾರಾಟದ ಮಹಾನ್ ಕೆಲಸ ಯಾರನ್ನೂ ಲೆಕ್ಕಿಸದೆ ನಡೆದಿದೆ.

○

ಚರ್ಚ್‌ಗಳ ಮೇ

ಪುಟ 5 ರಿಂದ

ನೋಡಿದಾಗ ಸ್ಫೋಟಗೊಂಡಿದ್ದು ಕಾಣಿಸಿತು. ನಂತರ ಯಥಾರೀತಿ ಚರ್ಚ್‌ನ ಪಕ್ಕದಲ್ಲೇ ರಸ್ತೆಗೆ ಹೊಂದಿ ಇರುವ ಅಂಗಡಿತೆಗೆದಾಗ ಪಾತ್ರೆ, ಸಾಮಾನುಗಳು ಅದುರಿ ಒಂದು ಬದಿಗೆ ಬಿದ್ದಿದ್ದುಕಂಡುಬಂತು...."

ಈ ಸ್ಫೋಟದ ನಂತರ ಜನ ಸೇರುತ್ತಿದ್ದಂತೆ, ಚರ್ಚ್‌ನ ಆವರಣದಲ್ಲಿದ್ದ ಟೆಲಿಕಾಂ ಇಲಾಖೆಯ ಅಧಿಕಾರಿ(ಚರ್ಚ್‌ನ ಹಿಂದೆ ಟೆಲಿಕಾಂ ಎಕ್ಸ್‌ಚೇಂಜ್ ಇದೆ) ತಾವು ಸದಾ ನಿಲ್ಲಿಸುತ್ತಿದ್ದ ಕಾರನ್ನು ತೆಗೆದುಕೊಂಡು ಹೋಗಿದ್ದಾರೆ. ಆದರೆ ಕಾರು ನಿಲ್ಲಿಸಿದ್ದ ಜಾಗದಲ್ಲಿ ಟೋಪಾಜ್ ಬ್ಲೇಡಿನ ತಗಡಿನ ಡಬ್ಬವೊಂದು ಕಾಣಿಸಿಕೊಂಡು ಜನರಲ್ಲಿ ಕುತೂಹಲ ಹೆಚ್ಚಿಸಿದೆ. ನಂತರ ಸ್ಥಳಕ್ಕೆ ಬಂದ ಪೋಲೀಸರು ಇನ್ಸ್‌ಪೆಕ್ಟರ್ ಆ ಡಬ್ಬವನ್ನು ಕೆಳಗೆ ಮೇಲೆ ಆಡಿಸಿ ಕೊನೆಗೆ ವಯರ್ ಇರುವುದನ್ನು ತಿಳಿದು ಏನೋ ಬಾಂಬ್ ಇರಬೇಕು ಎಂದು ಅನುಮಾನಿಸಿದ್ದಾರೆ. ಅಲ್ಲಿಗೆ ಬಂದ ಡಿವೈಎಸ್‌ಪಿಯಂತಹ ಅಧಿಕಾರಿಗಳೂ ಇದನ್ನೇ ಮಾಡಿ ಕೊನೆಗೆ ಗುಲ್ಬರ್ಗದಿಂದ ಶ್ವಾನಪಡೆ, ಬಾಂಬ್ ನಾಶಕ ಪಡೆ ಮುಂತಾದ ಪಡೆಗಳಿಗೆ ಸುದ್ದಿ ತಲುಪಿಸಿ, ಆಗಮನಕ್ಕೆ ಕಾದು, ಜನಜಂಗುಳಿಯನ್ನು ದೂರ ಸರಿಸ ತೊಡಗಿದ್ದಾರೆ. ಇದಾದ ಕೇವಲ 20 ನಿಮಿಷಗಳಲ್ಲೇ ಅಂದರೆ ಸುಮಾರು 9.15ರ ಹೊತ್ತಿಗೆ ಆ ಡಬ್ಬವೂ ಸ್ಫೋಟಗೊಂಡು ಒಬ್ಬ ಪತ್ರಕರ್ತನಿಗೂ(ಮರಾಠಿ ಪತ್ರಿಕೆ 'ತರುಣ ಭಾರತ್' ವರದಿಗಾರ), ಇನ್ನೂ ಕೆಲವರಿಗೆ ಮೆಟಲ್‌ನ ಚೂರುಗಳು ಬಡಿದಿವೆ.

ಆಳವಾದ ಗಾಯವಾಗಿರುವ ಇಬ್ಬರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಒಂದು ವೇಳೆ ಕಾರು ಕದಲದೇ ಇದ್ದು, ಮೊದಲ ಸ್ಫೋಟದ ಕುತೂಹಲಕ್ಕೆ ಜನ ಹಾಗೂ ಪೋಲೀಸರೂ ಸೇರಿದ್ದರೆ ಈ ಬಾಂಬ್ ಸ್ಫೋಟಗೊಂಡಿದ್ದರೆ ಆಗಬಹುದಾದ ಪ್ರಾಣಹಾನಿ ಭೀಕರವಾಗಿರುತ್ತಿತ್ತು.

ಕಾಂಪೌಂಡಿನ ಆವರಣದಲ್ಲಿ ಸ್ಫೋಟಗೊಂಡಿರುವ ಜಾಗದಲ್ಲಿ ಮೂರು ಅಡಿ ಅಗಲದ ಕಾಲುಅಡಿಯಷ್ಟು ಆಳದ ಕುಣಿ ಏರ್ಪಟ್ಟಿದೆ. ಸಿಡಿದಿರುವ ಕೆಲವು ಲೋಹದ ತುಂಡುಗಳನ್ನು ಪೋಲೀಸರು ವಿಶ್ಲೇಷಣೆಗೆ ಕೊಂಡೊಯ್ದಿದ್ದಾರೆ. ಈ ಬಾಂಬ್‌ಗಳ ಸ್ವರೂಪದ ಬಗ್ಗೆ, ಇವು ನಾಡಬಾಂಬ್‌ಗಳೋ, ಟೈಂ ಬಾಂಬ್‌ಗಳೋ ಅಥವಾ ರಿಮೋಟ್ ನಿಯಂತ್ರಣದ ಬಾಂಬ್‌ಗಳೋ ಎಂಬ ಬಗ್ಗೆ ನಿಖರವಾಗಿ ಪೋಲೀಸ್ ಅಧಿಕಾರಿಗಳು ಏನೂ ಹೇಳುತ್ತಿಲ್ಲ. ಕನಿಷ್ಟ ಸ್ವಲ್ಪ ತುಂಡುಗಳೂ ಸಿಗದಂತೆ ಸ್ಫೋಟಗೊಂಡು ಉರಿದಿವೆ ಎನ್ನುತ್ತಾರೆ ಅವರು. ಆದರೆ ಅಲ್ಲಿನ ಪರಿಣಾಮಗಳನ್ನು ಗಮನಿಸಿದರೆ ಮೊದಲು ಸ್ಫೋಟಗೊಂಡ ಬಾಂಬ್ ಹೆಚ್ಚು ಶಕ್ತಿಶಾಲಿಯಾಗಿರುವುದರಲ್ಲಿ ಅನುಮಾನವಿಲ್ಲ. ತೀರಾ ಬಯಲಿನಲ್ಲೇ ಇದ್ದ ಎರಡನೇ ಬಾಂಬ್ ಬಗ್ಗೆ ಹೇಳುವುದು ಕಷ್ಟ.

ಈ ಘಟನೆಯ ನಂತರ ಬಿ.ಜೆ.ಪಿ

ಎಡರಂಗಕ್ಕೆ ವಿಶ್ವಾಸ-ಪೂರ್ಣ ವಿಜಯ

ಸುಳ್ಳಾಗಿಸಿವೆ.

'ಮಹಾ ಹೊಂದಾಣಿಕೆ' ಹೆಸರಿನಲ್ಲಿ ಹಲವಾರು ನಗರ ಸಭೆ ಮತ್ತು ಪಂಚಾಯಿತಿಗಳಲ್ಲಿ ಕಮ್ಯೂನಿಸ್ಟ್ ವಿರೋಧಿ ಶಕ್ತಿಗಳು ಒಂದು ಗೂಡಿ ಎಡರಂಗವನ್ನು ಸೋಲಿಸಲು ಪ್ರಯತ್ನ ಪಟ್ಟವು. ಆದರೆ ಸಾಧ್ಯವಾಗಲಿಲ್ಲ. ಮಧ್ಯಮ ವರ್ಗ ಕಾರ್ಮಿಕ ವರ್ಗದ ಕೇಂದ್ರವಾದ ಪಟ್ಟಣಗಳಲ್ಲೂ ರೈತರೇ ಪ್ರಧಾನ ವಾಗಿರುವ ಪಂಚಾಯಿತಿಗಳಲ್ಲಿ ಎಡರಂಗ ಜಯ ಭೇರಿ ಸಾಧಿಸಿದೆ ಕೆಳಗಿನ ಸೂಚಕವನ್ನು ಗಮನಿಸಿದರೆ, ನಗರ ಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ತೃಣ ಮೂಲ ಮತ್ತು ಬಿಜೆಪಿಯು ಎಲ್ಲವನ್ನು ಸೇರಿಸಿದರೂ (13+ 2+3)=23 ಆಗುತ್ತದೆ. ಇದು ಎಡರಂಗವು ಗೆದ್ದ (33+6) 39 ಮುನಿಸಿಪಾಲಿಟಿಗಳಿಗಿಂತ ತೀರಾ ಕಡಿಮೆ ಜಿಲ್ಲಾ ಪಂಚಾಯಿತಿ 8 ಸ್ಥಾನಗಳಲ್ಲಿ ಸಿಪಿಐ(ಎಂ) 6 ಮತ್ತು ಫಾರ್ವರ್ಡ್ ಬ್ಲಾಕ್ ಒಂದು ಸ್ಥಾನ ಗೆದ್ದಿದ್ದರೆ, ಕಾಂಗ್ರೆಸ್ ಬಿಜೆಪಿ ತೃಣಮೂಲ ಯಾವುದೇ ಸ್ಥಾನವನ್ನು ಗೆಲ್ಲಲಿಲ್ಲ.

ಕರ್ನಾಟಕವೂ ಸೇರಿದಂತೆ ದೇಶದೆಲ್ಲೆಡೆ ಬಿಜೆಪಿ ಹೀನಾಯವಾಗಿ ಸೋಲುತ್ತಿದೆ. ಸತತ 23 ವರ್ಷಗಳ ನಂತರವೂ ತನ್ನ ಇತಿಮಿತಿಯಲ್ಲಿ ಜನ ಸಾಮಾನ್ಯರಿಗೆ ಬಡವರಿಗೆ ಅವರ ಸಮಸ್ಯೆಗಳಿಗೆ ಸ್ಪಂಧಿಸುತ್ತಿರುವ ಸಿಪಿಐ(ಎಂ) ನೇತೃತ್ವದ ಎಡರಂಗಕ್ಕೆ ಕರ್ನಾಟಕದ ಪ್ರಗತಿಪರ ಶಕ್ತಿಗಳ ಪರವಾಗಿ ಐಕ್ಯರಂಗ ಅಭಿನಂದನೆ ಸಲ್ಲಿಸುತ್ತದೆ.

ನಗರ ಸಭೆ ಚುನಾವಣೆ

	1995	2000
ಚುನಾವಣೆ ನಡೆದ ಒಟ್ಟು ನಗರ ಸಭೆಗಳು		79
ಫಲಿತಾಂಶ ಘೋಷಣೆ		78
ಎಡರಂಗ ಬಹುಮತ ಪಡೆದ ನಗರ ಸಭೆ	39	33
ಎಡರಂಗ ಅತಿದೊಡ್ಡ ಗುಂಪಾಗಿ ಬಂದಿರುವುದು	4	6
ಕಾಂಗ್ರೆಸ್ ಬಹುಮತ ಪಡೆದ ನಗರಸಭೆ	32	13
ಕಾಂಗ್ರೆಸ್ ಅತಿದೊಡ್ಡ ಗುಂಪಾಗಿ ಬಂದಿರುವುದು	-	2
ತೃಣಮೂಲ-ಬಿಜೆಪಿ ಬಹುಮತ ಪಡೆದ ನಗರಸಭೆ	-	8
ಜಿ.ಎನ್.ಎಲ್.ಎಫ್. ಬಹುಮತಪಡೆದ ನಗರ ಸಭೆ	1	1

ಜಿಲ್ಲಾ ಪಂಚಾಯತ್		ತಾಲ್ಲೂಕು ಪಂಚಾಯತ್	
ಜಿ.ಪ.ಚುನಾವಣೆ ನಡೆದ ಸ್ಥಾನಗಳು	8	ತಾ.ಪ. ಫಲಿತಾಂಶ ಘೋಷಿತ ಸ್ಥಾನಗಳು	57
ಸಿಪಿಐ(ಎಂ)	6	ಸಿಪಿಐ(ಎಂ)	39
ಫಾರ್ವರ್ಡ್‌ಬ್ಲಾಕ್	1	ಆರ್‌ಎಸ್‌ಪಿ ಫಾರ್ವರ್ಡ್‌ಬ್ಲಾಕ್	8
ಎಡರಂಗ	7	ಎಡರಂಗ ಒಟ್ಟು	47
ಜೆ.ಕೆ.ಪಿ	1	ಕಾಂಗ್ರೆಸ್	4
ಬಿಜೆಪಿ-ತೃಣಮೂಲ	6		

ಪಂಚಾಯತ್

ಫಲಿತಾಂಶ ಘೋಷಿತಸ್ಥಾನಗಳು-	321	ಕಾಂಗ್ರೆಸ್	37
ಸಿಪಿಐ(ಎಂ)	176	ಬಿಜೆಪಿ-ತೃಣಮೂಲ	66
ಆರ್.ಎಸ್.ಪಿ. ಫಾರ್ವಡ್‌ಬ್ಲಾಕ್	30	ಪಕ್ಷೇತರರು	12
ಸಿಪಿಐ	30		
ಎಡರಂಗ ಒಟ್ಟು	206		

ಪನ್‌ಸ್ಕುರಾ: ಲೋಕಸಭಾ ಉಪಚುನಾವಣೆ

ಸಿಪಿಐ ಪಕ್ಷದ ಗೀತಾ ಮುಖರ್ಜಿಯವರು ಪ್ರತಿನಿಧಿಸಿದ್ದ ಪ.ಬಂಗಾಳದ ಪನ್‌ಸ್ಕುರಾ ಲೋಕಸಭಾ ಸ್ಥಾನ ಅವರ ಸಾವಿನಿಂದ ತೆರವಾಗಿತ್ತು. ಈ ಸ್ಥಾನಕ್ಕೆ ನಡೆದ ಉಪ ಚುನಾವಣೆಯಲ್ಲಿ ಸಿಪಿಐನಿಂದ ಸ್ಪರ್ಧಿಯಾಗಿದ್ದ ಗುರುದಾಸ್ ದಾಸ್‌ಗುಪ್ತಾರವರು 41000 ಮತಗಳ ಅಂತರದಿಂದ ಸೋತಿದ್ದಾರೆ. ತೃಣಮೂಲ್ ಕಾಂಗ್ರೆಸ್ ಸ್ಥಾನವನ್ನು ಪಡೆದುಕೊಂಡಿದೆ. ಕಾಂಗ್ರೆಸ್ ಅಭ್ಯರ್ಥಿ ಕೇವಲ 20,000 ಮತಗಳಿಸಿದ್ದಾರೆ.

ಮುಂದಿನ ವಿಧಾನಸಭಾ ಚುನಾವಣೆಗಳಲ್ಲಿ ಎಡರಂಗವನ್ನು ಶತಾಯುಗತಾಯು ಸೋಲಿಸಬೇಕೆಂದು ಅವಿರತ ಸಾಹಸ ಮಾಡುತ್ತಿರುವ ಅದಕ್ಕಾಗಿ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಬಾಗಿಯಾಗಲು ನಿರಾಕರಿಸಿದ್ದ ಮತ್ತು ಈಗ ರೈಲ್ವೆ ಮಂತ್ರಿ ಸ್ಥಾನವೇ ಬೇಕೆಂದು ತನ್ನ ಮಿತ್ರ ಪಕ್ಷ ಸಮತಾ ಪಕ್ಷದ ನಿತಿಶ್ ಕುಮಾರರಿಂದ ಅದನ್ನು ಕಸಿದುಕೊಂಡಿದ್ದ ಮಮತಾ ಬ್ಯಾನರ್ಜಿ ತಮ್ಮ ಉದ್ದೇಶ ಸಾಧನೆಗಾಗಿ ಎರಡು ಮಾರ್ಗದ ಕುತಂತ್ರವನ್ನು ರೂಪಿಸಿ ಹರಿಯಬಿಟ್ಟರು.

1972ರ ಫ್ಯಾಸಿಸ್ಟ್ ದಬ್ಬಾಳಿಕೆಯ ನಂತರ ಎಂದೂ ಇಲ್ಲದಷ್ಟು ಗುಂಡಾಗಿರಿ ತನ್ನ ಕೇಂದ್ರ ಮಂತ್ರಿ ಸ್ಥಾನವನ್ನು ಬಳಸಿಕೊಂಡು ಪನ್‌ಸ್ಕುರಾ ಕ್ಷೇತ್ರದ ಕೇಶವಪುರ ಪ್ರದೇಶದ ಅನೇಕ ಹಳ್ಳಿಗಳಲ್ಲಿ ನಿರಂತರವಾಗಿ ಮನೆ, ಗುಡಿಸಲುಗಳಿಗೆ ಬೆಂಕಿ ಹಚ್ಚುವುದು, ಲೂಟಿ ಕೊಲೆಗಳ ಹತ್ಯಾಕಾಂಡ ಇದರ ಮೂಲಕ ಇಡೀ ಪ್ರದೇಶದ ಜನತೆಯನ್ನು ಭಯದ ನೆರಳಲ್ಲಿಟ್ಟು ಅವರು ಮತದಾನದ ದಿನದಂದು ಮತಗಟ್ಟೆಗಳಿಗೇ ಬಾರದಿರುವಂತೆ ಮಾಡುವುದು, ಮತಗಟ್ಟೆಗಳನ್ನು ವಶಪಡಿಸಿಕೊಂಡು ರಿಗ್ಗಿಂಗ್ ನಡೆಸುವುದು. ಜಾತ್ಯಾತೀತತೆಯ ಬಗೆಗಿನ ಬೊಗಳೆಗಳನ್ನು ಕೈಬಿಟ್ಟು ಕಾಂಗ್ರೆ ಪಕ್ಷ ಅಲ್ಲಿ ತನ್ನ ಮತಗಳನ್ನು ಬಿಜೆಪಿ ಕೂಟದ ಅಭ್ಯರ್ಥಿಗೆ ವರ್ಗಾಯಿಸಿರುವುದರಿಂದಾಗಿ ಹಾಗೂ ಗೂಂಡಾಗಿರಿಯಿಂದ ಒಂದು ಪ್ರದೇಶದಲ್ಲಿ ಎಡರಂಗದ ಮತಗಳನ್ನು ಚಲಾಯಿಸಲಾಗದಂತೆ ಹತ್ತಿಕ್ಕುವುದರಿಂದಾಗಿ ತೃಣಮೂಲ ಕಾಂಗ್ರೆಸ್ ಗೆಲುವು ಪಡೆದಿದೆ. ಅರೆಫ್ಯಾಸಿಸ್ಟ್ ಹತ್ಯಾಕಾಂಡದ ಅನುಭವವಿರುವ ಪ.ಬಂಗಾಳದ ಜನರ ಪ್ರಜಾಸತ್ತೆಯು ಈ ಕಗ್ಗೊಲೆಯನ್ನು ಪ್ರತಿರೋಧಿಸುತ್ತಾರೆ. ಮುಂದೆ ಕಾದಿದೆ ಸಮರ ಜಾತ್ಯಾತೀತತೆ ಪ್ರಜಾಸತ್ತೆಯ ಶಕ್ತಿಗಳೊಂದುಕಡೆ ಫ್ಯಾಸಿಸ್ಟ್ ಕೋಮುವಾದಿ ಶಕ್ತಿಗಳೊಂದು ಕಡೆ.

ಒಂದು ಮಹಾ ಸಂಜೋತ್ - ಮಹಾಮೈತ್ರಿಯ ಹೆಸರಿನಲ್ಲಿ ಬಿಜೆಪಿ- ತೃಣಮೂಲ ಕಾಂಗ್ರೆಸ್ ಕಾಂಗ್ರೆಸ್ ಪಕ್ಷಗಳು ಒಟ್ಟಾಗಿ ಎಡರಂಗವನ್ನು ಎದುರಿಸುವುದು ಎಲ್ಲರ ಮತಶಕ್ತಿಯನ್ನು ಕೂಡಿಸುವುದು. ಇದಕ್ಕಾಗಿ ಇನ್ನಿಲ್ಲದ ಪ್ರಯತ್ನ ನಡೆಸಿದರು. ಸ್ವತಃ ಪ್ರಧಾನಿ ವಾಜಪೇಯಿ ಗೃಹ ಮಂತ್ರಿ ಅದ್ವಾನಿಯವರೇ ಕಾಂಗ್ರೆಸ್‌ಗೆ ಬಹಿರಂಗ ಕರೆ ನೀಡಿದರು. ಪ.ಬಂಗಾಳ ಕಾಂಗ್ರೆಸ್ ಅಧ್ಯಕ್ಷ ಘನಿಖಾನ್ ಚೌಧುರಿಗೇ ತಲೆತಿಕ್ಕಿ ಕಾಂಗ್ರೆಸ್‌ನ ಒಂದು ವಿಭಾಗವನ್ನು ಒಲಿಸಿಕೊಂಡರು. ಇವೆಲ್ಲದರ ನಡುವೆಯೂ ಪುರಸಭೆ ಹಾಗೂ ಪಂಚಾಯತ್ ಉಪಚುನಾವಣೆಗಳಲ್ಲಿ ಎಡರಂಗ ಜಯಶಾಲಿಯಾಗಿದ್ದು, ಹಾಗೂ ಕಾಂಗ್ರೆಸ್ ತೃಣಮೂಲ ಕಾಂಗ್ರೆಸ್ ಬಿಜೆಪಿ ಕೂಟವನ್ನು ಹಿಂದೆ ನೂಕಿ ಅನೇಕ ಪುರಸಭೆಗಳನ್ನು ಗೆದ್ದದ್ದು ಈ 'ಮಹಾಮೈತ್ರಿ' ಕಲ್ಪನೆಗೆ ದೊಡ್ಡ ಆಘಾತವಾಯಿತು.

ಈ ಮಹಾ ಮೈತ್ರಿಯನ್ನು ಮತ್ತೆ ಮೇಲೆತ್ತಲು ಪನ್‌ಸ್ಕುರಾದ ಚುನಾವಣೆಯ ಗೆಲುವು ಈಗ ಮತ್ತಷ್ಟು ಪ್ರಾಮುಖ್ಯತೆ ಪಡೆಯಿತು. ಕೇಂದ್ರದ ಒಬ್ಬ ಮಂತ್ರಿಯಾಗಿ ಒಂದು ಉಪಚುನಾವಣೆಗಾಗಿ ಇಡೀ ಪ್ರಚಾರದ ಅವಧಿಪೂರ್ತಿ ಅಲ್ಲಿಯೇ ಟೆಂಟ್ ಹಾಕಿದರು.

ಕಾಂಗ್ರೆಸ್ ಪಕ್ಷ ಅಭ್ಯರ್ಥಿಯ ಜೊತೆ ಕುತಂತ್ರ ನಡೆದಿರುವುದು ಒಂದು ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷವಾಗಿ ಅವರು ಪಡೆದಿರುವ ಮತದಲ್ಲಿಯೇ (ಕೇವಲ 20,000) ಎದ್ದು ಕಾಣುತ್ತದೆ.



ಮತದಾನದ ಸಂದರ್ಭದಲ್ಲಿ ಹಲ್ಲೆಗೊಳಗಾದ ಗುರುದಾಸ್ ಗುಪ್ತ.

ಆದರೆ ಎಲ್ಲರೂ ಒಟ್ಟು ಸೇರಿದರು ಗೆಲ್ಲಲು ಸಾಧ್ಯವಿಲ್ಲ ಎಂಬುದು ಮಮತಾ ಬ್ಯಾನರ್ಜಿಗೆ ಅರಿವಿತ್ತು. ಆದ್ದರಿಂದ ಅವರ ಎರಡನೆಯ ತಂತ್ರ 1972ರ ಅರೆಫ್ಯಾಸಿಸ್ಟ್ ಗೂಂಡಾಗಿರಿಯಲ್ಲಿ 1100ಜನ ಎಡ ರಂಗದ ಕಾರ್ಯಕರ್ತರನ್ನು ಬಲಿತೆಗೆದುಕೊಂಡ ಆ ಹತ್ಯಾಕಾಂಡದಲ್ಲಿ ತರಬೇತಾದ, ನಾಯಕತ್ವ ಸ್ಥಾನಕ್ಕೆ ಬಂದ ಈ ಗುಂಡೂರಾಯು ಎಫ್.ಎಂ.ಖಾನರಂತಹ ಕರ್ನಾಟಕದ ಗೂಂಡಾ ಬಳಗದ ಸಹಾಯಕಿ ಮಮತಾ ಬ್ಯಾನರ್ಜಿಗೆ ಎಡರಂಗದ ಮತಗಳು ಮತಪೆಟ್ಟಿಗೆಗೆ ಬೀಳದಂತೆ ತಡೆಯದೆ ಗೆಲುವಿಲ್ಲ ಎಂಬ ಅರಿವಿತ್ತು. ಅದಕ್ಕಾಗಿ ಎರಡನೆಯ ತಂತ್ರ.

ಕರ್ನಾಟಕದಲ್ಲಿ ಈ ವಾರ

ಪುಟ 3 ರಿಂದ

ಕ್ಷಣಾರ್ಧದಲ್ಲೇ ಮನೆಗಳನ್ನು, ಮಹಿಳೆ-ಮಕ್ಕಳನ್ನು ದಹಿಸುವುದು ಹೇಗೆ? ತಾನು ಕದ್ದು ತಿಂದು ಅಮಾಯಕರ ಮೂತಿಗೆ ಸವರಿ ಸತ್ಯವಂತನಂತೆ ತಪ್ಪಿಸಿಕೊಳ್ಳುವುದು ಮತ್ತು ಇತರರನ್ನೇ ಬಲಿಹಾಕಿ ಬಡಿಸುವುದು ಹೇಗೆ?.... ಎಂದೆಲ್ಲಾ ಪ್ರೊಫೆಸರ್‌ರವರು ಪರಿಣಾಮಕಾರಿಯಾಗಿ ಪಾಠ ಕಲಿಸಿದ ಕೀರ್ತಿಗೆ ಭಾಜನರಾಗಿದ್ದಾರೆಂದು ನಿವಾಳಿಸಿ ಅವರಿಗೆ ಅಭಿನಂದನಾ ಸಮಾರಂಭ ನಡೆಸೇ ಬಿಟ್ಟಿದ್ದಾರೆ. ಚಡ್ಡಿ ಪರಿವಾರದ ಕೈ.ಸೂರ್ಯನಾರಾಯಣ, ಸಚಿವ ಅನಂತಕುಮಾರ್ ಈ ನಡುವೆಯೇ ಬುದ್ದೀಜೀವಿ ಪೋಷಾಕಿನಲ್ಲಿ ಸೀಟ್ ಅಡ್ಜೆಸ್ಟ್ ಮಾಡಿಕೊಂಡು ಕುಳಿತ ಹಾಮಾ ನಾಯಕ್, ಭಟ್ಟರನ್ನು ಭರ್ಜರಿಯಾಗಿ ಹೊಗಳಿ ಅಟ್ಟಕ್ಕೇರಿಸಿದ್ದಾರೆ. ಅವರ ಮಾತುಗಳಿಗೆ ಅದೆಷ್ಟು ಕವಡೆ ಕಿಮ್ಮತ್ತು ಕೊಡಬೇಕು ಎಂಬುದೇನು ನಿಜ, ಆದರೆ ಮಾಜಿ ಪ್ರೊಫೆಸರ್ ಭಟ್ಟರು ಮಾತ್ರ ತಮ್ಮ ಚಡ್ಡಿ ಚತುರತೆ ಎಲ್ಲಾ ಬಳಸಿ 'ರಾಷ್ಟ್ರೀಯ ಕರ್ತವ್ಯ'ಗಳನ್ನು ನೆನಪಿಸುತ್ತಾ, ಮಾತನಾಡುತ್ತಿರುವಂತೆಯೇ 'ಎಡಪಂಥೀಯ ಬುದ್ದಿಜೀವಿಗಳ' ನೆನಪಾಗಿ, ಚೇಳು ಕಡಿದಂತೆ ಬೆಚ್ಚಿ ಬಿದ್ದು ಕೊಂಬು ಕಿತ್ತಂತೆ ಚೀರಾಡಿದ್ದು ಸಮಾರಂಭದ ವಿಶೇಷ ಕಳೆಯೇ(ಕಹಳೆ)ಸರಿ. ಆದರೆ ಕರ್ನಾಟಕದಲ್ಲಿ ಅಯೋಧ್ಯಾ, ಸುರತ್ಕಲ್ ಘಟನೆ ಮರುಕಳಿಸುವ, ಬಾಬಾಬುಡನ್‌ಗಿರಿ ಯಂತಹ ಕೋಮುಸೌಹಾರ್ದತಾ ಕೇಂದ್ರಗಳಿಗೆ ಬೆಂಕಿ ಹಚ್ಚುವ ಪ್ರಾಜೆಕ್ಟ್ ಬಗ್ಗೆ ಮಾತ್ರ ತುಟಿ ಬಿಚ್ಚದೆ ಅಜೆಂಡಾ ಬಚ್ಚಿಟ್ಟುಕೊಂಡು ಎದ್ದು ಹೋದದ್ದು ಮಾತ್ರ ಆಸ್ಫೋಟಕಾರಿ ಯಾಗಿದೆ. ಸ್ವದೇಶಿ, ರಾಷ್ಟ್ರೀಯತೆ, ಓಂ, ಸ್ವಸ್ತಿಕ್ ಎಂದೆಲ್ಲಾ ಬರೆದುಕೊಂಡ ಭಟ್ಟರು ಬಗಲು ಬ್ಯಾಗಿನಲ್ಲಿ ಬುಸುಗುಡುವ ಹಲವಾರು ಮಿಡಿನಾಗರಗಳು ಹೆಡೆಯಾಡುತ್ತಿರುವುದಂತೂ ನಿಜ.

...ಲೆ ಧಾಳಿ

ಕೊಕಟನೂರು, ಜಿಲ್ಲಾ ಪೋಲೀಸ್ ಸೂಪರಿಂಡೆಂಟ್ ಪ್ರತಾಪರೆಡ್ಡಿ, ಜಿಲ್ಲಾಧಿಕಾರಿ ಲಕ್ಷ್ಮಿನಾರಾಯಣ, ಸ್ಥಳಕ್ಕೆ ಭೇಟಿ ನೀಡಿ ವಾಪಸಾಗಿದ್ದಾರೆ. ಈ ಘಟನೆಯ ಬಗ್ಗೆ ಏನನ್ನೂ ಹೇಳಲು ಠಿಕಾಣಿ ಹೂಡಿರುವ ಪೋಲೀಸ್ ಅಧಿಕಾರಿಗಳು ಸಿದ್ಧರಿಲ್ಲ. 8ನೇ ತಾರೀಖಿನಂದೇ ಆಂಧ್ರ, ಗೋವಾಗಳಲ್ಲಿ ಚರ್ಚ್‌ಗಳಲ್ಲಿಯೂ ಎರಡು ಬಾಂಬ್‌ಗಳು ಸ್ಫೋಟಗೊಂಡಿರುವುದನ್ನು ಪ್ರಸ್ತಾಪಿಸಿ ಇದು ಯೋಜಿತ ಹಾಗೂ ವ್ಯವಸ್ಥಿತ ಮೂಲಕ ಯಾರೋ ಹೊರಗಿನ ಕ್ರಿಮಿನಲ್ ದುಷ್ಟ ಶಕ್ತಿಗಳು ಬಂದಿಲ್ಲಿ ಬಾಂಬ್ ಇಟ್ಟಿರಬೇಕು ಎನ್ನುತ್ತಾರೆ. ಆದರೆ ಯಾರಂಥ ನಿಮಗ ಗೊತ್ತಿಲ್ಲ ಸಾಹೆಬರೇ' ಅನ್ನುತ್ತಾರೆ. ಬಾಂಬ್ ಇಟ್ಟಿರಬಹುದಾದವರು ಕಾಂಪೌಂಡ್ ಹಾರಿ ಬಂದಿರಬಹುದು ಎಂಬ ಶಂಕೆ ಇದೆ. ನಡೆದಾಡಿದ ಹೆಜ್ಜೆಯ ವಾಸನೆಯಿಂದಲೇ ಅಪರಾಧಿಗಳನ್ನು ಹಿಡಿಯುವ 'ಮೂಸುವ ನಾಯಿಗಳು' ಆಗಮಿಸಿದವಾದರೂ ಅಲ್ಲೇ ಸುತ್ತಮುತ್ತ ಕಾಂಪೌಂಡಿನೊಳಗೆ ಮೂಸಿ ಏನೂ ತೋಚದೆ ಆಕಾಶ ನೋಡಿ, ಕಾಲು ಕಿತ್ತಿವೆ. ಅಂತೂ ಗುಪ್ತಾಚಾರ ವಿಭಾಗದ ಎಸ್.ಪಿ. ಒಳಗೊಂಡು ಊರಲ್ಲಿ ಬೀಡು ಬಿಟ್ಟಿದ್ದು ಚರ್ಚ್‌ನ ಫಾದರ್ ಜೊತೆಗೆ ಹಲವು ಸುತ್ತಿನ ಮಾತುಕತೆ ಮಾತ್ರ ತಪ್ಪದೇ ನಡೆಸಿದ್ದಾರೆ.

ನಮ್ಮ ನಿಯೋಗ ಚರ್ಚ್‌ನ ಫಾದರ್ ಹಾಗೂ ಸುತ್ತಲಿನ ನಾಗರೀಕರನ್ನು ಸಂದರ್ಶಿಸಿತು. ಚರ್ಚ್‌ನ ವಿಷಯದಲ್ಲಿ ಯಾರಿಗೂ ದೂರುಗಳಿಲ್ಲ, ಭಿನ್ನಾಭಿಪ್ರಾಯಗಳಿಲ್ಲ. ಫಾದರ್ ಫೀಟರ್ ಚರ್ಚ್‌ಗೆ ಬಂದು ಕೇವಲ ನಾಲ್ಕು ದಿನಗಳಾಗಿದ್ದು, ಹಿಂದೆ ಎಂದೂ ಯಾರೊಂದಿಗೂ ಸಮಸ್ಯೆಗಳು ಇಲ್ಲ ಎನ್ನುತ್ತಾರೆ. 'ನಾವು ಎಲ್ಲಾ ಛಲೋ ಇದ್ದೀವ್ರಿ, ಅವರ ಪೂಜೆ ಅವರು ಮಾಡ್ಕೋತಾರೆ, ನಮ್ಮದು ಇಲ್ಲೆ ಅಂಬಾಭವಾನಿ ಗುಡಿಗೆ ನಾವು ಹೋಗ್ತೇವ್ರಿ. ಯಾರು, ಯಾಕ ಹಿಂಗ ಮಾಡಿದ್ರೋ, ಏನೋ" ಎಂದು ನಿಟ್ಟುಸಿರು ಬಿಡುತ್ತಾರೆ. ಹತ್ತಿರದ ಮನೆಯ ನಿಂಗವ್ವ. "ಸರ..... ನಾವು ಯಾರನ್ನು ಮೂರ್ಖರ ಮಾಡಿಲ್ರೀ' ಎನ್ನುತ್ತಾನೆ ಥಾಮಸ್.

ಸಿಪಿಐ(ಎಂ) ಪಕ್ಷದ ನಿಯೋಗವೇ ಮೊದಲ ಭೇಟಿ ನೀಡಿದ ರಾಜಕೀಯ ಪಕ್ಷವಾಗಿದೆ. ಇನ್ನೂ ಬೇರಾವುದೇ ಪಕ್ಷಗಳ ನಾಯಕರು 'ಆಗಮಿಸಿಲ್ಲ'

ಈ ಬಾಂಬ್ ಸ್ಫೋಟ ಅಲ್ಪಸಂಖ್ಯಾತರ ಹಕ್ಕುಗಳ ಮೇಲೆ ನಡೆದ ಉದ್ರೇಕಕಾರಿ ಆಕ್ರಮಣವಾಗಿದೆ. ಅತ್ಯಂತ ಆತಂಕ ಹಾಗೂ ನೋವಿನಿಂದ ಈ ಘಟನೆಯ ಬಗ್ಗೆ ಪ್ರತಿಕ್ರಿಯಿಸುವ ಕ್ರಿಶ್ಚಿಯನ್ ಸಮುದಾಯದ ಜನರು ವಾಡಿಯಲ್ಲಿ ಇದೇ ರವಿವಾರದಂದು, 12 ರ ಬಳಿಕ ಗುಲ್ಬರ್ಗದಲ್ಲಿಯೂ ಪ್ರತಿಭಟಿಸಲು ನಿರ್ಧರಿಸಿದ್ದಾರೆ. ಈ ಪ್ರತಿಭಟನೆಗೆ ಸಿಪಿಐ(ಎಂ) ಬೆಂಬಲ ಸೂಚಿಸಿದೆ. ಅಲ್ಲದೇ ವಿವಿಧ ಸಂಘಟನೆಗಳು, ಬುದ್ಧಿಜೀವಿಗಳು, ಧಾರ್ಮಿಕ ಮುಖಂಡರೂ ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೋರಿದ್ದು ಕೋಮು ಸೌಹಾರ್ದತಾ ಪರಂಪರೆ ಕಾಪಾಡಲು ಮುಂದಾಗಲು ವಿನಂತಿಸಲಾಗಿದೆ.

ರಾಮದುರ್ಗದಲ್ಲಿ ಬೆಳೆಯುತ್ತಿರುವ ಚಳುವಳಿ

ವಿ.ಪಿ. ಕುಲಕರ್ಣಿ

ರಾಮದುರ್ಗ ಬೆಳಗಾಂವಿ ಜಿಲ್ಲೆಯ 10 ತಾಲೂಕುಗಳಲ್ಲಿ ಒಂದಾಗಿದ್ದು ಸುಮಾರು 30,000 ಜನಸಂಖ್ಯೆ ಹೊಂದಿದೆ. ಹಿಂದೆ 1939 ರಲ್ಲಿ ಇಲ್ಲಿಯ ಸಂಸ್ಥಾನಿಕನ ದಬ್ಬಾಳಿಕೆ ವಿರುದ್ಧ ನಡೆದ ವಿರೋಚಿತ ಹೋರಾಟ ಇಡೀ ದೇಶದ ಗಮನವನ್ನೇ ಸೆಳೆದಿತ್ತು. ಈ ಹೋರಾಟದಲ್ಲಿ 12 ಜನರನ್ನು ಗಲ್ಲಿಗೇರಿಸಲಾಗಿತ್ತು.

ಈ ಹೋರಾಟದ ನಂತರ ರಾಮದುರ್ಗದಲ್ಲಿ ಯಾವುದೇ ಜನಪರ ಹೋರಾಟ ನಡೆದಿರಲಿಲ್ಲ. ಎಡ ಪಕ್ಷಗಳ ಪರಿಚಯವಂತೂ ಇರಲೇ ಇಲ್ಲ.

SFI ಆರಂಭ

1985 ರ ಆರಂಭದಲ್ಲಿ ಸಾಮೂಹಿಕ ಸಂಘಟನೆ ಕಟ್ಟಲು ನಡೆಸಿದ ತೀವ್ರ ಪ್ರಯತ್ನದ ಫಲವಾಗಿ 1986 ರಲ್ಲಿ SFI ತಾಲೂಕು ಸಮಿತಿ ಆರಂಭಗೊಂಡಿತು. SFI ರಾಜ್ಯ ನಾಯಕರು ಮತ್ತಿತರರು 4-6 ಸಲ ರಾಮದುರ್ಗಕ್ಕೆ ಬಂದು ಸಹಕರಿಸಿದ್ದರಿಂದ ತಾಲೂಕು ಸಮಿತಿ ರಚಿತವಾಯಿತು. ಶೈಕ್ಷಣಿಕ ಸಮಸ್ಯೆಗಳೊಂದಿಗೆ ಇತರ ಹೋರಾಟಗಳಲ್ಲೂ SFI ಸಂಗಾತಿಗಳು ಪಾಲ್ಗೊಳ್ಳುತ್ತಿದ್ದಾರೆ. ಕಳೆದ ವರ್ಷ ಕಾಲೇಜಿನಲ್ಲಿ ವಂತಿಗೆ ವಿರುದ್ಧ ನಡೆದ ಹೋರಾಟ ಗಮನಾರ್ಹವಾದುದು ಇಂದಿನ SFI ರಾಜ್ಯ ನಾಯಕರು ಸಂಗಾತಿಗಳ ಮುತುವರ್ಜಿಯಿಂದ SFI ಸಕ್ರಿಯವಾಗಿದೆ. ಸುಮಾರು 800 ಸದಸ್ಯತ್ವವಿದೆ.

ವಸತಿ ರಹಿತರ ಸಂಘಟಣೆ

ರಾಮದುರ್ಗ ಪುರಸಭೆಯವರು ಕಸಚೆಲ್ಲಲು 1972 ರಲ್ಲಿ ಕೊಂಡುಕೊಂಡಿದ್ದ ಭಾಗ್ಯ ನಗರ ಎಂಬ ಜಾಗವನ್ನು ಉಪಯೋಗಿಸಿಕೊಳ್ಳಲಿಲ್ಲದ್ದರಿಂದ ಸುಮಾರು 80 ರ ದಶಕದಲ್ಲಿ ಇಲ್ಲಿ ಅನೇಕ ಬಡ ಜನರು ಮನೆ, ಗುಡಿಸಲು ಕಟ್ಟಿಕೊಂಡು ವಾಸ ಆರಂಭಿಸಿದ್ದರು. ಇಲ್ಲಿ ದೀಪ, ನೀರು ಇತ್ಯಾದಿ ಯಾವುದೇ ನಾಗರೀಕ ಸೌಲಭ್ಯಗಳು ಇರಲಿಲ್ಲ. ಸರಕಾರಕ್ಕೆ ಜನಪ್ರತಿನಿಧಿಗಳಿಗೆ ನೂರಾರು ಅರ್ಜಿಗಳನ್ನು ಬರೆದು ಬರೆದು ಸುಸ್ತಾಗಿದ್ದರು. ಮನೆಗಳನ್ನು ಕಿತ್ತೊಗೆಯುವ ಭೀತಿ ಸದಾ ಕಾಡುತ್ತಿತ್ತು.

1988 ರಲ್ಲಿ ಸತತ ಪ್ರಯತ್ನ ಮಾಡಿ ಈ ಜನರನ್ನು ಸಂಘಟಿಸಲಾಯಿತು. ಹಕ್ಕು ಪತ್ರ ಕುಡಿಯುವ ನೀರು, ವಿದ್ಯುತ್, ಪಡಿತರ ಕಾರ್ಡು ಮುಂತಾದವಕ್ಕೆ ಅನೇಕ ಹೋರಾಟಗಳನ್ನು ನಡೆಸಲಾಯಿತು. ಇಂದು ಈ ಪ್ರದೇಶ ರಾಮದುರ್ಗದ ಕೆಂಪು ಕೋಟೆ ಎಂದೇ ಹೆಸರಾಗಿದೆ. ಇಲ್ಲಿ ಸುಮಾರು 40 ಪಕ್ಷದ ಸದಸ್ಯರು ಅವರಲ್ಲಿ ಮೂವರು ಪಕ್ಷದ ಪ್ರಾದೇಶಿಕ ಸಮಿತಿ ಸದಸ್ಯರೂ ಇದ್ದಾರೆ.

1990 ರ ವರೆಗೆ ಪುರಸಭೆಯ ವ್ಯಾಪ್ತಿ ಎಂದೇ ಪರಿಗಣಿತವಾಗಿದ್ದ ಈ ಪ್ರದೇಶ ಆಗ ನಡೆದ ಪುರಸಭೆ ಚುನಾವಣೆಯಲ್ಲಿ ಪುರಸಭೆ ಹೊರಗಿದೆ ಎಂದು ಸಾರಲಾಯಿತು. ಪುರಸಭೆಗೆ ಭಾಗ್ಯ ನಗರದಿಂದ ಒಬ್ಬಿಬ್ಬರು ಕಮ್ಯೂನಿಸ್ಟರು ಬಂದುಬಿಟ್ಟರೇನು ಗತಿ? ಈ ಭೀತಿಯಿಂದ ನಗರದ ಪಟ್ಟಭದ್ರರು ಜನರಿಗೆ ಅವಕಾಶ ವಂಚಿಸಿದರು. ಈಗ ಭಾಗ್ಯನಗರ ಪ್ರದೇಶ ತುರುಮಾರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟಿದೆ. 1993 ರಲ್ಲಿ ನಡೆದ ಪ್ರಥಮ ಪಂಚಾಯತ್ ಚುನಾವಣೆಯಲ್ಲೂ ಇಲ್ಲಿಯ ಜನರಿಗೆ ಪ್ರಾತಿನಿಧ್ಯ ಸಿಕ್ಕದ ಹಾಗೇ ವ್ಯವಸ್ಥಿತ ಸಂಚು ನಡೆಸಲಾಯಿತು.

1998 ರಲ್ಲಿ ರಾಜ್ಯ ಚುನಾವಣೆ ಅಧಿಕಾರಿಗಳನ್ನು ಕಂಡು ಪರಿಸ್ಥಿತಿ ವಿವರಿಸಿ ವಾರ್ಡುಗಳನ್ನು ಸರಿಯಾಗಿ ವಿಂಗಡಿಸಲು ಸಾಧ್ಯವಾಯಿತು. ಫಲವಾಗಿ ಈ ಸಲದ ಪಂಚಾಯತಿ ಚುನಾವಣೆಯಲ್ಲಿ ಇಲ್ಲಿಂದ ಸ್ಪರ್ಧಿಸಿದ್ದ ಆರೂ ಜನ ಭಾರೀ ಬಹುಮತದಿಂದ ಆಯ್ಕೆಯಾಗಿದ್ದಾರೆ ಅಧ್ಯಕ್ಷ ಸ್ಥಾನವೂ ದೊರೆತಿದೆ.

ಪ್ರಾಂತ ರೈತ ಸಂಘ

ಪಕ್ಕದ ಸವದತ್ತಿ ತಾಲ್ಲೂಕಿನಲ್ಲಿ 1980 ರಲ್ಲಿ ನಡೆದ ನರಗುಂದ ರೈತ ಬಂಡಾಯದ ನಂತರ ಪ್ರಾಂತ ರೈತ ಸಂಘ ಸಕ್ರಿಯವಾಗಿತ್ತು. ಈಗ ಪಕ್ಷದ ಸೆಕ್ರೆಟಾರಿಯೇಟ್ ಸದಸ್ಯರಾಗಿರುವ ನಿತ್ಯಾನಂದ ಸ್ವಾಮಿ ಅವರು ಆಗ ಸವದತ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಕಪ್ಪಣ್ಣವರ ಮತ್ತಿತರ ಸಂಗಾತಿಗಳು ಅತಿಕ್ರಮಣ ರೈತರನ್ನು ಸಂಘಟಿಸಿ ಕೆಲವು ಹೋರಾಟ ನಡೆಸಿಕೊಂಡು ಬರಲಾಗಿತ್ತು.

ರಾಮದುರ್ಗದಲ್ಲಿ ರೈತ ಸಂಘದ ಚಟುವಟಿಕೆ 1985 ರಲ್ಲೇ ಆರಂಭಿಸಲಾಯಿತು. ಆಗ ಹತ್ತಿ ಬೆಲೆ ಕುಸಿತದ ಸಂದರ್ಭದಲ್ಲಿ ರೈತ ಸಂಘ ನಡೆಸಿದ ಹೋರಾಟ ಸ್ಮರಣೀಯ. ತಾಲೂಕಿನಲ್ಲಿ ಅರಣ್ಯಭೂಮಿ ಸಾಗುಮಾಡಿದ ರೈತರನ್ನು 1986 ರಿಂದ ಸಂಘಟಿಸಿ ಅನೇಕ ಹೋರಾಟಗಳನ್ನು ನಡೆಸಿ ಸಾಗುಮಾಡಿದ ಜಮೀನನ್ನು ರಕ್ಷಿಸಿಕೊಂಡು ಬರಲಾಗಿದೆ. ಗೋಮಾಳ ಹೆಚ್ಚುವರಿ ಭೂಮಿಯನ್ನು ಸಾಗುಮಾಡಿರುವ 1140 ಜನರಿಗೆ ಪತ್ರ ಕೊಡಲು ನಡೆಸಿರುವ ಸುಧೀರ್ಘ ಹೋರಾಟವಂತೂ ಜನಮನದಲ್ಲಿ ಹಸಿರಾಗಿದೆ. 1991 ರಲ್ಲಿ ಇವರಿಂದ ಫಾರ್ಮ್ ನಂ 50ನ್ನು ತುಂಬಿಸಲಾಗಿತ್ತು. ರಾಜ್ಯದ ಎಲ್ಲಾ ತಾಲೂಕುಗಳಲ್ಲೂ ಭೂ ಮಂಜೂರಾತಿ ಸಮಿತಿ ರಚಿಸಲಾಗಿದ್ದರೂ ಹೆಚ್ಚಿನಂಶ ಫಾರ್ಮ್ ನಂ.5ನ್ನು ನಾವು ತುಂಬಿಸಿದ್ದ ಮಾತ್ರಕ್ಕೆ ತಾಲೂಕಿನ ಶಾಸಕರು ರಾಮದುರ್ಗದಲ್ಲಿ ಭೂ ಮಂಜೂರಾತಿ ಸಮಿತಿಯನ್ನೇ ರಚಿಸಲಿಲ್ಲ. ಸಮಿತಿ ರಚಿಸುವಂತೆ 7 ದಿನ ಕುಲಕರ್ಣಿ ಆಮರಣ ಉಪವಾಸ ಸತ್ಯಾಗ್ರಹ ನಡೆಸಿದ್ದರಿಂದ ಪರಿಸ್ಥಿತಿ ಕಾವೇರಿ ಸತ್ಯಾಗ್ರಹ ಶಿಭಿರಕ್ಕೆ ಶಾಸಕರು ಬರುವುದು ಅನಿವಾರ್ಯವಾಗಿ ಕೊನೆಗೆ ಭೂ ಮಂಜೂರಾತಿ ಸಮಿತಿ ರಚನೆಯಾಗಲು ಸಾಧ್ಯವಾಯಿತು.

ಕೆಲವು ಪ್ರಕರಣಗಳನ್ನು 1992 ರ ಕೊನೆಗೆ ಮಂಜೂರು ಮಾಡಿ ಮುಂದೆ ಯಾವುದೇ ಕ್ರಮಕೈಗೊಳ್ಳದೇ ರಿಕಾರ್ಡ್ ರೂಂ ನಲ್ಲಿ ಬಿಸಾಡಲಾಗಿತ್ತು. 1995 ರಲ್ಲಿ ಇವನ್ನು ಹುಡುಕಿ ತೆಗೆದು ಮೇ 1,1996 ರಂದು 31 ಜನರಿಗೆ ಪತ್ರ ಕೊಡಿಸಲಾಯಿತು. ಇನ್ನಿತರ ರೈತರು ಸಾಗುಮಾಡಿರುವ ಜಮೀನುಗಳಿಗೆ ಆಕಾರ (ಕಂದಾಯ) ನಿಗದಿಯಾಗದಿದ್ದರಿಂದ ಜಮೀನುಗಳ ಸರ್ವೇ ಮಾಡಿಸಲು ಇಲಾಖೆಯುವರೊಟ್ಟಿಗೆ 4 ವರ್ಷ ಹೋರಾಟ ಮಾಡಲಾಯಿತು. ಕೊನೆಗೂ ಸರ್ವೆ ಮಾಡಿಸಿ ಆಕಾರ ನಿಗದಿ ಪಡಿಸಿ ಇದೇ ಮೇ 1 ರಂದು ತಹಶಿಲ್ದಾರರ ಮೂಲಕ ಪತ್ರ ಕೊಡಿಸಲಾಯಿತು.



ಬೀಡಿ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಧರಣಿ ಕುಳಿತಿರುವುದು

ಬೀಡಿ ಕಾರ್ಮಿಕ ಸಂಘಟನೆ

ರಾಮದುರ್ಗದಲ್ಲಿ ಬೀಡಿ ಉದ್ದಿಮೆಯಲ್ಲಿ ನೂರಾರು ಕಾರ್ಮಿಕರು ದುಡಿಯುತ್ತಿದ್ದಾರೆ. ಸಂಘಟನೆ ಇಲ್ಲದೇ ತೀವ್ರ ಶೋಷಣೆಗೆ ಒಳಗಾಗಿದ್ದರು. 1985 ರಲ್ಲಿ ಬೀಡಿ ಕಾರ್ಮಿಕ ಮುಖಂಡ ಕಾಂ। ದಸ್ತಗೀರಸಾಬ ಮತ್ತು ಸಿಐಟಿಯು ಮುಖಂಡ ಕಾಂ। ವಿ.ಜೆ.ಕೆ. ನಾಯರ್‌ರವರನ್ನು ರಾಮದುರ್ಗಕ್ಕೆ ಕರೆಯಿಸಿ ಸಂಘಟನೆಗೆ ಮಾಡಿದ ಪ್ರಯತ್ನ ವಿಫಲವಾಯಿತು. ಮುಸ್ಲಿಂ ಸಮುದಾಯದ ಪಟ್ಟಭದ್ರರು ಅನೇಕ ಕುತಂತ್ರ ನಡೆಸಿ ಸಂಘಟನೆಯಾಗಲು ಅವಕಾಶ ನೀಡಲಿಲ್ಲ.

ಸೂರ್ಯನ ಬೆಳಕನ್ನು ಕೈಯಿಂದ ಎಷ್ಟು ಹೊತ್ತಿನ ವರೆಗೆ ತಡೆಯಲು ಸಾಧ್ಯ? ಕೊನೆಗೂ ಸಮಯ ಬಂದೇ ಬಿಟ್ಟಿತು. ದೀಪಾವಳಿ ಹಬ್ಬದ ಸಮಯದಲ್ಲಿ ಬೋನಸ್ ನೀಡುವದು ಇಲ್ಲಿಯ ಸಂಪ್ರದಾಯ. ಹಣದ ಬದಲು ಒಂದು ಅಗ್ಗದ ಸೀರೆ ಅಥವಾ ನೀರಿನ ತಂಬಿಗೆ ಹೀಗೆ ಒಂದೊಂದು ಸಲ ಒಂದೊಂದು ವಸ್ತು ನೀಡುವ ಪದ್ಧತಿಯಿತ್ತು. 1991 ರ ನವೆಂಬರ್‌ನಲ್ಲಿ ಮೂವರು ಪಿಸ್ತೂಲು ಬೀಡಿ ಕಾರ್ಮಿಕರು ಹಣದ ರೂಪದಲ್ಲೇ ಬೋನಸ್ ಪಡೆಯುವ ಪಣತೊಟ್ಟರು. ಈ ಘಟನೆ ರಾಮದುರ್ಗದಲ್ಲಿ ಬೀಡಿ ಕಾರ್ಮಿಕ ಸಂಘಟನೆ ಆರಂಭವಾಗಲು ಕಾರಣವಾಯಿತು. ಧಾರವಾಡದ ಕಾಂ। ಎಂ.ಬಿ.ಕಟ್ಟಿ ಮತ್ತಿತರ ಸಂಗಾತಿಗಳು 3-4 ಸಲ ರಾಮದುರ್ಗಕ್ಕೆ ಭೇಟಿ ನೀಡಿ ಪ್ರೋತ್ಸಾಹಿಸಿದರು. ಸುಮಾರು ಈ 9 ವರ್ಷಗಳ ಅವಧಿಯಲ್ಲಿ ಕನಿಷ್ಟಕೂಲಿ, ಪ್ರಾವಿಡೆಂಟ್ ಫಂಡ್, ಬೋನಸ್ ಇತ್ಯಾದಿ ಸೌಲಭ್ಯಗಳಿಗೆ ಬೀಡಿ ಕಾರ್ಮಿಕರು ನಡೆಸಿರುವ ಹೋರಾಟಗಳು ಅಸಂಖ್ಯಾತ. ಇಂದು ಎಲ್ಲ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಿದೆ.



ಮೇ ದಿನದ ರ್‍ಯಾಲಿ

ವಿಲಾಸ ಬೀಡಿ ಎಂಬುದು ಇಲ್ಲಿಯ ಇನ್ನೊಂದು ಬೀಡಿ ಫ್ಯಾಕ್ಟರಿ. ಕಾರ್ಮಿಕ ಸಂಘಟನೆ ಎಂದರೆ ಕಾಲುಕಸ ಎಂದು ತಿಳಿದಿದ್ದ ನಿಪ್ಪಾಣಿಯ ಕುರುಬೆಟ್ಟ ಮನೆತನದವರು ಈ ಕಾರ್ಖಾನೆಯ ಮಾಲೀಕರು ಕೂಲಿ ಮತ್ತಿತರ ಯಾವುದೇ ಸೌಲಭ್ಯ ನೀಡಲು ಒಪ್ಪದೇ 1996 ಜೂನ್‌ನಲ್ಲಿ ಕಾರ್ಖಾನೆಯನ್ನೇ ಮುಚ್ಚಿಬಿಟ್ಟರು.

ಇದರ ವಿರುದ್ಧ ವಿಲಾಸ ಬೀಡಿ ಕಾರ್ಮಿಕರು ಎರಡೂವರೆ ವರ್ಷ ನಡೆಸಿದ ಹೋರಾಟ ರಾಜ್ಯದ ಬೀಡಿಕಾರ್ಮಿಕರ ಸಂಘಟನೆಯಲ್ಲಿ ಮೈಲುಗಲ್ಲಾಗಿದೆ. ತೀರಾ ಸಂಕಷ್ಟ ಅನುಭವಿಸಿದರೂ ಸಂಘವನ್ನು ಬಿಡದೆ ಕೊನೆಗೂ ಯಶಸ್ಸು ಸಾಧಿಸಿದ್ದು ಅಸಂಘಟಿತ ಕ್ಷೇತ್ರದ ಬೀಡಿ ಉದ್ದಿಮೆಯಲ್ಲಂತೂ ಅಪರೂಪದ ಘಟನೆಯಾಗಿದೆ. ಈ ಸಂದರ್ಭದಲ್ಲಿ ಔಷಧಿಗೆ ಹಣವಿಲ್ಲದೆ ಅನಾರೋಗ್ಯದಿಂದ ನಿಧನಳಾದ ರಮೇಕಾ ಯಾದವಾಡ ಎಂಬ ಕಾರ್ಮಿಕಳು ಸಾವಿನ ಹೊತ್ತಿನಲ್ಲೂ ತನ್ನನ್ನು ಭೇಟಿಯಾಗಲು ಬಂದ ಕಾರ್ಮಿಕರಿಗೆ ಸಂಘವನ್ನು ಬಲಪಡಿಸುವಂತೆ ತಿಳಿಸಿಯೇ ನಿಧನಳಾದಳು. ಈ ಘಟನೆ ನೆನಪಾದರೆ ಇಂದಿಗೂ ಹೃದಯ ತುಂಬಿ ಬರುತ್ತದೆ.

ಇಂದು ಬೀಡಿ ಕಾರ್ಮಿಕರ ಸಂಘಟನೆ ರಾಮದುರ್ಗದಲ್ಲಿ ಬಲಿಷ್ಠವಾಗಿದೆ. ಪ್ರತಿ ವರ್ಷ ದೀಪಾವಳಿ ಸಮಯದಲ್ಲಿ ಸಂಘದ ಕಛೇರಿಗೇ ಬಂದು ತಾವು ಪಡೆದ ಬೋನಸ್ ಹಣದಲ್ಲಿ 100ರೂ ಗಳನ್ನು ಕೊಟ್ಟು ಹೋಗುತ್ತಾರೆ (36 ರೂ ಸಂಘಧ ಫೀ ಮತ್ತು 64 ರೂ ಪಕ್ಷಕ್ಕೆ ದೇಣಿಗೆ) ಪಕ್ಷದ ಎಲ್ಲ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಾರೆ. ಪಕ್ಷದ ಕೆಲಸ ಕಾರ್ಯಗಳಿಗೆ ಬೀಡಿ ಕಾರ್ಮಿಕರು ನೀಡುವ ವಂತಿಗೆ ಚಟುವಟಿಕೆ ನಡೆಸಲು ಸಾಧ್ಯವಾಗಿದೆ.

ವಾಹನ ಚಾಲಕರ ಸಂಘ:

ಇಲ್ಲಿನ ಮುಸ್ಲಿಂ ಯುವಕರಲ್ಲಿ ಹೆಚ್ಚಿನವರು ಡ್ರೈವರುಗಳಾಗಿ ಕ್ಲೀನರುಗಳಾಗಿ ಕೆಲಸಮಾಡುತ್ತಿದ್ದಾರೆ. ವಾಹನಗಳ ಮಾಲೀಕರು ಮುಸ್ಲಿಮೇತರರು.

1988,89,90 ಈ ಅವಧಿ ದೇಶಾದ್ಯಂತ ಆರ್.ಎಸ್.ಎಸ್. ಮತ್ತು ವಿ.ಹೆಚ್.ಪಿ.ಗಳು ವಿಜೃಂಭಿಸುತ್ತಿದ್ದ ಅವಧಿ. ರಾಮದುರ್ಗದಲ್ಲಿ ಸಣ್ಣದಾಗಿ ಕಾರ್ಯನಿರ್ವಹಿಸುತ್ತಿದ್ದ ಕಮ್ಯೂನಿಸ್ಟ್ ಪಕ್ಷದ ಜಾತ್ಯಾತೀತ ನಿಲುವಿಗೆ ಆಕರ್ಷಿತರಾಗಿ ಈ ಡ್ರೈವರುಗಳಲ್ಲಿ ಕೆಲವರು ಸಂಘ ಕಟ್ಟುವ ಉದ್ದೇಶದಿಂದ ಕಾಂ। ಕುಲಕರ್ಣಿಯವರನ್ನು ಸಂಪರ್ಕಿಸಿದರು. ಸಂಘವನ್ನು ನೋಂದಾಯಿಸಲಾಯಿತು. ವೇತನ ಹೆಚ್ಚಳಕ್ಕೆ ಆಗ್ರಹಿಸಿ 3 ದಿನ ಎಲ್ಲಾ ವಾಹನಗಳೂ ಸ್ತಬ್ಧವಾಗಿ ಬಿಟ್ಟವು. ಕೊನೆಗೆ ತಹಶೀಲ್ದಾರರ ಸಮಕ್ಷಮ ಮಾತುಕತೆ ನಡೆದು ವೇತನ ಹೆಚ್ಚಳವಾಯಿತು. ಇಂದು ಆ ಯುವಕರಲ್ಲಿ ಕೆಲವರು ಸ್ವಂತ ವಾಹನ ಮಾಡಿಕೊಂಡಿದ್ದಾರೆ. ಸಂಘದ ಚಟುವಟಿಕೆ ಇಂದು ನಡೆಯುತ್ತಿಲ್ಲವಾದರೂ ಆ ಯುವಕರು ನಮ್ಮ ಚಳುವಳಿಯ ಜೊತೆಗಿದ್ದಾರೆ. ಹಿಂದೊಮ್ಮೆ ಕಾಂ। ಕುಲಕರ್ಣಿ ಅವರ ಮೇಲೆ ನಡೆದ ದೈಹಿಕ ಹಲ್ಲೆಯ ಸಂದರ್ಭದಲ್ಲಿ, ಈಗಿರುವ ಪಕ್ಷದ ಕಚೇರಿಯನ್ನು ರಕ್ಷಿಸಿಕೊಳ್ಳುವ ಹೋರಾಟದಲ್ಲಿ ಈ ಯುವಕರ ಪಾತ್ರ ಗಮನಾರ್ಹವಾದುದು. ಇವರಲ್ಲಿ ಕೆಲವರು ಪಕ್ಷದ ಸದಸ್ಯರೂ ಇದ್ದಾರೆ.

ಪಂಚಾಯತ್ ನೌಕರರ ಸಂಘಟನೆ

ತಾಲ್ಲೂಕಿನಲ್ಲಿ ಸುಮಾರು 35 ಪಂಚಾಯತ್‌ಗಳಿದ್ದು 150 ನೌಕರರಿದ್ದಾರೆ. 1995 ರ ತನಕ ಪಂಚಾಯತ್ ನೌಕರರ ಕೆಲವು ಪುಢಾರಿ ನೌಕರರು ಜಿಲ್ಲಾಮಟ್ಟದ ಸಂಘ ಮಾಡಿಕೊಂಡು ನೌಕರರಿಂದ ವಿಪರೀತ ಹಣ ಸುಲಿಗೆ ಮಾಡಿ ಸಂಘದ ಹೆಸರೆತ್ತಿದರೆ ನೌಕರರು ಜಿಗುಪ್ಸೆಗೊಳ್ಳುವಂತೆ ಮಾಡಿದ್ದರು.

1995ರ ಕೊನೆಯಲ್ಲಿ ಕಾಂ। ಮಾರುತಿ ಮಾನಪಡೆ ಅವರ ಸತತ ಒತ್ತಾಯದ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಕರೆದ ಸಭೆ ಅತ್ಯಂತ ಯಶಸ್ವಿಯಾಯಿತು. ರಾಜ್ಯಮಟ್ಟದಲ್ಲಿ ನಡೆದ ಹೋರಾಟ ಹಾಗೂ ಪದಾಧಿಕಾರಿಗಳ ಸತತ ಪ್ರಯತ್ನದ ನಂತರ ರಾಜ್ಯ ಮಟ್ಟದಲ್ಲಿ ಪಂಚಾಯತ್ ನೌಕರರಿಗೆ ವೇತನ ಶ್ರೇಣಿ ದೊರಕಿದೆ. ಈ ವೇತನ ಶ್ರೇಣಿಯನ್ನು ತಾಲೂಕಿನ ಎಲ್ಲಾ ಪಂಚಾಯತ್‌ಗಳಲ್ಲಿ ಸಮರ್ಪಕವಾಗಿ ಜಾರಿಗೆ ತರಲಾಗಿದೆ.

ಅಂಗನವಾಡಿ ನೌಕರರ ಸಂಘಟನೆ

ರಾಜ್ಯದಲ್ಲಿ ಅತೀ ಹೆಚ್ಚು ಅಂಗನವಾಡಿ ಕೇಂದ್ರಗಳಿರುವದು ಬೆಳಗಾವಿ ಜಿಲ್ಲೆಯಲ್ಲಿ. ರಾಮದುರ್ಗ ತಾಲೂಕು ಹೊರತುಪಡಿಸಿ ಉಳಿದ ತಾಲೂಕುಗಳಲ್ಲಿ ಸಂಘಟನೆ ಕಟ್ಟುವುದು ಸಾಧ್ಯವಾಗಿಲ್ಲ. 1996 ಅಕ್ಟೋಬರ್‌ನಲ್ಲಿ ಅಂಗನವಾಡಿ ನೌಕರರ ಸಂಘದ ರಾಜ್ಯ ಪ್ರಧಾನಕಾರ್ಯದರ್ಶಿ ವರಲಕ್ಷ್ಮಿ ಅವರನ್ನು ರಾಮದುರ್ಗಕ್ಕೆ ಕರೆಯಿಸಿ ಸಭೆ ನಡೆಸಿ ಸಂಘ ಕಟ್ಟುವ ಪ್ರಯತ್ನ ಯಶಸ್ವಿಯಾಯಿತು.

ಸಿಡಿಪಿಓ ದೌರ್ಜನ್ಯದ ವಿರುದ್ಧ, ಗ್ರಾಮಾಂತರ ಪಟ್ಟಭದ್ರರ ವಿರುದ್ಧ ಅನೇಕ ಯಶಸ್ವೀ ಹೋರಾಟ ನಡೆಸಲಾಗಿದೆ. ಸುಮಾರು 300 ನೌಕರರು ಸಂಘದ ಸದಸ್ಯರಾಗಿದ್ದಾರೆ. ಇತ್ತೀಚಿಗೆ ತಾಲೂಕಾ ಮಟ್ಟದ ಅಧ್ಯಯನ ಶಿಬಿರ ನಡೆಸಲಾಗಿದೆ.

ಮೇ ದಿನದ ಆರಂಭ

ಮೇ ದಿನಾಚರಣೆಯನ್ನು ರಾಮದುರ್ಗದಲ್ಲಿ ಆಚರಿಸಬೇಕೆನ್ನುವ 1986 ರಿಂದ ಕಂಡಿದ್ದ ಕನಸು 1992 ರಲ್ಲಿ ನನಸಾಯಿತು. 1992 ರಲ್ಲಿ ತಾಲೂಕಿನ ಭೂಮಂಜೂರಾತಿ ಸಮಿತಿ ರಚಿಸಲು ಒತ್ತಾಯಿಸಿ ಎಪ್ರಿಲ್ 26 ರಿಂದ ಮೇ 2 ರ ವರೆಗೆ ಕಾಂ। ಕುಲಕರ್ಣಿ ಆಮರಣ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಈ ಉಪವಾಸ ಸತ್ಯಾಗ್ರಹದಲ್ಲಿ ಭಾರೀ ಪ್ರಮಾಣದಲ್ಲಿ ರೈತರು ಸೇರಿದ್ದರು. ಈ ಸಲ ಮೇ ದಿನಾಚರಣೆ ಮಾಡಲೇ ಬೇಕೆಂದು ತೀರ್ಮಾನಿಸಲಾಯಿತು. ಪ್ರಥಮ ಮೇ ದಿನಾಚರಣೆ ಭಾರೀ ಯಶಸ್ವಿಯಾಗಿ ನಡೆಯಿತು. ಹಿರಿಯ ಮುಖಂಡರಾದ ಎನ್.ಕೆ. ಉಪಾಧ್ಯಾಯ ಅಥಿತಿಗಳಾಗಿ ಆಗಮಿಸಿದ್ದರು.

ಅಲ್ಲಿಂದೀಚೆ ಪ್ರತಿಸಲ ಮೇ ದಿನ ತಪ್ಪದೇ ನಡೆಸಲಾಗುತ್ತಿದೆ ಹಿಂದಿನ ದಿನವೇ ನಗರವನ್ನು ಬಾವುಟಗಳ, ತೋರಣ ಗಳಿಂದ ಸಿಂಗರಿಸಲಾಗುತ್ತದೆ.

ಇತಿಹಾಸದ ಪುಟಗಳಿಂದ

ಈ ಪುಸ್ತಕ ಎಲ್ಲಿ ಸಿಗುತ್ತದೆ?

ಕೃತಿ ರಾಬಿನ್‌ಸನ್ ಕ್ರೂಸೋ; ಕೃತಿಕಾರ ಡಾನಿಯೇಲ್ ಡಿಫೋ; ಆ ಪುಸ್ತಕ ಎಲ್ಲಿ ಸಿಗುತ್ತದೆ?

ಮೈಸೂರಿನಲ್ಲಿ ನನಗಿಂತ ಮೊದಲೆ ಎರಡು ಮೂರು ವರ್ಷಗಳಿಂದ ಇದ್ದ ಆ ನನ್ನ ಮಿತ್ರರು ಪಬ್ಲಿಕ್ ಲೈಬ್ರರಿಯಲ್ಲಿ ದೊರೆಯಬಹುದು ಎಂದರು. ಹಳ್ಳಿಯಿಂದ ಬಂದಿದ್ದ ನನಗೆ ಒಬ್ಬನೇ ದೊಡ್ಡ ಕಟ್ಟಡಗಳಿಗೆ ಪ್ರವೇಶಿಸುವುದೆಂದರೆ ದಿಗಿಲು. ಆ ಲೈಬ್ರರಿ ಎಲ್ಲಿದೆ ಅದೂ ತಿಳಿದಿರಲಿಲ್ಲ. ಆದ್ದರಿಂದ ಆ ಮಿತ್ರರನ್ನು ನನ್ನಲ್ಲಿಗೆ ಕರೆದೊಯ್ದು, ಪುಸ್ತಕ ತೆಗೆಸಿಕೊಡುವಂತೆ ಬೇಡಿಕೊಂಡೆ. ಏಕೆಂದರೆ, ಯಾರನ್ನು ಕೇಳಬೇಕು? ಹೇಗೆ ತೆಗೆದುಕೊಳ್ಳಬೇಕು? ಎಂಬುದೂ ಒಂದು ಸಮಸ್ಯೆಯಾಗಿತ್ತು ನನಗೆ.

ಕೃಷ್ಣರಾಜೇಂದ್ರ ಆಸ್ಪತ್ರೆಗೆ ಎದುರಿಗಿದ್ದ ಒಂದು ದೊಡ್ಡ ಕೆಂಪು ಕಟ್ಟಡದ ಉಪ್ಪರಿಗೆಗೆ ನನ್ನನ್ನು ಕರೆದೊಯ್ದರು.

ಎದುರಿನ ವಿಭಾಗದಲ್ಲಿ ಸ್ಟ್ಯಾಂಡ್‌ಗಳ ಮುಂದೆ ನಿಂತು ಪತ್ರಿಕೆಗಳನ್ನು ಓದುತ್ತಿದ್ದರು ಕೆಲವರು. ಮತ್ತೆ ಕೆಲವರು ಅಲ್ಲಿಯ [illegible]ಳಿಯಲ್ಲಿ ಹಾಕಿದ್ದ ದೊಡ್ಡ ಮೇಜಿನ ಸುತ್ತ ಇದ್ದ ಕುರ್ಚಿಗಳ ಮೇಲೆ ಕುಳಿತು ಮಾಸಪತ್ರಿಕೆಗಳನ್ನೋದುತ್ತಿದ್ದರು. ಅವರನ್ನೆಲ್ಲ ಹಾಯ್ದು ಒಳಗೆ ಹೋದೆವು. ನಾನು ಬೆರಗು ಬಡಿದಂತಾಗಿ ನಿಂತೆ, ಉನ್ನತವಾದ ಬೀರುಗಳಲ್ಲಿ, ಕನ್ನಡಿ ಬಾಗಿಲುಗಳ ಹಿಂದೆ ಸಾಲ್ಗೊಂಡು ನಿಂತಿದ್ದ ಗ್ರಂಥರಾಶಿಗಳ ಮುಂದೆ! ಆ ಗ್ರಂಥಗಳೊ ಎಂತೆಂತಹ ಬಣ್ಣದ ಕ್ಯಾಲಿಕೊ ರಟ್ಟುಗಳಿಂದ ಶೋಭಾಯಮಾನವಾಗಿ ಮನಮೋಹಿಸುತ್ತಿವೆ? ಅವುಗಳ ಹೆಸರುಗಳೋ ಚಿನ್ನದ ಅಕ್ಷರಗಳಲ್ಲಿ ರಂಜಿಸುತ್ತಿವೆ! ಇಂಗ್ಲಿಷ್ ಅಕ್ಷರಗಳು ಕವಾತುಮಾಡುವ ಸೈನಿಕರಂತೆ ಮಿಂಚುತ್ತವೆ. The poetical works of Tennysoni the Dramas Shakespeare Mailton's Paradise lost ಇತ್ಯಾದಿ, ಇತ್ಯಾದಿ, ಇತ್ಯಾದಿ, ಬುಡದಿಂದ ನೆತ್ತಿಯವರೆಗೆ, ನೋಡಿದಷ್ಟೂ ಸಾಲದು; ನೋಡಿದಷ್ಟೂ ಕಣ್ಣು ತಣಿಯದು ವಿಪುಲೈಶ್ವರ್ಯಮಯಿಯಾದ ಸಾಕ್ಷಾತ್ ತಾಯಿ ಸರಸ್ವತೀದೇವಿಯೆ, ಸೆರಗು ಓಸರಿಸಿ, ಸ್ವರ್ಣ ಕಲಶಸದೃಶಗಳಾದ ತನ್ನ ದುಗ್ಧಪೀನ ಪಯೋಧರಗಳನ್ನು ತನ್ನ ಮುಗ್ಧ ಕವಿಕಂದನ ಮುಂದೆ ಚಾಚಿ ನಿಂತಂತಿತ್ತು, "ಬಾ ಪೀಯುಷ ಪಾನಗೈ!" ಎಂದು.

ಪ್ರೇಮಿಯನ್ನೂ ಮೀರಿಸಿ ಓದನ್ನು ಪ್ರೇಮಿಸಿದ 'ಕುವೆಂಪು' ಓದು, ಹಲವು ರೀತಿಯ ಪುಸ್ತಕಗಳ ಓದು ತಮ್ಮನ್ನು ಆವರಿಸಿದ ಬಗೆಯನ್ನು ರೋಮಾಂಚಕಾರಿಯಾಗಿ ವರ್ಣಿಸಿದ್ದಾರೆ.

ನೆನಪಿನ ದೋಣಿಯಿಂದ
- ಕುವೆಂಪು

ರಾಬಿನ್‌ಸನ್ ಕ್ರೂಸೊ ಓದಲು ಮೊದಲು ಮಾಡಿದೆ. ಲೈಬ್ರರಿಯ ಕೊಟ್ಟಕೊನೆಯಲ್ಲಿ ಇತರರಾರೂ ಹೆಚ್ಚಾಗಿ ಬರದೆ ಇರುತ್ತಿದ್ದ ಜಾಗದಲ್ಲಿ ಒಂದು ಕುರ್ಚಿಯಮೇಲೆ ಮೇಜಿನ ಮುಂದೆ ಕುಳಿತು ಓದತೊಡಗಿದೆ. ಸ್ವಲ್ಪ ಹೆಚ್ಚು ಕಡಿಮೆ ನನಗೆ ಯಾವಾಗಲೂ ಆ ಜಾಗದ ಆ ಕುರ್ಚಿಯೇ ಸಿಗುತ್ತಿತ್ತು. ಬೆಳಿಗ್ಗೆ ಲೈಬ್ರರಿಗೆ ಹೋಗಲು ಆಗುತ್ತಿರಲಿಲ್ಲ. ಸ್ನಾನ ಊಟಮಾಡಿ ಹನ್ನೊಂದು ಗಂಟೆಗೆ ಸ್ಕೂಲಿಗೆ ಹೋಗಬೇಕಾಗುತ್ತಿತ್ತು. ಸಂಜೆ ಐದು ಗಂಟೆಗೆ ಕ್ಲಾಸ್ ಬಿಟ್ಟಕೂಡಲೆ, ಓಡುತ್ತ ಹೋಗಿ ರೂಮಿನಲ್ಲಿ ಸ್ಕೂಲ್ ಬುಕ್ಕಗಳನ್ನು ಎಸೆದು, ಲೈಬ್ರರಿಗೆ, ಹೆಚ್ಚು ಕಡಮೆ ಓಡುತ್ತಲೆ, ಹೋಗುತ್ತಿದ್ದೆ, ಇತರರು ಯಾರಾದರೂ ಆ ಪುಸ್ತಕವನ್ನು ನನಗಿಂತ ಮೊದಲೇ ತೆಗೆದುಕೊಂಡು ಬಿಟ್ಟಾರು ಎಂದು. ರಾತ್ರಿ ಒಂಬತ್ತು ಗಂಟೆಗೆ ಲೈಬ್ರರಿ ಮುಚ್ಚುತ್ತಿತ್ತು. ಅದರ ಸೂಚನೆಗಾಗಿ ಒಂದು ಹಗ್ಗಂಟೆ ಬಾರಿಸುತ್ತಿದ್ದರು. ಒಡನೆಯೆ ಓದುತ್ತಿದ್ದವರೆಲ್ಲರೂ ತಮ್ಮತಮ್ಮ ಪುಸ್ತಕಗಳನ್ನು ತೆಗೆದು ಕೊಂಡು ಹೋಗಿ ಗ್ರಂಥಪಾಲಕನ ಮೇಜಿನ ಮುಂದೆ ಇಟ್ಟು ಹೋಗುತ್ತಿದ್ದರು. ಆದರೆ ಸಾಮಾನ್ಯವಾಗಿ ರಾತ್ರಿ ಒಂಬತ್ತು ಗಂಟೆಯವರೆಗೂ ಯಾರೂ ಅಲ್ಲಿ ಓದುತ್ತಾ ಕುಳಿತಿರುತ್ತಿರಲಿಲ್ಲ. ಅದಕ್ಕೆ ಮುಂಚೆಯೆ ಎಲ್ಲರೂ ಹೋಗಿ ಬಿಟ್ಟಿದ್ದರೆ ಗ್ರಂಥಪಾಲರೂ ಅಟೆಂಡರೂ ಒಂಬತ್ತು ಗಂಟೆಗೆ ಮೊದಲೇ ಬಾಗಿಲು ಮುಚ್ಚಿಕೊಂಡು ಮನೆಗೆ ಹೋಗಿ ಬಿಡುತ್ತಿದ್ದರೆಂದು ತೋರುತ್ತದೆ. ಆದರೆ ನಾನು ಲೈಬ್ರರಿಗೆ ಹೋಗತೊಡಗಿದ ಮೇಲೆ ಅವರಿಗೆ ಆ ಸೌಕರ್ಯ ತಪ್ಪಿಹೋಯಿತು. ನಾನು ಒಂಬತ್ತು ಗಂಟೆಯಾಗಿ, ಅವರು ಗಂಟೆ ಬಾರಿಸಿದರೂ ಓದುತ್ತಲೆ ಕುಳಿತಿರುತ್ತಿದ್ದೆ. ಒಂದೆರಡು ದಿನ ಆ ಸಾಬಿ ಸ್ವಲ್ಪ ದಾಕ್ಷಿಣ್ಯ ತೋರಿಸಿ ಕಾದು, ನನ್ನ ಬಳಿಗೆ ಬಂದು ಸಕರುಣ ವಿನಯ ಧ್ವನಿಯಿಂದ ಹೊತ್ತಾಯ್ತು ಎಂದು ಹೇಳಿ ಪುಸ್ತಕ ಈಸಿಕೊಂಡು ಹೋಗುತ್ತಿದ್ದನು. ಆದರೆ ಕ್ರಮೇಣ ಆತನಿಗೆ ತಾಳ್ಮೆ ತಪ್ಪಿ, ಪುಸ್ತಕವನ್ನು ನನ್ನ ಕೈಯಿಂದ ಕಸಿದುಕೊಂಡೇ ಹೋಗಲು ಶುರುಮಾಡಿದನು. ಆದರೆ ನಾನು ಮಾತ್ರ ಅವನು ಕಸಿದುಕೊಳ್ಳುವವರೆಗೂ ಓದಿಯೆ ಓದುತ್ತಿದ್ದೆ!

ಅದನ್ನೂ ಉರಿವ ಕುತೂಹಲದಿಂದಲೇ ಓದಿಮುಗಿಸಿದೆ. ದೊಡ್ಡ ಹಲಸಿನ ಹಣ್ಣಿಗೆ ಚಳುಕಿಹಾಕಿ, ಅದರ ಯಾವುದೋ ಒಂದು ತೊಳೆಯ ಚೂರನ್ನು ರುಚಿನೋಡಲು ಕೊಟ್ಟಂತಾಯಿತು ನನಗೆ. ಆ ಚೂರಿನ ರುಚಿ ನಾಲಗೆಗೆ ಹತ್ತಿ, ಹಣ್ಣನ್ನೆ ಹುಡುಕತೊಡಗಿದೆ.

ರಜಾ ದಿನಗಳಲ್ಲಂತೂ ಬೆಳಿಗ್ಗೆ ಸಾಯಂಕಾಲ ಎರಡೂ ಹೊತ್ತೂ ಧಾವಿಸಿ ಹೋಗಿ ಓದುತ್ತಿದ್ದೆ. ಒಮ್ಮೆ ಬೆಳಿಗ್ಗೆ ಲೈಬ್ರರಿ ಬಾಗಿಲು ತೆಗೆಯುವ ಮುನ್ನವೇ ಹೋಗಿ ಬಾಗಿಲ ಬಳಿ ಕಾಯುತ್ತಾ ನಿಂತಿರುತ್ತಿದ್ದೆ. ಅಟೆಂಡರ್ ಮಹಾಶಯನು ಬಂದವನು ನಗುತ್ತಾ ಬಾಗಿಲು ತೆಗೆದು ಒಳಗೆ ಬಿಡುತ್ತಿದ್ದ. ಅವನ ನಗುವಿನಲ್ಲಿ 'ಯಾಕೆ ಇವನಿಗೆ ಈ ಪಿತ್ತ ಕೆದರಿದೆ? ಇಷ್ಟು ವರ್ಷದ ಸರ್ವಿಸ್ಸಿನಲ್ಲಿ ಯಾರನ್ನೂ ನೋಡಿಲ್ಲವಲ್ಲಾ ಹೀಗೆ ಓದುವ ಹುಚ್ಚು ಹಿಡಿದಿರುವವರನ್ನು? ಈ ಅಯ್ಯಂಗಾರಿಗೆ ಪಾಪ, ತಲೆಯಲ್ಲಿ ಏನೋ ಐಬಾಗಿರ ಬೇಕು! ಎಂಬ ಕನಿಕರದ ಛಾಯೆ ಇರುತ್ತಿತ್ತು.

ನಾನು ಸ್ಕೂಲು ಬಿಟ್ಟಕೂಡಲೆ ಇತರರಿಗಿಂತ ಮುಂಚೆ ಓಡಿ ಓಡಿ ಹೋಗಿ ಪುಸ್ತಕ ತೆಗೆದುಕೊಳ್ಳುತ್ತಿದ್ದರೂ ಒಂದೆರಡು ಸಾರಿ ನನಗಿಂತಲೂ ಮೊದಲೇ ಯಾರೋ ಪುಸ್ತಕ ತೆಗೆದುಕೊಂಡಿದ್ದೂ ಉಂಟು. ಆಗ ನನ್ನ ಗೋಳು ಹೇಳತೀರದು. ಆ ಪುಸ್ತಕ ತೆಗೆದುಕೊಂಡವನು ಎಲ್ಲಿ ಕೂತಿದ್ದಾನೆ ಎಂದು ಪತ್ತೆಹಚ್ಚಲು ಇಡೀ ಲೈಬ್ರರಿಯನ್ನೆ ಅಲೆಯುತ್ತಿದ್ದೆ, ಪ್ರತಿಯೊಬ್ಬರ ಹತ್ತಿರವೂ ನಿಂತೂ ನಿಂತೂ! ಕಡೆಗೆ ಪತ್ತೆಯಾಗುತ್ತಿತ್ತು. ಒಬ್ಬನ ಕೈಲಿ! ಆಗ ಅವನ ಮೇಲೆ ನನ್ನ ಮತ್ಸರ ಕೆರಳುತ್ತಿತ್ತು.

ಪುಟ 12 ಕ್ಕೆ

ಕಾದಂಬರಿ ಎಂದರಂತೂ ಒಂದು ತಿರಸ್ಕಾರವಿತ್ತು

ಟಾಲ್‌ಸ್ಟಾಯ್ ಪ್ರಸಿದ್ಧಿ ಈಗ ಹೆಚ್ಚಾಗಿ ನಿಂತಿರುವುದು ಆತನ ಕಾದಂಬರಿಗಳ ಮೇಲಾದರೂ ನನಗೆ ಆತನ ಪ್ರಥಮ ಪರಿಚಯವಾದದ್ದು A Confession and what I Believe (ಒಂದು ತಪ್ಪೊಪ್ಪಿಗೆ ಮತ್ತು ನನ್ನ ಶ್ರದ್ಧೆ) ಮತ್ತು ಸಂಪ್ರದಾಯ ಕ್ರೈಸ್ತ ಮತ ಮತ್ತು ಚರ್ಚುಗಳ ವಿಚಾರವಾಗಿ ಆತನು ಟೀಕಿಸಿ ಬರೆದಿರುವ ಆ ಲಘು ಪ್ರಬಂಧಗಳ ಮೂಲಕವಾಗಿಯೆ. ಕಾದಂಬರಿಗಳ ವಿಚಾರವಾಗಿ ಮೊದಲನಿಂದಲೂ ನಾನು ಅಶ್ರದ್ಧ. ಇಂಗ್ಲಿಷ್ ಸಾಹಿತ್ಯದಲ್ಲಿಯೂ ನಾನು ಕವಿತೆ ಮತ್ತು ನಾಟಕಗಳಿಂದ ಆಕರ್ಷಿತನಾದಂತೆ ಇತರ ಸಾಹಿತ್ಯ ಪ್ರಕಾರಗಳಿಂದ ಮೋಹಿತನಾಗಿರಲಿಲ್ಲ. ಕಾದಂಬರಿ ಎಂದರಂತೂ ಒಂದು ವಿಧವಾದ ತಿರಸ್ಕಾರವಿತ್ತು, ಅವುಗಳಲ್ಲಿ ಏನೂ ಗಾಂಭೀರ್ಯ ಗುರುತ್ವಗಳಿಲ್ಲ ಎಂಬ ಭಾವನೆಯಿಂದಾಗಿ ಆ ಭಾವನೆಯಿಂದ ನನ್ನನ್ನು ಪಾರುಮಾಡಿ ಕಾದಂಬರಿಗಳಲ್ಲಿಯೂ ಓದಲು ಅರ್ಹವಾದ ಗಂಭೀರ ಸತ್ವವು ಇವೆ ಎಂಬುದನ್ನು ತೋರಿಸಿಕೊಟ್ಟವನು ಟಾಲ್‌ಸ್ಟಾಯ್: 'ರಿಸರಕ್ಷನ್', 'ಅನ್ನಾ ಕೆರಿನಿನಾ' ಮತ್ತು ವಾರ್ ಅಂಡ್ ಪೀಸ್ ಇವುಗಳಲ್ಲಿ ಆತನ ಇತರ ಗಂಭೀರ ಬರವಣಿಗೆಗಳನ್ನು ಓದಿ, ಆತನಲ್ಲಿ ಗುರುಗೌರವ ಉಂಟಾಗಿದ್ದ ನನಗೆ, ಆತ ಕಾದಂಬರಿ ಗಳನ್ನೂ ಬರೆದಿದ್ದಾರೆ ಎಂಬುದನ್ನು ಕೇಳಿದಾಗ ತುಂಬಾ ಅಸಮಾಧಾನಪಟ್ಟುಕೊಂಡೆ, ಅಂಥಾ ಮಹನ್‌ವ್ಯಕ್ತಿಯೂ ಕೂಡ ಕಾದಂಬರಿ ಬರೆಯುವಂಥಾ ಕೀಳುಗೆಯ್ಮೆಗೆ ಕೈಹಾಕಿದನೆ ಎಂದು! ಆದರೂ ಆತನಲ್ಲಿ ಗೌರವ ಬೆಳೆದುಬಿಟ್ಟಿತ್ತಾದ್ದರಿಂದ ನೋಡೋಣ ಎಂದು 'ರಿಸರಕ್ಷನ್' (ಅದನ್ನು ಈಗ ಕನ್ನಡಕ್ಕೆ 'ಪುನರುತ್ಥಾನ' ಎಂಬ ಹೆಸರಿಟ್ಟು ಅನುವಾದ ಮಾಡಿದ್ದಾರೆ ದೇ.ಜ.ಗೌ. ಅವರು) ಎಂಬ ಶೀರ್ಷಿಕೆಯ ಆತನ ಕಾದಂಬರಿಗಳಲ್ಲಿಯೆ ಕಿರಿಯ ಗಾತ್ರದ್ದನ್ನು ಓದಲು ಆರಿಸಿಕೊಂಡೆ. ಓದಿದೊಡನೆಯೆ ಕಾದಬಂರಿಗಳ ಮೇಲಿದ್ದ ನನ್ನ ಪೂರ್ವಗ್ರಹ ಸ್ವರೂಪದ ಜುಗುಪ್ಸೆ ತಿರಸ್ಕಾರಗಳು ತಿರೋಹಿತವಾಗಿ, ಬರೆಯುವವನಲ್ಲಿ ಮಹತ್ತೂ ಮಹದ್ದರ್ಶನವೂ ಇರುವ ಪಕ್ಷದಲ್ಲಿ ಕಾದಂಬರಿಯೂ ಗುರುಗಂಭೀರವಾದ ಪೂಜ್ಯಕೃತಿಯೆ ಆಗಿಬಿಡಬಹುದು ಎಂಬುದು ಮನವರಿಕೆಯಾಯಿತು. ಆಮೇಲೆ ಜಗತ್ತಿನ ಮಹಾಕಾದಂಬರಿಗಳೆಂದು ಸುಪ್ರಸಿದ್ಧವಾಗಿರುವ ಫ್ರೆಂಚ್, ಇಂಗ್ಲಿಷ್, ರಷ್ಯನ್ ಭಾಷೆಯ ಹತ್ತಾರು ಬೃಹತ್ ಕೃತಿಗಳನ್ನು ಓದಿದೆ. ಮಾತ್ರವಲ್ಲದೆ ಮುಂದೆ ಕನ್ನಡದಲ್ಲಿ ನಾನೇ ಮೊತ್ತಮೊದಲನೆಯ ಮಹಾಕಾದಂಬರಿ 'ಕಾನೂರು ಹೆಗ್ಗಡಿತಿ'ಯನ್ನೂ ತರುವಾಯ 'ಮಲೆಗಳಲ್ಲಿ ಮದುಮಗಳು' ಎಂಬುದನ್ನೂ ಬರೆದೆ. ಅವುಗಳಲ್ಲಿರುವ ಹರವು, ವಿವರ, ವೈವಿಧ್ಯ, ಕಲೆಗಾರಿಕೆ ಎಲ್ಲವೂ ಟಾಲ್‌ಸ್ಟಾಯ್ ಜಟ್ಟಿಯ ಗರಡಿಯಲ್ಲಿ ತರಬಿಯತ್ತಾಗಿರುವುದನ್ನು ಕಾಣಬಹುದು, ಸುತೀಕ್ಷ್ಣಮತಿಯ ಓದುಗರು.

ಆಭರಣದ ಅಂಗಡಿಗೆ ಹೋದ ಬಡಹುಡುಗಿಯಂತಾಯ್ತು

ರವೀಂದ್ರನಾಥ ಠಾಕೂರರು ಯಾರು ಏನು ಎಂಬ ವಿಚಾರ ತುಸು ಪ್ರಸ್ತಾಪಿಸಿ, ಅವರಿಗೆ ಜಗತ್ತಿನ ಸರ್ವಭಾಷೆಗಳಲ್ಲಿಯ ಅತ್ಯಂತ ಶ್ರೇಷ್ಠ ಸಾಹಿತ್ಯಕೃತಿಗೆ ಲಭಿಸುವ 'ನೋಬೆಲ್' ಬಹುಮಾನ ಬಂದುದನ್ನೂ ಅದರಿಂದ ಭಾರತೀಯರಿಗೆ ಲೋಕದ ಗೌರವ ಸಂದು ಕೋಡು ಮೂಡಿದಂತಾಗಿರುವುದನ್ನೂ ಆಲಿಸುತ್ತಿದ್ದ ನಮ್ಮ ಬಾಲಕ ಹೃದಯಗಳ ಹೆಮ್ಮೆ ಪುಲಕಿತವಾಗುವಂತೆ ವರ್ಣಿಸಿದರು. ಅದುವರೆಗೆ ಯಾವ ಏಷಿಯಾದ ಸಾಹಿತಿಗೂ ಆ ಬಹುಮಾನ ದೊರೆತಿರಲಿಲ್ಲವೆಂದೂ, ಸಾಮಾನ್ಯವಾಗಿ ಪಾಶ್ಚಾತ್ಯರಿಗೆ ಮಾತ್ರ ದೊರೆಯುತ್ತಿತ್ತೆಂದೂ, ಏಷ್ಯಾಕ್ಕೆ ಅದು ದೊರೆತಿರುವುದು ಅದೇ ಮೊತ್ತಮೊದಲೆಂದೂ ನಮ್ಮ ತಲೆಗೆ ಕಿರೀಟ ತೊಡಿಸುತ್ತಿರುವರೆಂಬಂತೆ ಹೇಳಿದರು. ಮತ್ತೆ ಗೀತಾಂಜಲಿಯ ಕೆಲವು ಕವನಗಳನ್ನು ತುಂಬ ರಸವತ್ತಾಗಿ ಅವುಗಳ ಕಾವ್ಯತ್ವ ಮತ್ತು ಆಧ್ಯಾತ್ಮಿಕತ್ವ ಹೃದಯಸ್ಪಂದಿಯಾಗುವಂತೆ ವಾಚಿಸಿದರು. ಯಾವುದೋ ಒಂದು ರಹಸ್ಯಮಯ ಸುಮಧುರ ಭಾವಲೋಕಕ್ಕೆ ಒಂದು ಹೊಸ ಗವಾಕ್ಷ ತೆರೆದಂತಾಗಿ ನನ್ನ ಚೇತನ ರಸೋನ್ಮಾದಿಯಾಯಿತು. ಸಂಜೆ ಐದು ಗಂಟೆಗೆ ಸ್ಕೂಲು ಬಿಟ್ಟೊಡನೆ, ಗೀತಾಂಜಲಿ ಎಲ್ಲಿ ದೊರೆಯುತ್ತದೆ ಎಂಬುದನ್ನು ವಿಚಾರಿಸಿ ತಿಳಿದು ಆ ಸ್ಥಳದ ಪರಿಚಯವಿದ್ದ ಮಿತ್ರರೊಡನೆ ಆಗಿನ ಮರಿಮಲ್ಲಪ್ಪ ಹೈಸ್ಕೂಲಿನ ಎದುರಿನ ಒಂದು ಕಟ್ಟಡದಲ್ಲಿದ್ದ ಓ.ಟಿ.ಐ. ಬುಕ್ ಡಿಪೋಗೆ ಹೋದೆ.

ಆ ಬುಕ್ ಡಿಪೋ ನನಗೆ ಬರಿಯ ಪುಸ್ತಕದ ಅಂಗಡಿಯಾಗಿ ತೋರಲಿಲ್ಲ. ಮೂಗಿಗೆ ಬಂದ ಅದರ ವಾತಾವರಣದ ಪುಸ್ತಕ ವಾಸನೆಯಲ್ಲಿಯೆ ಏನೊ ಒಂದು ದಿವ್ಯ ಮಾದಕತೆ ಇತ್ತು. ಬೀರುಗಳಲ್ಲಿ ಸಾಲಾಗಿ ಜೋಡಿಸಿಟ್ಟಿದ್ದ ಕ್ಯಾಲಿಕೊ ರಟ್ಟಿನ ಚಿನ್ನದಕ್ಷರದ ದಪ್ಪ ದಪ್ಪ ಪುಸ್ತಕಗಳನೆಲ್ಲ ಕಂಡು ಝಗಝಗಿಸಿ ಹೊಳೆಯುವ ದೇವತಾಮೂರ್ತಿಗಳನ್ನು ನೋಡಿ ಭಕ್ತಿ ಭಾರದಿಂದ ಬಾಗುವ ಯಾತ್ರಿಕನಂತಾಯ್ತು ನನ್ನ ಚಿತ್ತಸ್ಥಿತಿ. ಅಲ್ಲಿದ್ದವೆಲ್ಲ ಬರಿಯ ಇಂಗ್ಲಿಷ್ ಪುಸ್ತಕಗಳೆ! ನನ್ನ ಗೌರವವನ್ನು ಸೂರೆಗೊಂಡು ಮೋಹಿಸುತ್ತಿದ್ದುವು ಪಂಕ್ತಿ ಪಂಕ್ತಿ! ಒಂದೊಂದರ ಶೀರ್ಷಿಕೆಯನ್ನೂ ನಿಂತೂ ನಿಂತೂ ಓದಿದೆ. ಪೂಜಾಕಾರ್ಯವೆಂಬಂತೆ ಚಿನ್ನದ ಬೆಳ್ಳಿಯ ವಜ್ರ ವೈಡೂರ್ಯದ ಆಭರಣದ ಅಂಗಡಿಗೆ ಹೋಗುವ ಬಡ ಹುಡುಗಿಯಂತಾದ ಮನಸ್ಸಿಗೆ ಅವೆಲ್ಲವನ್ನೂ ಒಟ್ಟಿಗೆ ಕೊಳ್ಳುವ ಆಸೆಯಾಯ್ತು ಮತ್ತೆ ನಿರಾಶೆಯಾಯ್ತು!

ಒಬ್ಬ ಪ್ರೇಮಿ ತನ್ನ ಪ್ರಿಯೆಯನ್ನು ಕೂಡ ಆ ರೀತಿ ಮುದ್ದಾಡಿ ಅಸ್ವಾದಿಸುತ್ತಾನೆಯೊ ಇಲ್ಲವೊ?

ಅಂಗಡಿಯವನು ಏನು ಬೇಕು ಎಂದು ಕೇಳಿದಾಗ 'ಗೀತಾಂಜಲಿ' ಎಂದು ಹೆಮ್ಮೆಯಿಂದಲೆ ಹೆಸರು ಹೇಳಿದೆ. ಹಸಿರು ಬೈಂಡಿನ ಒಂದು ತೆಳ್ಳನೆಯ ಪುಸ್ತಕ ತೆಗೆದುಕೊಟ್ಟರು. ಬೆಲೆ ಒಂದೆ ರೂಪಾಯಿ! ಪುಸ್ತಕ ಕೊಂಡು ರೂಮಿಗೆ ಬಂದೆ. ಓದಿದೆ ಮತ್ತೆ ಓದಿದೆ. ಒಬ್ಬ ಪ್ರೇಮಿ ತನ್ನ ಪ್ರಿಯೆಯನ್ನು ಕೂಡ ಆ ರೀತಿ ಮುದ್ದಾಡಿ ಅಸ್ವಾದಿಸುತ್ತಾನೆಯೊ ಇಲ್ಲವೊ? ಎಷ್ಟು ದಿನಗಳು ಅದರ ಮಾದಕತೆಯಲ್ಲಿ ಕಳೆದುವೋ? ದೈನಂದಿನ ಯಥಾಸ್ಥಿತಿಯ ವ್ಯಾಪಾರಗಳೇನೊ ನಡೆಯುತ್ತಿದ್ದುವ ಯಾಂತ್ರಿಕವಾಗಿ, ಮಿಂಯುವುದು, ಉಣ್ಣುವುದು, ಬಟ್ಟೆಬರೆ ಹಾಕಿಕೊಳ್ಳುವುದು, ಕ್ಲಾಸಿಗೆ ಹೋಗುವುದು ಇತ್ಯಾದಿ. ಆದರೆ ಚೇತನವೆಲ್ಲ 'ಗೀತಾಂಜಲಿ'ಯ ನಂದನದಲ್ಲಿ ನರ್ತಿಸಿ ನಲಿವ ಅಪ್ಸರೆಯಾಗಿತ್ತು.

ಆ ವರ್ಷವೆ ನನ್ನ ಪ್ರಜ್ಞೆಗೆ ನನಗರಿಯದಂತೆಯೆ ಮೊತ್ತಮೊದಲ ಕವಿ ಪ್ರತಿಭಾ ದೀಕ್ಷೆಯಾಯಿತೆಂದು ಭಾವಿಸುತ್ತೇನೆ. ಗೀತಾಂಜಲಿಯನ್ನು ಕೊಂಡಂತೆ ನನಗೆ ಬರುತ್ತಿದ್ದ ಹಿಂದುಳಿದ ಪಂಗಡದ ವಿದ್ಯಾರ್ಥಿವೇತನದ ಹಣದಲ್ಲಿ ಸ್ವಲ್ಪ ಭಾಗವನ್ನು ಪ್ರತಿ ತಿಂಗಳೂ ಪುಸ್ತಕ ಕೊಳ್ಳಲು ವಿನಿಯೋಗಿಸ ತೊಡಗಿದೆ. ಹಳೆ ಪುಸ್ತಕದ ಮಾರಾಟದ ಅಂಗಡಿಗಳಲ್ಲಿ (ಸೆಕೆಂಡ್ ಹ್ಯಾಂಡ್ ಬುಕ್‌ಸ್ಟಾಲ್) ಅರ್ಧ ಬೆಲೆಗೆ ಕಾಲುಬೆಲೆಗೆ ಸುಲಭ ಬೆಲೆಗೆ ಸುಪ್ರಸಿದ್ಧ ಸಾಹಿತ್ಯಕೃತಿಗಳನ್ನು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ! ನನ್ನ ಬಳಿ ಇನ್ನೂ ಇರುವ ಆ ಪುಸ್ತಕಗಳಲ್ಲಿ ಗೀತಾಂಜಲಿ, ರಾಬಿನ್‌ಸನ್ ಕ್ರೂಸೋ, ಷೇಕ್ಸ್‌ಪಿಯರ್ ನಾಟಕಗಳು (ವೆರೈಟೀ ಎಡಿಷನ್) ಪ್ಯಾರಡೈಸ್ ಲಾಸ್ಟ್ ಮುಂತಾದವು K.V. Puttappa, V Form, Wesleyan Mission Hqigh School, Mysore, ಎಂಬ ಲಿಖಿತವಿದೆ. ಅದನ್ನೋದಿದಾಗಲೆಲ್ಲ ನನ್ನ ಬೆನ್ನನ್ನು ನಾನೆ ತಟ್ಟಿಕೊಂಡಂತಾಗಿ ಅದು ಕೆಂಪು ಗರ್ವಾಹಂಕಾರವಲ್ಲ, ಬಿಳಿಯ ಹೆಮ್ಮೆ ಎಂದು ಸಮಾಧಾನ ತಂದುಕೊಳ್ಳುತ್ತೇನೆ.

ಮಹಿಳೆಯರ ದುಡಿಮೆ ಅಗತ್ಯವೇ? 'ಯಾರಿಗೆ ಸಾಲುತ್ತೆ ಸಂಬಳ' ನೀಡುವ ಉತ್ತರ

ಸ್ತ್ರೀ ಸ್ವಾತಂತ್ರ್ಯ, ಸಮಾನತೆ, ಹೆಣ್ಣು ಆರ್ಥಿಕವಾಗಿ ಸಬಲಳಾದರೆ ಮಾತ್ರ ಅವಳಿಗೆ ಆತ್ಮಗೌರವ ಸಿಗುವುದು, ಸಂಸಾರದ ಆರ್ಥಿಕ ಅಗತ್ಯತೆಯನ್ನು ಪೂರೈಸಲು ಹೆಣ್ಣು ಸಂಪಾದಿಸುವುದು ಅಗತ್ಯ ಹಾಗೂ ಅನಿವಾರ್ಯ ಎನ್ನುವ ವಿಚಾರಗಳನ್ನು ಹಾಸ್ಯದ ಲೇಪನದೊಂದಿಗೆ (ಕೆಲವೆಡೆ ಲೇಪನ ಹೆಚ್ಚಾಗಿದೆ) ಜನ ಸಾಮಾನ್ಯರಿಗೆ ಅದರಲ್ಲೂ ಸ್ತ್ರೀ ವಿಭಾಗಕ್ಕೆ ತಲುಪಿಸುವಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾಗಿದೆ ಎಂ.ಎಸ್.ರಾಜಶೇಖರ್ ನಿರ್ದೇಶನದ 'ಯಾರಿಗೆ ಸಾಲುತ್ತೆ ಸಂಬಳ'

ಖಾಸಗಿ ಮೋಟಾರ್ ಕಂಪನಿಯಲ್ಲಿ ಮೆಕಾನಿಕ್‌ಗಳಾಗಿ ಕೆಲಸ ಮಾಡುವ ಮೂರು ಜನ ಸ್ನೇಹಿತರು(ಶಶಿಕುಮಾರ್, ಮೋಹನ್, ಕರಿಬಸವಯ್ಯ) ಪುರುಷ ಪ್ರಧಾನ ಸಮಾಜ ವ್ಯವಸ್ಥೆಯ ಪ್ರತಿನಿಧಿಗಳು. ಎಲ್ಲರೂ ಒಂದೇ ಕಾಂಪೌಂಡಿನಲ್ಲಿ ವಾಸವಾಗಿರುತ್ತಾರೆ.

ಪ್ರತಿ ತಿಂಗಳು ನಾಲ್ಕು ಸಾವಿರ ಸಂಪಾದಿಸುವ ಇವರು ತಮ್ಮ ಕುಡಿತ, ಮಾಡಿದ ಸಾಲಕ್ಕೆ ಬಡ್ಡಿ, ಅನಗತ್ಯ ಖರೀದಿಗಳಿಗೆ ಅರ್ಧದಷ್ಟು ಸಂಬಳವನ್ನು ವ್ಯಯಿಸಿ ಉಳಿದರ್ಧದಲ್ಲಿ ಸಂಸಾರ ನಿರ್ವಹಣೆ ಸಾಧ್ಯವಾಗದೆ ಮತ್ತೆ ಮತ್ತೆ ಸಾಲ ಮಾಡುತ್ತಾ ಸಾಲದ ಸುಳಿಯಲ್ಲಿ ಸಿಲುಕಿ ಹೊರ ಬರಲಾಗದೆ ಚಡಪಡಿಸುವ, ಹೊರಬರುವ ಪ್ರಯತ್ನಗಳಲ್ಲಿ ವಿಫಲವಾಗಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತದೆ.

ಇಂತಹ ಕೆಳಮಧ್ಯಮ ವರ್ಗದ ಜನ ಈ ಸಂಕಷ್ಟಗಳಿಂದ ಪಾರಾಗುವ ಬಗೆ ಹೇಗೆ? ಇದರಲ್ಲಿ ಮಹಿಳೆಯ ಪಾತ್ರವೇನು? ಎಂಬ ಗುರುತರ ಪ್ರಶ್ನೆಗಳನ್ನು ಚಿತ್ರ ಒಳಗೊಂಡಿದೆ.

ಸಂಸಾರ ನಿರ್ವಹಣೆ ಕೇವಲ ಗಂಡಿನ ಜವಾಬ್ದಾರಿ ಮಾತ್ರವಲ್ಲ, ಅದರಲ್ಲಿ ಹೆಣ್ಣಿಗೂ



ಗಂಡಿನಷ್ಟೇ ಜವಾಬ್ದಾರಿಯಿದೆ. ತನ್ನ ಸಂಸಾರದ ಆರ್ಥಿಕ ಅಗತ್ಯತೆಯನ್ನು ಪೂರೈಸಲು ಹೆಣ್ಣು ಸಂಪಾದಿಸಬೇಕು. ಆದರೆ ಇಂದಿನ ಪುರುಷ ಪ್ರಧಾನ ಸಮಾಜ ಇದನ್ನು ಒಪ್ಪುವುದಿಲ್ಲ. ಶತಶತಮಾನಗಳಿಂದ ಹೆಣ್ಣನ್ನು ಕಾಲಕಸಕ್ಕಿಂತಲೂ ಕಡೆಯಾಗಿ ನಡೆಸಿಕೊಂಡು ಬಂದ ಈ ಸಮಾಜ ವ್ಯವಸ್ಥೆ, ಹೆಣ್ಣು ಗಂಡಿನ ಸಮಕ್ಕೆ ನಿಲ್ಲುವ, ಸಂಸಾರದಲ್ಲಿ ಗಂಡಿನಷ್ಟೇ ಪ್ರಾಮುಖ್ಯತೆ ಪಡೆಯುವುದನ್ನು ಹೇಗೆ ತಾನೆ ಜೀರ್ಣಿಸಿಕೊಳ್ಳುತ್ತವೆ. ಹೆಣ್ಣು ಆರ್ಥಿಕವಾಗಿ ಸಬಲಳಾಗುವುದು ಗಂಡಿನ ಅಸ್ತಿತ್ವಕ್ಕೇ ಅಪಾಯ(ಅವನ ದಬ್ಬಾಳಿಕೆಗೆ) ಹಾಗಾಗೀ ಹೇಗಾದರೂ ಅವರನ್ನು ತಮ್ಮ ಬಿಗಿ ಹಿಡಿತದಲ್ಲೇ ಇಟ್ಟುಕೊಳ್ಳಬೇಕೆಂದು ಬಯಸುವ ಪುರುಷ ಪ್ರಧಾನ ಸಮಾಜದ ವ್ಯವಸ್ಥೆಯ ಪ್ರತಿನಿಧಿಗಳು ತಮ್ಮ ಹೆಂಡತಿಯು ಕೆಲಸಕ್ಕೆ ಹೋಗುವುದನ್ನು ತಡೆಯಲು ತೀವ್ರಾನಿಸಿ ಶಕ್ತಿ ಮೀರಿ ಪ್ರಯತ್ನಿಸುತ್ತಾರೆ. ಅವರನ್ನು ಮನೆಯಿಂದ ಹೊರ ದೂಡುತ್ತಾರೆ. ಇದೆಲ್ಲದಕ್ಕೂ ಜಗ್ಗದ ಅವರು ತಮ್ಮ ನಿಲುವಿನಲ್ಲಿ ದೃಢವಾಗಿರುತ್ತಾರೆ. ಒಂದು ಸಂಸಾರದ ಸುಗಮ ಚಲನೆಗೆ ಹೆಣ್ಣು ಸಂಪಾದಿಸುವುದು ಅತ್ಯಗತ್ಯ. ಇದರಿಂದ ಗಂಡಿನ ಮರ್ಯಾದೆಗೆ ಏನೂ ಕುಂದು ಬರುವುದಿಲ್ಲ ಎಂಬ ಮಾಹಿತಿಯನ್ನು ಅಂತಿಮವಾಗಿ ಚಿತ್ರ ಪ್ರೇಕ್ಷಕರಿಗೆ ನೀಡುತ್ತದೆ.

ಇದು ಒಂದು ಉತ್ತಮ ಬೆಳವಣಿಗೆಯೇ. ಹೆಣ್ಣಿಗೆ ಸಮಾಜದಲ್ಲಿ ಒಂದು ಉತ್ತಮ ಸ್ಥಾನವನ್ನು ಕಲ್ಪಿಸುವ ವಿಚಾರವನ್ನು ಎಲ್ಲರೂ ಸ್ವಾಗತಿಸಲೇಬೇಕು. ಈ ನಿಟ್ಟಿನಲ್ಲಿ ಚಿತ್ರ ಎಲ್ಲರೂ ನೋಡಲೇಬೇಕಾದ ಚಿತ್ರವೆನಿಸಿಕೊಳ್ಳುತ್ತದೆ. ಆದರೆ ಇಂತಹ ಸೂಕ್ಷ್ಮ ವಿಚಾರವನ್ನು ಹಾಸ್ಯದ ಮೂಲಕ ಜನಸಾಮಾನ್ಯರ ಮುಂದಿಡುವ ಪ್ರಯತ್ನದಲ್ಲಿ ನಿರ್ದೇಶಕರ ಜಾಣ್ಮೆಯ ಕೊರತೆ ಎದ್ದು ಕಾಣುತ್ತದೆ.

ಚಿತ್ರದ ಮೊದಲರ್ಧ ಜವಾಬ್ದಾರಿಯುತವಾಗಿ ನಿರ್ದೇಶಿಸಲ್ಪಟ್ಟಿದೆ. ಎಲ್ಲೂ ಸನ್ನಿವೇಶಗಳೂ ನಾಟಕೀಯವಾಗದಂತೆ ಎಚ್ಚರಿಕೆ ವಹಿಸಲಾಗಿದೆ. ಸಂಭಾಷಣೆಯೂ ಚೆನ್ನಾಗಿ ಮೂಡಿ ಬಂದಿದೆ, ಹಾಸ್ಯ ಸನ್ನಿವೇಶಗಳೂ ಅಷ್ಟೇ. ಉಮಾಶ್ರೀ, ಕರಿ ಬಸವಯ್ಯನ ಜೋಡಿಯ ಹಾಸ್ಯ ಮಾತ್ರ ಅತಿರೇಕ ವೆನಿಸುತ್ತದೆ. ಕೊನೆಯರ್ಧದ ಹಾಸ್ಯ ಸನ್ನಿವೇಶಗಳು ಸಹ್ಯವಾಗಿಲ್ಲ. ಸಂಭಾಷಣೆ ಬಿಗಿ ಕಳೆದುಕೊಳ್ಳುತ್ತದೆ. ಹೆಣ್ಣು ಆರ್ಥಿಕವಾಗಿ ಸ್ವತಂತ್ರಳಾಗುವುದನ್ನು ಸಹಿಸದ ಗಂಡಿನ ಮನೋಭಾವವನ್ನು ಪ್ರತಿರೋಧಿಸುವ ರೀತಿ ಅತಾರ್ಕಿಕವಾಗಿದೆ. ತಮ್ಮ ದಾರಿಗೆ ಅಡ್ಡ ಬರುವ ಗಂಡಂದಿರನ್ನು ಮನ ಬಂದಂತೆ ಥಳಿಸುವ ಸನ್ನಿವೇಶ ನೋಡುಗರಿಗೆ ನಗೆ ತರಿಸುತ್ತದಷ್ಟೆ. ಇದು ಚಿತ್ರದ ಉದ್ದೇಶಕ್ಕೆ ಅನಿವಾರ್ಯವೇನಾಗಿರಲಿಲ್ಲ. ಈ ರೀತಿ ಅನಗತ್ಯ ಅತಾರ್ಕಿಕ ಹಾಸ್ಯ ಸನ್ನಿವೇಶಗಳು ಚಿತ್ರದ ಸೀರಿಯಸ್‌ನೆಸ್‌ನ್ನು ಹಾಳು ಮಾಡುತ್ತದೆ. ನಿರ್ದೇಶಕರು ಈ ಅಂಶವನ್ನು ಗಮನಿಸ ಬೇಕಿತ್ತು. ಹಾಸ್ಯದ ಅತಿರೇಕಕ್ಕೆ ಕಡಿವಾಣ ಹಾಕುವುದು ಅಗತ್ಯವಾಗಿತ್ತು.

ಇನ್ನೊಂದು ಮುಖ್ಯ ಅಂಶ, ಹೆಣ್ಣು ಕೆಲಸಕ್ಕೆ ಹೋಗಿ ಸಂಪಾದಿಸಬೇಕಾಗಿರುವುದು ಸಂಸಾರದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲಷ್ಟೇ ಎನ್ನುವಂತೆ ಚಿತ್ರಿಸಲಾಗಿದೆ. ಹೆಣ್ಣು ಕೆಲಸಕ್ಕೆ ಹೋಗುವುದರಿಂದ ಸಂಸಾರದ ಒಟ್ಟು ಆದಾಯ ಹೆಚ್ಚಾಗುವುದು ಮಾತ್ರವಲ್ಲ, ಹೆಣ್ಣಿಗೆ ಬಾಹ್ಯಪ್ರಪಂಚದ ಅರಿವಾಗುತ್ತದೆ, ಸಾಮಾಜಿಕ ತಿಳುವಳಿಕೆ ದೊರೆಯುತ್ತದೆ. ಒಟ್ಟಾರೆ ಅವಳ ವ್ಯಕ್ತಿತ್ವ ವಿಕಸನವಾಗುತ್ತದೆ. ಅಲ್ಲದೆ ಅವಳ ಪ್ರತಿಭೆ-ಸಾಮರ್ಥ್ಯದ ಸದುಪಯೋಗವಾಗುತ್ತದೆ - ಎನ್ನುವ ಎಲ್ಲಾ ಅಂಶಗಳೂ ಗೌಣವಾಗಿವೆ. ಮಹಿಳೆ ಸಮಾಜದ ಒಬ್ಬ ಸದಸ್ಯಳಾಗಿ ಸಮಾಜದ ಎಲ್ಲಾ ರಂಗಗಳಲ್ಲಿಯೂ ಭಾಗವಹಿಸಿ ತನ್ನ ಹಕ್ಕಾದ ಸಮಾನತೆಯನ್ನು ಪಡೆಯುವುದು, ಪ್ರಜಾಪ್ರಭುತ್ವದ ನಿಜವಾದ ತಿರುಳು ಮೂಡಿಬಂದಿಲ್ಲ.

ಚಿತ್ರದ ಎಲ್ಲಾ ನಟ-ನಟಿಯರು ತಮ್ಮ ಪಾತ್ರಗಳಿಗೆ ಜೀವ ತುಂಬಲು ಪ್ರಯತ್ನಿಸಿದ್ದಾರೆ. ಸುಹಾಸಿನಿ, ಶಶಿಕುಮಾರ್, ಅನಂತ್ ನಾಗ್, ಊರ್ವಶಿ ಇವರೆಲ್ಲ ತಮ್ಮ ಸಹಜ ಅಭಿನಯ ನೀಡಿದ್ದಾರೆ. ಉಳಿದವರು ಉತ್ತಮವಾಗಿ ನಟಿಸಲು ಪ್ರಯತ್ನಿಸಿದ್ದಾರೆ. ಉಮಾಶ್ರೀ-ಕರಿಬಸವಯ್ಯನ ಅಭಿನಯದಲ್ಲಿ ಮಾತ್ರ ಸಹಜತೆ ಕಾಣಸಿಗುವುದಿಲ್ಲ. ಇದು ಚಿತ್ರದ ಪ್ರಮುಖ ನ್ಯೂನತೆಗಳಲ್ಲೊಂದು.

ಈ ಎಲ್ಲಾ ಕೊರತೆಗಳಿದ್ದಾಗ್ಯೂ ಇತ್ತೀಚಿ ದಿನಗಳಲ್ಲಿ ಕನ್ನಡ ಚಿತ್ರರಂಗ ಕಂಡ 'ಪರವಾಗಿಲ್ಲ' ಎನ್ನುವಂತಹ ಕೆಲವೇ ಚಿತ್ರಗಳಲ್ಲಿ ಇದೂ ಒಂದು. ಏನೂ ತಿರುಳಿಲ್ಲದ ಕನ್ನಡ ಚಿತ್ರಗಳನ್ನು ನೋಡಿ ಬೇಸತ್ತ, ಮೌಲ್ಯಾಧಾರಿತ ಕನ್ನಡಾಭಿಮಾನಿಗಳಿಗೆ ಇದು ಸ್ವಲ್ಪ ಮಟ್ಟಿಗೆ ಸಮಾಧಾನವನ್ನು ನೀಡುತ್ತದೆ.

- ಗಂಗಾಧರ್



ಪುಸ್ತಕ ಎಲ್ಲಿ ಸಿಗುತ್ತದೆ?

ಪುಟ 11 ರಿಂದ

ಅವನ ಕೈಯಿಂದ ಪುಸ್ತಕ ಕಸಿದುಬಿಡುವಂತೆ ಮನಸ್ಸಾಗುತ್ತಿತ್ತು. ತನ್ನ ಪತಿವ್ರತೆಯಾದ ಪ್ರಿಯೆಯನ್ನು ಇನ್ನೊಬ್ಬನು ಎತ್ತಿಕೊಂಡು ಹೋಗಿ ಇಟ್ಟುಕೊಂಡಿದ್ದನ್ನು ಕಂಡರೆ ಆಗುವಂತಹ ರೋಷ ಉಕ್ಕುತ್ತಿತ್ತು. ಅವನಾದರೂ ಅದನ್ನು ನಿಷ್ಠೆಯಿಂದ ಓದುವುದಕ್ಕಾಗಿ ತೆಗೆದುಕೊಂಡಿದ್ದಾನೆಯೆ? ಅದೂ ಅಲ್ಲ. ಸುಮ್ಮನೆ ಲೈಬ್ರರಿಗೆ ಬಂದವನು ಯಾವುದಾದರೂ ಒಂದು ಪುಸ್ತಕ ತೆಗೆದುಕೊಳ್ಳ ಬೇಕಲ್ಲಾ ಎಂದು ಆಕಸ್ಮಾತ್ತಾಗಿ ಇದನ್ನೆ ತೆಗೆದುಕೊಂಡು ಬಿಟ್ಟಿದ್ದಾನೆ! ಏಕೆಂದರೆ ಆ ಪುಣ್ಯಾತ್ಮ ಮತ್ತೆಂದೂ ಆ ಪುಸ್ತಕ ತೆಗೆದುಕೊಳ್ಳಲಿಲ್ಲ. ಒಮ್ಮೊಮ್ಮೆ ಹಾಗೆ ತೆಗೆದು ಕೊಂಡವರು ಒಂದು ಹತ್ತು ನಿಮಿಷ ಓದಿದಂತೆ ಮಾಡಿ ಹಿಂತಿರುಗಿಸಿ ಬಿಡುತ್ತಿದ್ದುದೂ ಉಂಟು.. ಆಗ ನಾನು ಕಾದುನೋಡಿ, ನಾನು ತೆಗೆದು ಕೊಂಡಿರುತ್ತಿದ್ದ ಬೇರೆ ಪುಸ್ತಕವನ್ನು ಹಿಂದಿರುಗಿಸಿ, ಅಟೆಂಡರ್ ಮಹಾಶಯನಿಂದ ರಾಬಿನ್‌ಸನ್ ಕ್ರೂಸೋವನ್ನು ಈಸಿಕೊಳ್ಳುತ್ತಿದ್ದೆ. ಆತನೂ ತಿಂಗಳುಗಟ್ಟಲೆ ನನ್ನ ಪರಿಚಯವಾದ ಮೇಲೆ ನಾನೂ ಒಬ್ಬ ಆ ಸಾರ್ವಜನಿಕ ಗ್ರಂಥಾಲಯದ ಅವಿಭಾಜ್ಯ ಅಂಗವೆಂದು ಭಾವಿಸಿ ಬಿಟ್ಟು ನನಗೆ ವಿಶೇಷ ರೀತಿಯ ರಿಯಾಯಿತಿ ತೋರಿಸುತ್ತಿದ್ದ.

ಜ್ವಲಂತ ಕುತೂಹಲದಿಂದ ನಾನು ಓದುತ್ತಿದ್ದ ಆ ಪುಸ್ತಕವನ್ನು ನನಗಿಂತಲೂ ಮೊದಲೆ ಲೈಬ್ರರಿಗೆ ಬಂದವರು ತೆಗೆದುಕೊಳ್ಳುತ್ತಿದ್ದಾಗ ನನಗೆ ಅತೀವ ಮನಃಖೇದವಾಗುತ್ತಿದ್ದರೂ ಅದರಿಂದಲೂ ಒಂದು ಉಪಕಾರವಾಯ್ತು. ಅಂತಹ ಸಮಯಗಳಲ್ಲಿ ನಾನು ಗ್ರಂಥಾಲಯದ ಮಹೋನ್ನತ ಬೀರುಗಳಲ್ಲಿ ಅಂತರ ಅಂತರವಾಗಿ ಸಾಲುಗೊಂಡಿರುತ್ತಿದ್ದ ಇತರ ಪುಸ್ತಕಗಳನ್ನು ಸಾವಕಾಶಾವಲೋಕನ ಮಾಡುತ್ತಿದ್ದ ಗ್ರಂಥಲೋಕದ ವಿಸ್ತಾರ ವೈವಿಧ್ಯಗಳಿಗೆ ಬೆರಗಾಗುತ್ತಿದ್ದೆ.

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮ ನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ